PAIVALIKE GRAMA PANCHAYATH

9th 5 YEAR PLAN
DEVELOPMENT REPORT 1996

149-9

Paivalike Grama Panchayath



ಪೈವಳಿಕೆ ಗ್ರಾಮ ಪಂಚಾಯತ್



ಎಲ್ಲಾ ಅಭಿವೃದ್ಧಿ ಕಾರ್ಯಕ್ರಮಗಳ ಗುರಿ ಗ್ರಾಮ
ಸ್ವರಾಜ್ಯ ಆಗಿರಬೇಕು -ಗಾಂಧೀಜಿ

Sri M. Vishnu Bhat
Ex-President

Sri U. Krishna Shetty
Ex-President

Kum. Kamalakshi Shetty, B.Com.
Dist. Panchayat Member

Smt. Leelavathi K.B.
Block Panchayath **Member**

Paivalike Grama Panchayath

Administrative Committee

Achutha Chevar
President

Smt. Shailaja S. Bhat
Vice-President



Yadava Kumar C.H.
Standing Committee
Chairman

C.K. Chippar
Member



A.K. Abdulla Master
Member



K.V.L. Moodithaya
Member

Smt. Devaki L. Devadiga
Member

Smt. Vijayalaxmi N. Bhat
Member

Smt. Ramaranjini B. Bhandary
Member



K. Aitha
Member



B.M. Moosankunhi
Member



M. Jagannath
Secretary

DISTRICT RESOURCE PERSONS

Sri	P. IBRAIM
Sri	K. ABDULLA MASTER
Sri	SUDHAKARA N.
Sri	THOMAS CRASTHA
Sri	KOCHANNA SHETTY
Smt.	LEELAVATHI KB
Smt.	RAMARANJINI
Kum.	SHYLAJA
Sri	HAMEED KUNHALI
Sri	P. NARASIMHA BHAT
Sri	K. MONAPPA SHETTY
Sri	M. CHANDRA NAIK
Sri	RAMAKRISHNA PERVODI
Sri	PRASHANTHA BAYAR
Sri	ABDULA AZEEZ MARIKKE
Sri	K. MANJUNATHA SHETTY
Sri	ASHOKA N.
Sri	UMESH D.

ಪರಿವಿಡಿ

	ಪುಟ ಸಂಖ್ಯೆ
1. ಮುನ್ನುಡಿ	7
2. ಪಂಚಾಯತಿನ ಆಡಳಿತ ಚರಿತ್ರೆ	8
3. ಪೈವಳಿಕೆ ಪಂಚಾಯತಿನ ಸಾಮಾಜಿಕ ಮತ್ತು ಚಾರಿತ್ರಿಕ ಹಿನ್ನೆಲೆ	9
4. ಭೂ ಪ್ರಕೃತಿ ಮತ್ತು ಸಂಪನ್ಮೂಲಗಳು (ನದಿಗಳ Map)	11
5. ಕೃಷಿ ಮತ್ತು ನೀರಾವರಿ	16
6. ಮೃಗ.ಸಂರಕ್ಷಣೆ	22
7. ಕೈಗಾರಿಕೆ	26
8. ವಿದ್ಯಾಭ್ಯಾಸ (Map ಸಹಿತ)	30
9. ಕುಡಿಯುವ ನೀರು, ಆರೋಗ್ಯ	37
10. ಸಾರಿಗೆ, ಇಂಧನ	39
11. ವಸತಿ ಮತ್ತು ಸಾಮಾಜಿಕ ಕ್ಷೇಮ	44
12. ಸಂಸ್ಕೃತಿ	46
13. ಮಹಿಳಾ ಕ್ಷೇಮ	48
14. ಸಹಕಾರಿ ರಂಗ	51
15. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ	53
16. ಉಪ ಸಂಹಾರ	56

ಮುಖಪುಟ ಚಿತ್ರ ಪೊಸಡಿ ಗುಂಪೆ

ಮುನ್ನುಡಿ

ಭಾರತವು ಸ್ವತಂತ್ರವಾಗಿ ನಲುವತ್ತೊಂಭತ್ತು ವರ್ಷಗಳು ಸಂದು ಹೋದುವು. ಪ್ರಜೆಗಳಿಗಾಗಿ ಪ್ರಜೆಗಳಿಂದ ಆಳಲ್ಪಡುವ ಪ್ರಜಾಸರಕಾರವು ಚುನಾವಣೆಗೆ ಮಾತ್ರ ಮಹತ್ವ ನೀಡಿ ಅಧಿಕಾರಕ್ಕೆ ಬಂದು ಪ್ರಜಾಪ್ರಭುತ್ವದ ಮೌಲ್ಯವನ್ನೇ ಮರೆತು ಜನರ ಆಶೋತ್ತರಗಳನ್ನು ಈಡೇರಿಸಲಾಗಲಿಲ್ಲ. ಆಳಿದ ಅಧಿಕಾರಿಗಳೊಂದಿಗೆ ಆಡಳಿತೆಯಲ್ಲಿ ಬದಲಾವಣೆಗಳುಂಟಾದರೂ ಜನಕ್ಷೇಮ ಪದ್ಧತಿಯನ್ನು ಕಾರ್ಯಗತಗೊಳಿಸಲಾಗಲಿಲ್ಲ. ನಲುವತ್ತೇಳು ವರ್ಷಗಳ ಬಳಿಕವೇ "ಪಂಚಾಯತ್ ರಾಜ್" ನಿಯಮವನ್ನು ಜ್ಯಾರಿಗೆ ತರಲು ಸಾಧ್ಯವಾಯಿತು. ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಸಾಧಿಸುವರೆ ಪಂಚವಾರ್ಷಿಕ ಯೋಜನೆಗಳನ್ನು ಕೈಗೊಳ್ಳಲಾಯಿತು. ಎಂಟು ಪಂಚವಾರ್ಷಿಕ ಯೋಜನೆಗಳು ಕಳೆದು ಹೋದರೂ ಉದ್ದೇಶಿಸಿದ ಗುರಿಯನ್ನು ಮುಟ್ಟಲಾಗಲಿಲ್ಲ. ಜನರು ಆರ್ಥಿಕ ಮತ್ತು ಸಾಮಾಜಿಕವಾಗಿ ಹಿಂದುಳಿದವರು ಯೋಜನೆಗಳನ್ನು ಕೈಗೊಳ್ಳುವಲ್ಲಿ ಹಳ್ಳಿಯ ನೈಜ ಸ್ಥಿತಿಯ ಅನುಭವದ ಅಭಾವ, ಸಾಕಷ್ಟು ಅಧಿಕಾರವೋ ಉಚಿತ ಅನುಭವಗಳೋ ಇಲ್ಲದಿದ್ದು, ಉದ್ಯೋಗ ಸ್ಥರ, ವಿದಗ್ಧರ ಅಭಾವ, ಮತ್ತು ಅಭಿವೃದ್ಧಿಯ ಕುರಿತು ಸರಿಯಾದ ತಿಳುವಳಿಕೆ ಇಲ್ಲದಿದ್ದುದೇ ಮುಖ್ಯ ಕಾರಣಗಳಾಗಿವೆ.

ಜನರ ಅವಶ್ಯಕತೆಗಳನ್ನು ಪೂರೈಸಲು ತಕ್ಕುದಾದ ಯೋಜನೆಗಳನ್ನು ರೂಪಿಸುವಲ್ಲಿ ಅಧಿಕಾರವು ಅಧಿಕಾರಿಗಳ ಕೈಯಿಂದ ಸಾಮಾನ್ಯ ಜನತೆಯ ಕೈಗೆ ತಲುಪಬೇಕಾದುದು ಅನಿವಾರ್ಯ. ಅಧಿಕಾರ ವಿಕೇಂದ್ರೀಕರಣದ ಮೂಲಕ ನಿಯಮ ಬದ್ಧವಾದ ಯೋಜನೆಯ ಜವಾಬ್ದಾರಿಕೆಯನ್ನು ನಿರ್ವಹಿಸಲು ಸ್ಥಳೀಯ ಸಂಸ್ಥೆಯಾದ ಗ್ರಾಮ ಪಂಚಾಯತು ಸಮರ್ಥವಾಗುವಂತೆ ಕೇರಳ ಸರಕಾರವು ಜನಯೋಜನಾ ಕಾರ್ಯಕ್ರಮವನ್ನು ಕೈಗೊಂಡಿದೆ. ಯೋಜನೆಗಳನ್ನು ರೂಪಿಸುವಲ್ಲಿ ಮತ್ತು ಅವುಗಳನ್ನು ಕಾರ್ಯಗತಗೊಳಿಸುವಲ್ಲಿ ಸಾಮಾನ್ಯ ಜನತೆಗೆ ಅಧಿಕಾರದಲ್ಲಿ ಮತ್ತು ಸಂಪತ್ತಿನ ವಿನಿಯೋಗದಲ್ಲಿ ಪಾಲುಗೊಳ್ಳಲು ಈ ಯೋಜನೆಯು ಅವಕಾಶವನ್ನೀಯುತ್ತದೆ.

ಜಾತಿ ಮತ ಭಿನ್ನತೆಗಳಿಗತೀತವಾಗಿ ಯೋಜನೆಯಲ್ಲೂ, ಅಭಿವೃದ್ಧಿ ಕಾರ್ಯದಲ್ಲೂ ಸಮಾನ ಹಕ್ಕು ಸಾಧ್ಯವೆಂಬುದು ಖಚಿತವಾಗಿದೆ. ಒಂಭತ್ತನೆಯ ಪಂಚವಾರ್ಷಿಕ ಪದ್ಧತಿಯನ್ನು 'ಜನಯೋಜನ' ಪದ್ಧತಿಯೆಂದು ಸರಕಾರವು ಸಾರಿದೆ. ಇದು ಅಭಿವೃದ್ಧಿ ಇತಿಹಾಸದ ಮೈಲುಗಲ್ಲಾಗಿದೆ. ಯೋಜನೆಯ ವೆಚ್ಚದ **40%** ನ್ನು ವಿವಿಧ ಹಂತಗಳಲ್ಲಿರುವ ಪಂಚಾಯತು ಸಮಿತಿಗಳು ತಯಾರಿಸುವುದಲ್ಲದೆ, ಇದಕ್ಕೆ ಪೂರಕವಾಗಿ ನಡೆಯುವತರಬೇತಿ ಪ್ರಚಾರ, ಸ್ವಯಂ ಸೇವೆ ಇತ್ಯಾದಿ ನಾನಾ ರೀತಿಯ ಕಾರ್ಯಕ್ರಮಗಳ ಮೂಲಕ ಅಭಿವೃದ್ಧಿಯ ನವನಾಗರಿಕತೆಯನ್ನು ಬೆಳೆಸುವ ಉದ್ದೇಶವನ್ನು ಕೈಗೊಳ್ಳಲಾಗಿದೆ. ಗ್ರಾಮ ಪಂಚಾಯತು ಅಭಿವೃದ್ಧಿ ವಲಯಗಳು ಇಂದು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ಈ ನೂತನ ಯೋಜನೆಯಿಂದ ಸಾಧ್ಯವಾಗಬಹುದು.

ಬಹುಜನರ ಸಹಭಾಗಿತ್ವವು ಸಫಲವಾದಾಗ ಸ್ವಾಭಾವಿಕವಾಗಿಯೂ ಜ್ಯಾರಿಯಲ್ಲಿರುವ ಮತ್ತು ಇನ್ನು ಕೈಗೊಳ್ಳಲಿರುವ ಪದ್ಧತಿಗಳು ಬಹುಬೇಗನೆ ಫಲಕಾರಿಯಾಗಿ ಮತ್ತು ತೃಪ್ತಿ ಕರವಾಗಿ ನಿರ್ವಹಿಸಲು ಸಾಧ್ಯವಾಗುವುದರೊಂದಿಗೆ ಭ್ರಷ್ಟಾಚಾರದ ಕೈಗಳನ್ನು ತಡೆಯಬಹುದು.

ಪಂಚಾಯತಿನ ಅಭಿವೃದ್ಧಿಗಾಗಿ ಮತ್ತು ಜನರ ನೆಮ್ಮದಿಗಾಗಿ ಜನ ಯೋಜನಾ ಕಾರ್ಯಕ್ರಮವು ಯಶಸ್ವಿಯಾಗುವಂತೆ ದುಡಿಯೋಣ.

ಪಂಚಾಯತಿನ ಆಡಳಿತ ಚರಿತ್ರೆ

- ಪಂಚಾಯತಿನ ಹೆಸರು: ಪೈವಳಿಕೆ ಗ್ರಾಮ ಪಂಚಾಯತ್
- ಪಂಚಾಯತಿನಲ್ಲಿರುವ ಗ್ರಾಮಗಳು:

  1 ಪೈವಳಿಕೆ 2. ಚಿಪ್ಪಾರು

  3. ಬಾಯಾರು 4. ಕಯ್ಯಾರು

  5. ಕುಡಾಲು ಮೇರ್ಕಳ
- ಬ್ಲಾಕ್ ಪಂಚಾಯತು: ಮಂಜೇಶ್ವರ
- ತಾಲೂಕು : ಕಾಸರಗೋಡು
- ಜಿಲ್ಲೆ: ಕಾಸರಗೋಡು
- ವಿಧಾನ ಸಭೆ: ಮಂಜೇಶ್ವರ
- ವಿಸ್ತೀರ್ಣ: 72.5 ಚ.ಕಿ.ಮೀ.
- ಜನಸಂಖ್ಯೆ: 27913 (1991ರ ಜನಗಣತಿ)
- ಪುರುಷರು: 13,965
- ಸ್ತ್ರೀಯರು: 13,948
- ವಾರ್ಡುಗಳು: 11
- ಅಧ್ಯಕ್ಷರು ಶ್ರೀ ಅಚ್ಯುತ ಚೇವಾರ್
- ಉಪಾಧ್ಯಕ್ಷೆ ಶ್ರೀಮತಿ ಶೈಲಜ ಎಸ್.ಭಟ್
- ಸ್ಥಾಯೀ ಸಮಿತಿ ಅಧ್ಯಕ್ಷರು, : ಶ್ರೀ ಯಾದವ ಕುಮಾರ್ ಸಿ.ಯಚ್.

1956ರ ತನಕ ಈ ಪ್ರದೇಶವು ಮದ್ರಾಸು ಸಂಸ್ಥಾನದ ದಕ್ಷಿಣ ಜಿಲ್ಲೆಯ ಒಂದು ಭಾಗವಾಗಿತ್ತು. ಆಗ ಪಂಚಾಯತುಗಳು ದಕ್ಷಿಣ ಕನ್ನಡ ಜಿಲ್ಲಾ ಬೋರ್ಡಿನ ಆಡಳಿತೆಗೆ ಒಳಪಟ್ಟಿತ್ತು. ಇಂದಿನಂತೆ ವಿಶಾಲತೆಯನ್ನು ಹೊಂದಿರಲಿಲ್ಲ. ಪೈವಳಿಕೆ ಮತ್ತು ಚಿಪ್ಪಾರು ಗ್ರಾಮಗಳು ಸೇರಿ ಒಂದು ಪಂಚಾಯತಾಗಿದ್ದು ದಿವಂಗತ ಶ್ರೀ ಮಾನ್ ಕುರಿಯ ಗಣಪತಿ ಭಟ್ಟರು ಅಧ್ಯಕ್ಷರಾಗಿದ್ದರು. ದಿವಂಗತ ಶ್ರೀಮಾನ್ ಕನಿಯಾಲ ರಾಮಭಟ್ಟರು ಬಾಯಾರು ಗ್ರಾಮದ ಅಧ್ಯಕ್ಷರಾಗಿದ್ದರು. ಕಯ್ಯಾರು ಮತ್ತು ಕುಡಾಲುಮೇರ್ಕಳ ಗ್ರಾಮಗಳು ಒಂದಾಗಿ ದಿವಂಗತ ಶ್ರೀಮಾನ್ ಮರುವಳ ತಿರುಮಲೇಶ್ವರ ಭಟ್ಟರು ಅಧ್ಯಕ್ಷರಾಗಿದ್ದರು. ಆಗ ಇಂದಿನಂತೆ ಮತದಾನ ಸಂಪ್ರದಾಯವು ಇರಲಿಲ್ಲ. ಲಕ್ಷರಸ್ಥರು ಒಂದೆಡೆ ಸೇರಿ ಕೈಗಳನ್ನೆತ್ತಿ ಮತವಿತ್ತು ಅಧ್ಯಕ್ಷರನ್ನು ಆರಿಸುತ್ತಿದ್ದರು.

1956ರಲ್ಲಿ ಭಾಷಾ ತಳಹದಿಯಲ್ಲಿ ಪ್ರಾಂತ್ಯ ಪುನರ್ರಚನೆಯಾದಾಗ ಕಾಸರಗೋಡು ತಾಲೂಕು ಮಲಬಾರು ಜಿಲ್ಲೆಯೊಂದಿಗೆ ಸೇರಿಸಲ್ಪಟ್ಟು ಕೇರಳ ಸಂಸ್ಥಾನದೊಂದಿಗೆ ವಿಲೀನವಾಯಿತು. ಅಂದಿನಿಂದ ಪಂಚಾಯತು ಮಲಬಾರು ಜಿಲ್ಲಾ ಬೋರ್ಡಿನ ಆಡಳಿತೆಗೆ ಒಳಪಟ್ಟಿತು.

1962 ರಲ್ಲಿ ನೆಲೆಯಲ್ಲಿದ್ದ ಐದು ಗ್ರಾಮಗಳನ್ನೊಳಗೊಂಡ ಮೂರು ಪಂಚಾಯತುಗಳು ಒಂದಾಗಿ ಚುನಾವಣೆ ನಡೆದು ವಿಜಯಿಯಾದ ಶ್ರೀಮಾನ್ ಮಾಣಿಪ್ಪಾಡಿ ವಿಷ್ಣು ಭಟ್ಟರು ಪಂಚಾಯತ್ತು ಅಧ್ಯಕ್ಷರಾಗಿ 16 ವರ್ಷಗಳ ಆಡಳಿತೆಯನ್ನು ನಿರ್ವಹಿಸಿದರು.

ಆಗ ಪಂಚಾಯತು ಕಛೇರಿಗೆ ಸ್ವಂತ ಕಟ್ಟಡವಿರಲಿಲ್ಲ. 1969 ರಲ್ಲಿ ಪಂಚಾಯತು 'ಕುರಿಕಲ್ ಭವನ' ನಿರ್ಮಾಣ ಪದ್ಧತಿಯ ಮೂಲಕಕಾಯರ್ ಕಟ್ಟೆಯಲ್ಲಿ ಮಾಣಿಪ್ಪಾಡಿ ವಿಷ್ಣು ಭಟ್ಟರ ಉದಾರ ದಾನದ ಸ್ಥಳದಲ್ಲಿ ಪಂಚಾಯತಿಗೆ ಸ್ವಂತ ಕಟ್ಟಡ ನಿರ್ಮಾಣವಾಗಿ ಪೈವಳಿಕೆ ಬಾಡಿಗೆ ಕಟ್ಟಡದಿಂದ ಸ್ವಂತ ಕಟ್ಟಡಕ್ಕೆ ಸ್ಥಳಾಂತರಿಸಲ್ಪಟ್ಟಿತು.

1979 ರಲ್ಲಿ ಜರುಗಿದ ಪಂಚಾಯತು ಚುನಾವಣೆಯಲ್ಲಿ ವಿಜಯಿಯಾದ ಶ್ರೀಮಾನ್ ಉರ್ಮಿ ಕೃಷ್ಣ ಶೆಟ್ಟರು ಅಧ್ಯಕ್ಷರಾಗಿ 13 ವರ್ಷಗಳ ಆಡಳಿತ ನಡೆಸಿದರು.

1994 ರಲ್ಲಿ ತಾತ್ಕಾಲಿಕವಾಗಿ ಪಂಚಾಯತು ಕಛೇರಿಯನ್ನು ಕಾಯರ್ ಕಟ್ಟೆಯಿಂದ ಈಗಿರುವ ಪೈವಳಿಕೆ ಬಾಲವಾಡಿ ಕಟ್ಟಡಕ್ಕೆ ವರ್ಗಾಯಿಸಲಾಯಿತು.

23.9.95 ಕ್ಕೆ ಜರುಗಿದ ಪಂಚಾಯತು ಚುನಾವಣೆಯಲ್ಲಿ ವಿಜಯಗಳಿಸಿದ ಶ್ರೀ ಅಚ್ಯುತ ಚೇವಾರ್‌ರವರು ಗ್ರಾಮ ಪಂಚಾಯತಿನ ಪ್ರಥಮ ಅಧ್ಯಕ್ಷರಾಗಿ 4.10.96 ರಿಂದ ಅಧಿಕಾರ ವಹಿಸಿಕೊಂಡರು.

ಪೈವಳಿಕೆ ಪಂಚಾಯತಿನ ಸಾಮಾಜಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಪೈವಳಿಕೆಯು ಚಾರಿತ್ರಿಕ ಹಿನ್ನೆಲೆಯುಳ್ಳ ಪ್ರದೇಶವಾಗಿದೆ. ಹಿಂದೆ ಈ ಪ್ರದೇಶವು ತುಳುನಾಡಿನ ಒಂದು ಭಾಗವಾಗಿದ್ದುದರಿಂದ ಈಗಲೂ ಇಲ್ಲಿ ತುಳು ಭಾಷೆಯ ಪ್ರಭಾವವನ್ನು ಕಾಣಬಹುದು. ಪೈವಳಿಕೆ, ಚಿಪ್ಪಾರು, ಬಾಯಾರು, ಕುಡಾಲು ಮೇರ್ಕಳ ಗ್ರಾಮಗಳ ಆಡಳಿತೆಯು ಬಲ್ಲಾಳ ಮನೆತನದವರಿಗೆ ಸೇರಿತ್ತು. ಈ ಮನೆತನದವರ ಅರಮನೆಯು ಹಿಂದೆ ಪೈವಳಿಕೆಯಲ್ಲಿತ್ತು. ಇವರು " ಪೈಯರು" ಎಂಬ ವಂಶದವರಾದುದರಿಂದ ಇವರ ಆಳ್ವಿಕೆಯ ಪ್ರದೇಶಕ್ಕೆ ಪೈಯರ+ಆಳಿಕೆ "ಪೈವಳಿಕೆ" ಎಂದು ಹೆಸರಾಯಿತೆಂದು ಸಂಶೋಧನೆಗಳಿಂದ ತಿಳಿದು ಬರುತ್ತದೆ. ಚಿಪ್ಪಾರು ಮತ್ತು ಪೈವಳಿಕೆಯಲ್ಲಿರುವ ಅರಮನೆಯ ಅವಶೇಷಗಳು ಈ ಹೇಳಿಕೆಗೆ ಜೀವಂತ ನಿದರ್ಶನಗಳಾಗಿವೆ. ಈ ವಂಶದವರು ಈಗಲೂ ಈ ಪ್ರದೇಶದಲ್ಲಿ ನೆಲಸಿರುವರು. ಕುಡಾಲು ಮೇರ್ಕಳದಲ್ಲಿದ್ದ ಜೈನ ವಂಶವು ನಾಶವಾಗಿರುತ್ತದೆ. ವಿಭಿನ್ನ ಸಂಸ್ಕೃತಿಯ ಜನರು ಇಲ್ಲಿ ತಮ್ಮ ಮತಾಚರಣೆಗಳನ್ನು ನೆಮ್ಮದಿಯಿಂದ ನಡೆಸಿಕೊಂಡು ಬರುತ್ತಿರುವರು.

ಭೌಗೋಳಿಕವಾಗಿ ಈ ಪ್ರದೆಶವು ಗುಡ್ಡ, ಬಯಲು, ಕಣಿವೆ, ಕಾಡು ಮೇಡು, ಏರು ತಗ್ಗು, ಮೈದಾನು, ಕಲ್ಲು ಬಂಡೆಗಳಿಂದಲೂ ನದಿತೋಡು ಕೆರೆಗಳಿಂದಲೂ ಶೋಭಿಸುತ್ತಾ ಉತ್ತಮ ಹವಾಮಾನದಿಂದ ಕೂಡಿದ್ದು ವರ್ಷದಲ್ಲಿ ನಾಲ್ಕು ತಿಂಗಳು ಮಳೆ ಸುರಿದರೂ ಬೇಸಗೆಯಲ್ಲಿ ಒಣ ಹವೆಯ ಅನುಭವವಾಗುತ್ತದೆ.

ಭೂ ಸೊತ್ತಿನ 90% ಭಾಗವು ಭೂ ಮಾಲಿಕರ ಒಡೆತನದಲ್ಲಿದ್ದು ಕೃಷಿಕರು ಮತ್ತು ಬಡವರು ಭೂ ಮಾಲಿಕರ ಒಕ್ಕಲುಗಳಾಗಿ ದುಡಿದು ದುಡಿಮೆಯ ಫಲವೆಲ್ಲವೂ ಭೂಮಾಲಿಕರ ಬೊಕ್ಕಸಕ್ಕೆ ಸೇರುತ್ತಿತ್ತು. ಕೃಷಿಕರ ಹೋರಾಟ ಮತ್ತು ಕಾನೂನಿನ ಬದಲಾವಣೆಯಿಂದಾಗಿ ಹೆಚ್ಚಿನ ಸೊತ್ತುಗಳೆಲ್ಲವೂ ಒಕ್ಕಲಿಗರ ಪಾಲಾಗಿ ಉಳುವವನೇ ಹೊಲ ದೊಡೆಯನಾದನು. ಈಗ ಒಕ್ಕಲು ಪದ್ಧತಿಯು ಸಂಪೂರ್ಣ ನಿರ್ನಾಮವಾಗಿರುತ್ತದೆ.

ಪ್ರಾಂತ್ಯ ಭಾಷೆ ಮಲೆಯಾಳವಾದರೂ ಕನ್ನಡ, ಮಲೆಯಾಳ, ತುಳು, ಮರಾಠಿ, ಕೊಂಕಣಿ ಭಾಷೆಗಳು ಆಯಾ ಜನಾಂಗದವರ ಆಡು ಭಾಷೆಗಳಾಗಿವೆ. ಶಾಲೆಗಳಲ್ಲಿ ಕಲಿಸಲ್ಪಡುವ ಮತ್ತು ವ್ಯವಹಾರಿಕ ಭಾಷೆಯು ಕನ್ನಡವಾಗಿದೆ. ಪೈವಳಿಕೆ ನಗರ ಹೈಸ್ಕೂಲಿನಲ್ಲಿ 1 ರಿಂದ 10 ರ ತನಕ ಮಲೆಯಾಳ ತರಗತಿಗಳಿದ್ದು ಮಲೆಯಾಳವನ್ನು ಕಲಿಯುತ್ತಿರುವರು. ಕೆಲವು ವರ್ಷಗಳ ತನಕ ಇಲ್ಲಿ ಪ್ರಾಥಮಿಕ ಮತ್ತು ಮಾಧ್ಯಮಿಕ ಕಲಿಯುವಿಕೆಯ ಸೌಕರ್ಯವಿಲ್ಲದೆ ಹೈಸ್ಕೂಲು ವಿದ್ಯಾಭ್ಯಾಸಕ್ಕೆ ಸೌಕರ್ಯವಿರಲಿಲ್ಲ. ಮುಸ್ಲಿಂ ವಿದ್ಯಾರ್ಥಿನಿಯರು ಮತ ವಿದ್ಯಾಭ್ಯಾಸಕ್ಕೆ ಮಾತ್ರ ಸೀಮಿತರಾಗಿದ್ದರು. 1956 ರಲ್ಲಿ ಪಂಚಾಯತ್ತಿನ ಕಾಯರ್ ಕಟ್ಟೆಯಲ್ಲಿ ಪೈವಳಿಕೆ ಸರಕಾರಿ ಹೈಸ್ಕೂಲು ಸ್ಥಾಪನೆಯಾಗಿ ಈ ಪ್ರದೇಶದ ವಿದ್ಯಾರ್ಥಿಗಳು ಅನಾಯಾಸವಾಗಿ S.S.L.C. ತನಕ ವಿದ್ಯಾಭ್ಯಾಸವನ್ನು ಪಡೆಯುವಂತಾಯಿತು. ಈಗ ಪಂಚಾಯತಿನಲ್ಲಿ ಮೂರು ಹೈಸ್ಕೂಲುಗಳನ್ನೊಳಗೊಂಡು 13 ವಿದ್ಯಾಲಯಗಳಿವೆ.

ಕ್ಷಯ, ಸಿಡುಬು, ಕೊಲೇರಾ, ಮಲೇರಿಯಾ, ಪ್ಲೇಗ್ ರೋಗಗಳು ಸಾಮಾನ್ಯವಾಗಿದ್ದು ರೋಗ ರುಜಿನುಗಳಿಂದ ಸಾಯುವುದೂ ಸಾಮಾನ್ಯವಾಗಿತ್ತು. ಸರಿಯಾದ ಚಿಕಿತ್ಸಾ ಸೌಕರ್ಯಗಳು ಇರಲಿಲ್ಲ ಈಗ ಎಲ್ಲಾ ರೋಗಗಳಿಗೂ ಚಿಕಿತ್ಸಾ ಸೌಕರ್ಯಗಳಿವೆ. ಇದರಿಂದಾಗಿ ಮರಣ ಸಂಖ್ಯೆಯು ಕಡಿಮೆಯಾಗಿ ಜನನ ಸಂಖ್ಯೆಯು ಹೆಚ್ಚಾಗಿದೆ. ಜನ ಹೆಚ್ಚಳಕ್ಕೆ ಇದು ಒಂದು ಕಾರಣವಾಗಿದೆ.

ಪಾಶ್ಚಾತ್ಯ ಅನುಕರಣೆಯಿಂದ ಉಡುಗೆ ತೊಡುಗೆಯಲ್ಲೂ ಬದಲಾವಣೆಗಳುಂಟಾಗಿದೆ. ಜಾತಿ ಪದ್ಧತಿಯ ಪರಂಪರಾಗತ ಉಡುಪುಗಳು ಮಾಯವಾಗಿವೆ. ಹತ್ತಿ ನೂಲಿನ ಬಟ್ಟೆಗಿಂತ ಕೃತಕ ನೂಲಿನ ಬಟ್ಟೆಯು ಜನಪ್ರಿಯವಾಗಿದೆ. ಧೋತಿಯ ಸ್ಥಾನವನ್ನು ಪೇಂಟುಗಳು ಆಕ್ರಮಿಸಿವೆ.

ಮಣ್ಣಿನ ಗೋಡೆಗಳಿಂದ ನಿರ್ಮಿಸಲ್ಪಟ್ಟ ಸೋಗೆ, ಹುಲ್ಲು ಛಾವಣಿಯ ಮನೆಗಳು ಮಾಯವಾಗಿ ಹಂಚು ಛಾವಣಿಯ ಮತ್ತು R.C.C.ಯ ಮಾಳಿಗೆ ಮನೆಗಳು ಪಂಚಾಯತಿನ ಎಲ್ಲಡೆಗಳಲ್ಲೂ ಕಾಣಬಹುದು. ಬಹು ಕುಟುಂಬ (ಸಮುಷ್ಟಿ) ಪದ್ಧತಿಯು ಮಾಯವಾಗಿ ಒಂದು ಕುಟುಂಬಕ್ಕೆ ಒಂದು ಮನೆಯಂತೆ ಕಟ್ಟಲ್ಪಟ್ಟು ಮನೆಗಳ ಸಂಖ್ಯೆಯು ಹೆಚ್ಚಾಗಿದೆ. ಈ ಬದಲಾವಣೆಗೆ ವಿದೇಶಿ ಹಣದ ಪ್ರವಾಹವು ಮುಖ್ಯ ಕಾರಣವಾಗಿದೆ.

ರಸ್ತೆಗಳಿಲ್ಲದೆ ವಾಹನ ಸೌಕರ್ಯವಿಲ್ಲದ ಪ್ರಯಾಣವು ದುಸ್ತರವಾಗಿತ್ತು. ಪಂಚಾಯತಿನ ಮಧ್ಯ ಭಾಗದಲ್ಲಿ ಜೋಡು ಕಲ್ಲಿನಿಂದ ಮುಗುಳಿಯ ತನಕ ಹಾದು ಹೋಗುವ ಹೆದ್ದಾರಿಯಲ್ಲಿ ನಾಮ ಮಾತ್ರದ ವಾಹನ ಸೌಕರ್ಯವಿತ್ತು. ಹೆಚ್ಚಿನವರು ಆಗ ಎತ್ತಿನ ಗಾಡಿಯಲ್ಲಿ ಸಂಚರಿಸುತ್ತಿದ್ದರು. ಈಗ ಪಂಚಾಯತಿನಲ್ಲಿ ನಿರ್ಮಿಸಲ್ಪಟ್ಟ 160 ರಸ್ತೆಗಳಿವೆ. ಬೆರಿಪದವು ಬಳ್ಳೂರು, ಕನಿಯಾಲ, ಸಜಂಕಿಲ, ಕುರುಡಪದವು ಮತ್ತು ಪೆರ್ಮುದೆ ರಸ್ತೆಗಳಲ್ಲಿ ವಾಹನ ಸೌಕರ್ಯಗಳಿವೆ.

ಕಂಬಳ, ಕೋಳಿಅಂಕ (ಜೂಜುರಹಿತ) ಬಯಲಾಟ ತಾಳಮದ್ದಳೆ ಮನರಂಜನಾ ಕಲೆಗಳಾಗಿದ್ದುವು. T.V. (ದೂರದರ್ಶನ) ಸಿನೇಮಗಳಿಂದಾಗಿ ಈ ಕಲೆಗಳಲ್ಲಿ ಜನರಿಗೆ ಆಸಕ್ತಿಯು ಕಡಿಮೆಯಾಗುತ್ತಿದೆ. ಭೂತಾರಾದನೆ, ಕೋಲ, ಆಟಿಕಳಂಜ, ಸೋಣ ಜೋಗಿ, ಚೆನ್ನೆ ಕುಣಿತ, ಪಾಡ್ದನ ಹಳ್ಳಿಯ ಜಾನಪದ ಕಲೆಗಳಾಗಿವೆ. ಆಧುನಿಕತೆಯಿಂದಾಗಿ ಕೆಲವೆಲ್ಲ ಮಾಯವಾಗುತ್ತಿವೆ. ಭೂತ ಸ್ಥಾನಗಳಲ್ಲಿ ಜರಗುವ ಕೋಲ, ದೇವಸ್ಥಾನದಲ್ಲಿ ನಡೆಯುವ ಆಯನ, ಮಸೀದಿ ದರ್ಗಾಗಳಲ್ಲಿ ಜರಗುವ ನೇರ್ಚೆ ಉರೂಸ್ ಮತ್ತು ಇಗರ್ಜಿಯಲ್ಲಿ ಆಚರಿಸುವ ಕ್ರಿಸ್‌ಮಸ್, ಶಾಂತಿಮಾರಿ ಹಬ್ಬಗಳು ವಿಜೃಂಭಣೆಯಿಂದ ಆಚರಿಸಲ್ಪಡುತ್ತಿವೆ. ಇವುಗಳೆಲ್ಲ ಇಲ್ಲಿಯ ಜನರಲ್ಲಿರುವ ಧಾರ್ಮಿಕ ಮನೋಭಾವನೆಯ ನಿದರ್ಶನಗಳಾಗಿವೆ.

ಕಾಲ್ಚೆಂಡಾಟ, ಪಳ್ಳಿ ಹಿಡಿಯುವುದು, ಕುಟ್ಟಿದೊಣ್ಣೆ ಚೆನ್ನೆಮಣೆ, ತೆಂಗಿನ ಕಾಯಿ ಕುಟ್ಟುವುದು, ನೋಂಡಿ ದೊಡ್ಡವರ ಆಟವಾಗಿದ್ದು, ಹುಲಿದನ, ಜುಬಿಲಿ, ಗೇರು ಬೀಜ ಕುಟ್ಟುವುದು, ಕಲ್ಲಾಟ ಕಪ್ಪೆ ಆಟ, ಟೊಪ್ಪಿ ಆಟ, ಗಜ್ಜುಗದ ಆಟಗಳೆಲ್ಲ ಮಕ್ಕಳ ಆಟಗಳಾಗಿದ್ದುವು ಆದರೆ ನಾಗರಿಕತೆಯ ಪ್ರಭಾವದಿಂದಾಗಿ ಈ ಆಟಗಳ ಸ್ಥಾನವನ್ನು ಪಾಶ್ಚಾತ್ಯ ಆಟಗಳು ಆಕ್ರಮಿಸಿದವು. ಕ್ರಿಕೆಟ್ , ವಾಲಿಬಾಲ್, ಬೇಡ್‌ಮಿಂಟನ್ ಆಟಗಳು ಜನ ಪ್ರಿಯವಾಗುತ್ತಿವೆ.

ಪಂಚಾಯತಿನ ಪ್ರಕೃತಿ ಸೌಂದರ್ಯವು ಬಹಳ ಮನೋಹರವಾಗಿದೆ. ಎಲ್ಲಿ ನೋಡಿದರೂ ಹಸುರಾದ ಕಾಡು ಪೊದರುಗಳನ್ನು ಬಯಲುಗಳಲ್ಲಿ ಹಚ್ಚ ನೆಯ ಹೊಲಗಳನ್ನು, ಸಾಲಾಗಿ ನಿಂತಿರುವ ಅಡಿಕೆ ತೋಟಗಳನ್ನು, ಬಹು ಎತ್ತರಕ್ಕೆ ತಲೆಯೆತ್ತಿ ನಿಂತಿರುವ ತೆಂಗಿನ ಮರಗಳನ್ನು ಕಾಣಬಹುದು. ಕೋಗಿಲೆ, ಮೈನಾ, ಗಿಳಿ ಮೊದಲಾದ ಪಕ್ಷಿಗಳನ್ನು, ಮಂಗ, ಅಳಿಲು, ನರಿ, ಕಾಡು ಬೆಕ್ಕು, ಮೊಲ ಹಂದಿ ಮೊದಲಾದ ಪ್ರಾಣಿಗಳು ಇಲ್ಲಿವೆ. ಕಾಡುಗಳ ನಾಶದೊಂದಿಗೆ ಈ ವನ್ಯಸಂಪತ್ತು

ನಾಶವಾಗುತ್ತಿದೆ.

ಈ ಪಂಚಾಯತಿನ ಘನತೆಯ ಪ್ರತೀಕವಾಗಿ 1060 ಅಡಿ ಎತ್ತರದ ಪೊಸಡಿಗುಂಪೆಯು ದಕ್ಷಿಣಕ್ಕೆ ತಲೆಯೆತ್ತಿ ನಿಂತಿದೆ.

ಇಷ್ಟೆಲ್ಲಾ ಬದಲಾವಣೆಗಳುಂಟಾದರೂ ಪಂಚಾಯತಿನ ಉತ್ಪಾದನಾ ಕ್ಷೇತ್ರವು ಸಾಕಷ್ಟು ಅಭಿವೃದ್ಧಿಯನ್ನು ಹೊಂದದಿರುವುದು ಶೋಚನೀಯವಾಗಿದೆ. ವಿದ್ಯಾವಂತರು ಕುಲಕಸುಬುಗಳನ್ನು ಬದಿಗೊತ್ತಿ ನೌಕರಿಯನ್ನರಸುತ್ತ ನಿರುದ್ಯೋಗಿಗಳಾಗುತ್ತಿರುವರು. ಕೃಷಿಕರು ಲಾಭದಾಯಕ ಉದ್ದಿಮೆಗಳನ್ನು ಅರಸುತ್ತಾ ಪಟ್ಟಣಗಳ ಕಡೆಗೆ ಸಾಗಿ ಕೃಷಿಯು ನಾಶವಾಗುತ್ತದೆ. ಕಾಡುಗಳನ್ನು ಕಡಿದು ನಾಶ ಪಡಿಸಿದುದರಿಂದ ಮಣ್ಣಿನ ಫಲವತ್ತತೆಯು ಕಡಿಮೆಯಾಗಿ ಮಳೆಯಿಲ್ಲದೆ ಬರಗಾಲವು ತಲೆಯೆತ್ತತೊಡಗಿದೆ. ಸೋಮಾರಿತನ, ಅನ್ಯಕ್ಯತೆ, ನೈತಿಕ ಅಧಪತನ, ಸ್ವಾರ್ಥ ಶೋಷಣೆ, ಭ್ರಷ್ಟಾಚಾರ., ಅಧಿಕಾರ ಮೋಹ, ಗುಂಪುಗಾರಿಕೆ ಇವುಗಳೆಲ್ಲವೂ ಪಂಚಾಯತಿನ ಅಭಿವೃದ್ಧಿಗೆ ಮಾರಕಗಳಾಗಿವೆ.

ಗ್ರಾಮ ಪಂಚಾಯತಿನ ಅಭಿವೃದ್ಧಿಗಾಗಿ ನಾವೆಲ್ಲರೂ ಒಟ್ಟಾಗಿ ಶ್ರಮಿಸುವುದು ಅನಿವಾರ್ಯವಾಗಿದೆ.



ಪೈವಳಿಕೆ ಗ್ರಾಮ ಪಂಚಾಯತ್

ಭೂ ಪ್ರಕೃತಿ ಮತ್ತು ಸಂಪನ್ಮೂಲಗಳು

ಪೈವಳಿಕೆ ಗ್ರಾಮ ಪಂಚಾಯತು ಪಡು ಕರಾವಳಿಗೆಸಮೀಪವಾಗಿರುವ ಭೂ ಪ್ರದೇಶವಾಗಿದೆ. ಪಡುಕರಾವಳಿಯಿಂದ ಸುಮಾರು 8 ಕಿ.ಮೀ. ದೂರದ ಜೋಡುಕಲ್ಲು ಎಂಬುದು ಪಡು ಗಡಿಯಾದರೆ ಮೂಡು ಭಾಗದಲ್ಲಿ ಸುಮಾರು 23 ಕಿ.ಮೀ ದೂರದ ಬಳ್ಳೂರು ಎಂಬ ಪ್ರದೇಶವಿದೆ. ಕಂಬಾರು ಮುನ್ನೂರು ಎಂಬಿವುಗಳು ತೆಂಕು ಗಡಿಗಳಾದರೆ ಬಡಗು ದಿಕ್ಕಿನಲ್ಲಿ ಬೇಡಗುಡ್ಡೆ ಗಡಿಯಾಗಿದೆ. ದಕ್ಷಿಣ ಭಾಗದಲ್ಲಿ ಕುಂಬಳೆ ಮತ್ತು ಪುತ್ತಿಗೆ ಪಂಚಾಯತ್‌ಗಳು ಪಶ್ಚಿಮದಲ್ಲಿ ಮೀಂಜ ಮತ್ತು ಮಂಗಲ್ಪಾಡಿ ಪಂಚಾಯತ್‌ಗಳೂ ಉತ್ತರದಲ್ಲಿ ಮೀಂಜ ಪಂಚಾಯತು ಮತ್ತು ಕರ್ನಾಟಕ ರಾಜ್ಯದ 'ಕರೋಪಾಡಿ' ಪಂಚಾಯತ್‌ಗಳಿವೆ. ಪೂರ್ವದಲ್ಲಿಯೂ ಕರೋಪಾಡಿ ಪಂಚಾಯತ್ ಈ ಪಂಚಾಯತ್‌ನ ಮೇರೆಯಾಗಿದೆ.

ಈ ಪಂಚಾಯತ್‌ನ ಭೂ ಪ್ರಕೃತಿಯು ಕರಾವಳಿ ಪ್ರದೇಶಕ್ಕಿಂತ ತೀರಾ ಭಿನ್ನವಾಗಿದೆ. ಭೂಪ್ರಕೃತಿಗನುಸಾರವಾಗಿ ಈ ಪಂಚಾಯತನ್ನು ಮೂರು ವಿಧವಾಗಿ ವಿಂಗಡಿಸಬಹುದು.

1 ಗುಡ್ಡಗಳು

2 ಕಣಿವೆ ಮತ್ತು ಬಯಲು ಪ್ರದೇಶಗಳು

3 . ಪದವುಗಳು (ವಿಸ್ತಾರವಾದ ಸಮತಲ ಪ್ರದೇಶಗಳು)

ಕ್ರ.ಸಂ.	ಭೂರಚನೆಯ ರೀತಿ	ವಿಸ್ತೀರ್ಣ	ಶತಮಾನ(%)
1.	ಗುಡ್ಡಗಳು	29ಚ.ಕಿ.ಮೀ.	40
2.	ಇಳಿವೆ ಮತ್ತು ಬಯಲು ಪ್ರದೇಶಗಳು	29 ಚ.ಕಿ.ಮೀ.	40
3.	ಪದವು	14.5 ಚ.ಕಿ.ಮೀ.	20

ಗುಡ್ಡಗಳಲ್ಲಿ 'ಪೊಸಡಿಗುಂಪೆ' ಗುಡ್ಡವು ಕಾಸರಗೋಡು ಜಿಲ್ಲೆಯಲ್ಲೇ ಅತ್ಯಂತ ಎತ್ತರವಾದ (1060 ಅಡಿ) ಗುಡ್ಡವಾಗಿದ್ದು ಕೇಂದ್ರ ಸರಕಾರವು ಪ್ರವಾಸೀ ಕೇಂದ್ರವಾಗಿ ಆಯ್ಕೆ ಮಾಡಿದ ಪ್ರದೇಶವಾಗಿದೆ. ಇದಲ್ಲದೆ ಹಲವಾರು ಸಣ್ಣಪುಟ್ಟ ಗುಡ್ಡಗಳು ಈ ಪಂಚಾಯತಿನ ವ್ಯಾಪ್ತಿಯಲ್ಲಿ ಅಲ್ಲಲ್ಲಿ ವ್ಯಾಪಿಸಿಕೊಂಡಿದ್ದು ಒಟ್ಟು ವಿಸ್ತೀರ್ಣದ ಶೇಕಡಾ ನಲುವತ್ತನ್ನು (40%) ಗುಡ್ಡಗಳೇ ಕಬಳಿಸಿವೆ. ಪ್ರಸ್ತುತ ಈ ಪಂಚಾಯತ್‌ನ ಭೂ ಪ್ರದೇಶದ ಅಂತರ್ಜಲ ಮಟ್ಟವು ಆಳಕ್ಕೆ ಕುಸಿಯುತ್ತಾ ಹೋಗುವುದು. ಈ ಗುಡ್ಡ ಪ್ರದೇಶಗಳು ರಬ್ಬರ್ ಬೆಳೆಗೆ ಯೋಗ್ಯವಾಗಿದೆ ಎಂದು ತಜ್ಞರು ಅಭಿಪ್ರಾಯಪಟ್ಟರೂ ಇದರಿಂದ ಹೆಚ್ಚಿನ ಕೃಷಿ ಲಾಭ ಪಡೆಯಲಾಗಿಲ್ಲ.

ಕಣಿವೆ ಮತ್ತು ಬಯಲು ಪ್ರದೇಶಗಳು :

ಸುಮಾರು 29 ಚ.ಕಿ.ಮೀ. ವ್ಯಾಪಿಸಿಕೊಂಡಿರುವ ಬಯಲು ಮತ್ತು ಕಣಿವೆ ಪ್ರದೇಶಗಳಲ್ಲಿ ಹಿಂದೆ ಭತ್ತದ ಕೃಷಿಯನ್ನು ಹೇರಳವಾಗಿ ಮಾಡಲಾಗುತ್ತಿತ್ತು. ಆದರೆ ಇಂದು ಅವುಗಳಲ್ಲಿ ಹೆಚ್ಚಿನವು ಅಡಿಕೆ ತೋಟಗಳಾಗಿ ಮಾರ್ಪಾಡು ಹೊಂದಿವೆ.

ಪ್ರಧಾನವಾದ ಬಯಲುಗಳು

1) ಕಳಾಯಿ, ಕುಂಡೇರಿ ಚಿಪ್ಪಾರು ಬಯಲು (ಅಂದಾಜು 5ಕಿ.ಮೀ)

2 . ಕನಿಯಾಲ, ಪೆಲತ್ತಡ್ಕ, ಮುಳಿಗದ್ದೆ ಬಯಲು (ಅಂದಾಜು 3ಕಿ.ಮೀ)

3 . ಚೇರಾಲು ಕನಿಯಾಲ (3 . ಕಿ.ಮೀ)

4 . ಆವಳ ಸಜಂಕಿಲ (2ಕಿ.ಮೀ)

5 . ಕಟ್ಟದ ಮನೆ, ಮಾಣಿಪ್ಪಾಡಿ ಆವಳ (5ಕಿ.ಮೀ)

6. ಪಾವಲ್‌ಕೋಡಿ, ಕಟ್ಟದ ಮನೆ ಬೊಳಂಪಾಡಿ (5ಕಿ.ಮೀ) ಕುಡಾಲು, ಮೊಗೇರು, ಕುಂಡಲ, ಕಂಬಾರು ಮುನ್ನೂರು ಬಯಲು (6 ಕಿ.ಮೀ)

ಇದಲ್ಲದೆ ಪಿಲಿಯಂದೂರು, ಪೊನ್ನತ್ತೋಡು, ಬೈತಾಡಿ, ಶಾಂತಿಯೋಡು, ಎಡಕ್ಕಾನ, ಬಾಯಾಡಿ, ಪುಟ್ಟಮಾಣಿ, ಚೇವಾರು, ಮೇರ್ಕಳ, ಪೆರ್ಮುದೆ -ಪೆರಿಯಡ್ಕ ಎಂಬಲ್ಲಿಯೂ ಸಣ್ಣ ಪುಟ್ಟ ಬಯಲುಗಳಿವೆ.

ಪದವುಗಳು (ವಿಸ್ತಾರವಾದ ಸಮತಲ ಪ್ರದೇಶಗಳು)

ಬಯಲು ಪ್ರದೇಶಗಳಿಂದ ಎತ್ತರವಾಗಿ ವಿಸ್ತಾರವಾಗಿರುವ ಪ್ರದೇಶಗಳೇ ಪದವುಗಳಾಗಿವೆ. ಬೆರಿಪದವು, ಬಾಯಾರು ಪದವು, ಚಿಪ್ಪಾರು ಪದವು, ಕಾಯರ್‌ಕಟ್ಟೆ, ಪೈವಳಿಕೆ ನಗರ, ಕೊಮ್ಮಂಗಳ, ಕೈಯಾರು, ಚೇವಾರು, ಸುಬ್ಬಯ್ಯ ಕಟ್ಟೆ ಮೆರ್ಕಳ, ಪೆರ್ಮುದೆ, ಪೆರಿಯಡ್ಕ, ಪಾವಲು ಕೋಡಿ ಪುಟ್ಟಮಾಣಿ ಇತ್ಯಾದಿಗಳು ಪದವು ವರ್ಗಕ್ಕೆ ಸೇರಿದೆ. ಭೂ ಪ್ರದೇಶಗಳಾದ ಈ ಪ್ರದೇಶಗಳು ಕೃಷಿಗೆ ವಿಶೇಷವಾಗಿ ಬಳಸಲ್ಪಡುವುದಿಲ್ಲವಾದರೂ ವಾಸಸ್ಥಳಗಳಾಗಿ ಉಪಯೋಗಿಸಲ್ಪಡುತ್ತವೆ. ಮಾತ್ರವಲ್ಲ ಕೆಲವು ವಾಣಿಜ್ಯ ಕೇಂದ್ರಗಳಾಗಿ ಪರಿವರ್ತಿತವಾಗುತ್ತಿವೆ.

ಹವಾಮಾನ

ಈ ಪಂಚಾಯತ್‌ನ ಹವಾಮಾನವು ಪ್ರಾಂತ್ಯದ ಇತರ ಪ್ರದೇಶಗಳಿಂದ ಭಿನ್ನವಾಗಿಲ್ಲ. ಜೂನ್ ತಿಂಗಳಿನಿಂದ ಮಳೆ ಪ್ರಾರಂಭವಾಗಿ ಸಪ್ಟೆಂಬರ್ ಅಂತ್ಯದವರೆಗೆ ತನಕ ಮಳೆಗಾಲವಾಗಿರುವುದು. ಒಕ್ಟೋಬರ್‌ನಿಂದ ಜನವರಿ ಅಂತ್ಯದವರೆಗೆ ಚಳಿಗಾಲವಾಗಿರುತ್ತದೆ. ಫೆಬ್ರವರಿಯಿಂದ ಮೇ ತನಕ ಸೆಖೆಗಾಲವಾಗಿರುತ್ತದೆ. ಇಲ್ಲಿನ ವಾತಾವರಣದ ಉಷ್ಣತೆಯು ಸಾಮಾನ್ಯವಾಗಿ 30' Cಗೆ ಸಮೀಪದಲ್ಲಿರುತ್ತದೆ.

ನೀರಿನ ಲಭ್ಯತೆ

ಪೈವಳಿಗೆ ಗ್ರಾಮ ಪಂಚಾಯತ್‌ನ ಪ್ರಧಾನ ನೀರಿನ ಮೂಲವು ಮಳೆಯೇ ಆಗಿರುತ್ತದೆ. ಮಾಂಜ ಹೊಳೆ ಮತ್ತು ಸಿರಿಯಾ ಹೊಳೆಗಳಿಂದಲೂ, ಕನಿಯಾಲ ತೋಡು, ಬಳ್ಳೂರು ತೋಡು, ಜತ್ತಿ ತೋಡು, ಸುವರ್ಣಗಿರಿ ತೋಡು, ಕುಡಾಲು ತೋಡು ಇತ್ಯಾದಿಗಳ ನೀರನ್ನೂ ಕೃಷಿಗೆ ಉಪಯೋಗಿಸುತ್ತಾರೆ. ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿ ಸುಮಾರು 1000 (ಒಂದು ಸಾವಿರದಷ್ಟು)ಕೆರೆ ಭಾವಿಗಳಿವೆ. ಬೆರಳೆಣಿಕೆಯಲ್ಲಿ ತೂತು ಬಾವಿಗಳೂ ಇವೆ. ಕೆಲವಡೆಗೆಳಲ್ಲಿ ಸುರಂಗಗಳನ್ನು ಕೊರೆದು ಸಿಗುವ ನೀರನ್ನು ಸಂಗ್ರಾಹಕ ಟೇಂಕ್‌ಗಳಲ್ಲಿ ಸಂಗ್ರಹಿಸಿ ನೀರಿನ ಅವಶ್ಯಕತೆಗಳನ್ನು ಪೂರೈಸುವ ಕ್ರಮಗಳೂ ಕಂಡು ಬರುತ್ತವೆ.

ಈ ಪಂಚಾಯತ್‌ನ ಪ್ರಧಾನ ನೀರಾಶ್ರಯವಾದ ಮಳೆಯು ಸಾಧಾರಣ ವರ್ಷಕ್ಕೆ 3500 mm ನಷ್ಟು ಸುರಿಯುತ್ತದೆ. ಪ್ರಕೃತ ವರ್ಷ 3150mm ನಷ್ಟು ಮಳೆಯಾಗಿದೆ.

ಮಣ್ಣು : ಈ ಗ್ರಾಮ ಪಂಚಾಯತ್‌ನಲ್ಲಿ ಮುಖ್ಯವಾಗಿ ನಾಲ್ಕು ವಿಧದ ಮಣ್ಣಿನ ತರಗಳು ಕಂಡು ಬರುತ್ತದೆ.

I) ಕೃಷಿಯೋಗ್ಯ ಕೆಂಪು ಮಣ್ಣು

2) ಜೇಡಿ ಮಣ್ಣು

3. ಕೆಸರು ಮಣ್ಣು

4 ಮುರಕಲ್ಲು (ಬಂಡೆಗಳು)

ಮಣ್ಣಿನ ತರ	ವಿಸ್ತೀರ್ಣ	ಶತಮಾನ
ಕೃಷಿ ಯೋಗ್ಯ ಕೆಂಪು ಮಣ್ಣು	40 ಚ. ಕಿ.ಮೀ.	55%
ಚೇಡಿಮಣ್ಣು	14.5 ಚ.ಕಿ.ಮೀ	20%
ಕೆಸರು ಮಣ್ಣು	13.05 ಚ.ಕಿ.ಮೀ.	18%
ಮುರಕಲ್ಲು	4.25 ಚ.ಕಿ.ಮೀ.	7%

ಭೂ ವಿನಿಯೋಗ

ಪಂಚಾಯತ್‌ನ ಹೆಚ್ಚಿನ ಜನರು ಕೃಷಿ ಕೆಲಸಗಳಲ್ಲಿ ನಿರತರಾಗುವುದರಿಂದ ಸುಮಾರು 65% ಪ್ರದೇಶದಲ್ಲಿ ಅಡಿಕೆ, ತೆಂಗು, ಭತ್ತ ಬಾಳೆ ಇತ್ಯಾದಿಗಳನ್ನು ಬೆಳೆಸುತ್ತಾರೆ. ಉಳಿದ ಸ್ಥಳಗಳು ಗೋಮಾಳಗಳಾಗಿಯೋ, ಪೊದರುಗಳಿಂದ ಆವೃತವಾದ ಪ್ರದೇಶಗಳಾಗಿಯೋ ಇವೆ.

ಭೂ ವಿನಿಯೋಗ

ವಿನಿಯೋಗದ ತರ	ವಿಸ್ತೀರ್ಣ	ಶತಮಾನ
ಕೃಷಿ ಭೂಮಿ	47.125 KM	65
ಬಂಜರು ಭೂಮಿ	5.075KM	7
ಇತರ	20.3 KM	28

ಜನಗಣತಿ ವಿವರಗಳು

1991 ರ ಜನಗಣತಿ ಆಧಾರದಲ್ಲಿ ಈ ಗ್ರಾಮ ಪಂಚಾಯತ್‌ನಲ್ಲಿ ಗಂಡಸರ ಮತ್ತು ಹೆಂಗಸರ ಸಂಖ್ಯೆ ಹೆಚ್ಚು ಕಡಿಮೆ ಸಮಾನವಾಗಿದೆ. ಒಟ್ಟು ಜನಸಂಖ್ಯೆ 27,913 ರಷ್ಟಿದ್ದು ಅದರಲ್ಲಿ 13965 ಗಂಡಸರೂ, 13948 ಹೆಂಗಸರೂ ಒಳಗೊಂಡಿದ್ದಾರೆ. 6 ವರ್ಷಕ್ಕಿಂತ ಕೆಳಗಿನ ಪ್ರಾಯದ ಮಕ್ಕಳ ಸಂಖ್ಯೆ 4567 ಆಗಿದ್ದು 2346 ಹುಡುಗರೂ 2221 ಹುಡುಗಿಯರೂ ಇದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ 910 ಗಂಡಸರೂ 839 ಹೆಂಗಸರೂ ಈ ಪಂಚಾಯತ್‌ನಲ್ಲಿದ್ದಾರೆ. ಪರಿಶಿಷ್ಟ ಪಂಗಡಕ್ಕೆ ಒಳಪಟ್ಟ 1140 ಪುರುಷರೂ 1036 ಸ್ತ್ರೀಯರೂ ಈ ಪಂಚಾಯತ್‌ನ ವ್ಯಾಪ್ತಿಯಲ್ಲಿದಾರೆ. ಈ ಪಂಚಾಯತ್‌ನ ಸಾಕ್ಷರರ ಸಂಖ್ಯೆಯು 17893 ಆಗಿದ್ದು ಇದನ್ನು ಹೊರತು ಪಡಿಸಿ ಜನಸಂಖ್ಯೆಯ 65% ಆಗಿದೆ

1994 ರಲ್ಲಿ ಈ ಗ್ರಾಮ ಪಂಚಾಯತ್‌ನಲ್ಲಿ 231 ಜನನಗಳು ದಾಖಲಾದರೆ 124 ಮರಣಗಳು ದಾಖಲಾಗಿವೆ. 1995 ರಲ್ಲು 223 ಜನನಗಳು ದಾಖಲಾದರೆ 135 ಮರಣಗಳು ದಾಖಲಾಗಿವೆ.

1991ರ ಜನಗಣತಿ ಪ್ರಕಾರ ಗ್ರಾಮವಾರು ಜನರ ವಿವರ

(ಜನಸಂಖ್ಯೆ)

ಕ್ರ.ಸಂ.	ಗ್ರಾಮಗಳು	ಮನೆಗಳು	ಜನಸಂಖ್ಯೆ			S.C.		S.T		O.C	
				ಗಂ	ಹೆ	ಗಂ	ಹೆ	ಗಂ	ಹೆ	ಗಂ	ಹೆ
1.	ಕುಪಲುಮೇಡು	795	5201	2550	2651	105	102	132	136	1829	1453
2.	ಕಮ್ಮಾಡಿ	536	3138	1559	1579	125	117	81	62	1121	985
3.	ಪೈವಳಿಕೆ	1293	8172	4058	4114	215	194	178	161	2914	2323
4.	ಚಿಪ್ಪಾಡಿ	298	1970	956	1014	71	70	32	40	649	561
5.	ಪಾಯಾಡಿ	1480	9432	4842	4590	396	356	717	637	3440	2593
	ಜನ್ಮಾ	4402	27913	13965	13948	910	839	1140	1036	9973	7920

ಜೈವಿಕ ಸಂಪತ್ತು

ಪೈವಳಿಗೆ ಗ್ರಾಮ ಪಂಚಾಯತ್‌ನ ವ್ಯಾಪ್ತಿಯಲ್ಲಿ ಬೇರೆ ಪಂಚಾಯತ್‌ಗಳಲ್ಲಿ ಕಂಡುಬರದ ವಿಶೇಷವಾದ ಪ್ರಾಣಿ ಪಕ್ಷಿಗಳ್ಯಾವುವೂ ಕಂಡು ಬರುವುದಿಲ್ಲ. ಆಗೊಮ್ಮೆ ಈಗೊಮ್ಮೆ ನವಿಲುಗಳನ್ನೋ ಹೆಬ್ಬಾವುಗಳನ್ನೋ ಕಾಣುತ್ತೇವೆ. ಪಂಚಾಯತ್‌ನ ಹೆಚ್ಚಿನ ಪ್ರದೇಶಗಳಲ್ಲಿಯೂ ಕಾಡುಹಂದಿಗಳು ಹೇರಳವಾಗಿದ್ದು ಕೆಲವೊಮ್ಮೆ ಕೃಷಿ ಕಾರ್ಯಗಳನ್ನು ನಾಶ ಮಾಡುವುದು. ಇವಲ್ಲದೆ ಮೊಲಗಳು ಅಳಿಲುಗಳು, ಕಾಡುಬೆಕ್ಕು, ಪುನುಗುಬೆಕ್ಕು, ಮಂಗಸ ಮುಸು (ಸಿಂಗಳೀಕ) ಇತ್ಯಾದಿಗಳು ಸಾಮಾನ್ಯವಾಗಿ ಕಾಣಸಿಗುತ್ತವೆ. ಸಾಮಾನ್ಯವಾಗಿ ಕಾಣಸಿಗುವ ಹಕ್ಕಿಗಳು ಕಾಗೆ, ಕೋಗಿಲೆ, ಮರಕುಟಿಕ, ಮಿಂಚುಳ್ಳಿ, ಕೊಕ್ಕರೆ ಇತ್ಯಾದಿಗಳು ಪ್ರತ್ಯೇಕವಾಗಿ ತರಗೆಲೆಗಳು ಗಾಳಿಗೆ ಹಾರುವಾಗ ಕೇಳಿಸುವಂತ ಸದ್ದನ್ನು ಉಂಟು ಮಾಡುವ ತರಗೆಲೆ ಹಕ್ಕಿ (ಬಜಕರೆ ಪಕ್ಷಿ) ಗಳು ಧಾರಾಳವಾಗಿ ಕಂಡುಬರುತ್ತವೆ. ಪುರುಳೆ ಹಕ್ಕಿಗಳೆಂಬ ಸುಂದರವಾದ ಹಕ್ಕಿಗಳೂ ಈ ಪಂಚಾಯತ್ ವ್ಯಾಪ್ತಿಯಲ್ಲಿ ಕಾಣಸಿಗುತ್ತವೆ.

ವೃಕ್ಷ ವೈವಿಧ್ಯಗಳಲ್ಲಿ ಹೆಚ್ಚಿನವುಗಳು ವಿನಾಶದ ಅಂಚಿನಲ್ಲಿವೆ. ಈ ಪಂಚಾಯತ್ ವ್ಯಾಪ್ತಿಯಲ್ಲಿ ಬಹಳಷ್ಟಿದ್ದ ಶ್ರೀಗಂಧ, ಬೀಟಿ ಮೊದಲಾದ ಮರಗಳು ಪ್ರಕೃತ ಬೆರಳೆಣಿಕೆಯಲ್ಲಿವೆ. ಇವಲ್ಲದೆ ಸಾಗುವಾನಿ, ಬಣಪು, ಉರಿಪು, ಹೆಬ್ಬಲಸು ಚಾಕಟೆ ಇತ್ಯಾದಿ ಬೆಲೆಬಾಳುವ ಮರಗಳ ಸಂಖ್ಯೆ ಗಣನೀಯವಾಗಿ ಕಡಿಮೆಯಾಗಿದ್ದು ಹೆಬ್ಬಲಸು ಮರವು ಕಾಣಸಿಗುವುದೇ ಅಪರೂಪ.

ಔಷಧಿ ಸಸ್ಯಗಳೂ ಮೂಲಿಕಾಗಿಡಗಳು ಕೃಷಿ ಮಾಡಲ್ಪಡುವುದಿಲ್ಲವಾದರೂ ಕಾಚೀ (ಕದಿರ) ಕಿಸ್ಕಾರ(ಕೇಪುಳ) ಅತ್ತಿ, ಇತ್ತಿ ಶಾಂತಿ ನೆಲ್ಲಿ, ಗೋಳಿ ಅಶ್ವತ್ಥ, ಇತ್ಯಾದಿಗಳು ಅಲ್ಲಲ್ಲಿ ಕಂಡುಬರುತ್ತವೆ. ಸಾಂಬ್ರಾಣಿ, ತುಂಬೆ. ಕರಿಬೇವು, ನಾಯಿಸೊಣಂಗು, ಎಕ್ಕೆ, ಕಳ್ಳಿ, ಉರಿಸಣಿಕೆ ಇತ್ಯಾದಿಗಳಲ್ಲದೆ ಏಕನಾಯಕ, ಪಾತಾಳಗರುಡ, ಈಶ್ವರ ಬಳ್ಳಿ, ನನ್ನಾರಿ, ತುಳಸಿ, ಒಂದೆಲಗ (ತಿಮರೆ) ಇತ್ಯಾದಿಗಳು ಕಂಡು ಬರುತ್ತವೆ.

ಜೇನು ಕೃಷಿಯು ಕಾಡು ನಾಶವಾಗುತ್ತಿರುವುದರಿಂದ ಲಾಭದಾಯಕವಾಗಿ ನಡೆಸಲ್ಪಡುವುದಿಲ್ಲ

ಒಟ್ಟಾಗಿ ಹೇಳುವುದಾದರೆ ಪಂಚಾಯತ್‌ನ ಪ್ರಾಕೃತಿಕ ಸಂಪತ್ತು ಕಾಸರಗೋಡಿನ ಇತರ ಗ್ರಾಮೀಣ ಪಂಚಾಯತ್‌ಗಳಿಗಿಂತ ಭಿನ್ನವಾಗಿಲ್ಲ.

ಸಂಪನ್ಮೂಲ ಸಂಗ್ರಹ

ಪೈವಳಿಕೆ ಗ್ರಾಮ ಪಂಚಾಯತು II Grade ಪಂಚಾಯತ್ ಆಗಿರುತ್ತದೆ. ಜನಸಂಖ್ಯೆಯ ಹೆಚ್ಚಿನ ಭಾಗವು ಬಡವರೂ, ಅದರಲ್ಲೂ ಸ್ವಲ್ಪ ಅಂಶವು ದಾರಿದ್ರ್ಯ ರೇಖೆಗಿಂತ ಕೆಳಗಿನ ಮಟ್ಟದಲ್ಲಿ ಜೀವಿಸುವವರೂ ಆಗಿರುತ್ತಾರೆ. ನಮ್ಮ ಪಂಚಾಯತಿನ ಜನರು ಎದುರಿಸುತ್ತಿರುವ ಪ್ರಧಾನ ಸಮಸ್ಯೆ ಬಡತನ ಮತ್ತು ನಿರುದ್ಯೋಗ. ಪರಿಣಾಮ ಬಂಡವಾಳದ ಕೊರತೆ. ಕೃಷಿ ವಿಭಾಗದಲ್ಲಿ ಬಂಡವಾಳ ಹೂಡಿಕೆಯ ಜನರಲ್ಲಿ ಹೆಚ್ಚು ಆಕರ್ಷವಾಗಿಲ್ಲ. ಆದುದರಿಂದ ಆಹಾರ ಬೆಳೆಗಳಲ್ಲಾಗಲೀ ವಾಣಿಜ್ಯ ಬೆಳೆಗಳಲ್ಲಾಗಲೀ ಪಂಚಾಯತಿನ ಕೊಡುಗೆ ನಗಣ್ಯ. ಕೈಗಾರಿಕೆಗಳಲ್ಲಿ ಈ ತನಕ ಯಾವುದೇ ಪ್ರಗತಿಯಿಲ್ಲ

ಕಟ್ಟಡ ತೆರಿಗೆಯಾಗಿ 1995-96 ರಲ್ಲಿ ರೂ 1,54,613-15 ಸಂಗ್ರಹವಾಗಿರುತ್ತದೆ. ಇದರೊಂದಿಗೆ ಉದ್ಯೋಗ ತೆರಿಗೆ ರೂ. 83,876 ಸಂಗ್ರಹವಾಗುತ್ತದೆ. ಆಸ್ತಿ ಬದಲಾವಣೆಯ ಸುಂಕವು ರೂ. 1,33,947 ಇವುಗಳಲ್ಲದೆ ಸರಕಾರದ ವಿವಿಧ ಗ್ರಾಂಟುಗಳು JRY, United Fund ಇತ್ಯಾದಿಗಳು ಈಗ ಪಂಚಾಯತಿನ ಪ್ರಧಾನ ವರಮಾನ ಮೂಲವಾಗಿರುತ್ತದೆ. 1995-96 ರಲ್ಲಿ ಒಟ್ಟು ಸ್ವೀಕೃತಿಯು ರೂ. 11430697 ಆಗಿರುತ್ತದೆ. ಒಟ್ಟು ಸಂದಾಯವು ರೂ. 1394439-60 ಆಗಿರುತ್ತದೆ. ಇದರಲ್ಲಿ ಉಳಿತಾಯದ ಮೊತ್ತವನ್ನು Spill over ಆಗಿ ಬಳಸಿರುತ್ತದೆ.

ವರಮಾನ ವರ್ಧನೆಗಿರುವ ಸಲಹೆಗಳು

ವರಮಾನ ಹೆಚ್ಚಿಸುವವರೇ ಕೃಷಿ ಉತ್ಪತ್ತಿಯನ್ನು ಹೆಚ್ಚಿಸುವ ವ್ಯವಸ್ಥೆ ಮಾಡಬೇಕು. ಕೃಷಿ ವರಮಾನದ ಯಥಾರ್ಥ ಸರ್ವೆ ಆಗಬೇಕು. ಕೈಗಾರಿಕೆ ಯೂನಿಟ್‌ಗಳನ್ನು ಸ್ಥಾಪಿಸುವರೇ ಪ್ರಯತ್ನಗಳು ನಡೆಯಬೇಕು. ತರಕಾರಿ ಕೃಷಿ, ಜಾನುವಾರು ಸಾಕಣೆಗಳಿಗೆ ಪ್ರೋತ್ಸಾಹ. ವಾಣಿಜ್ಯ ಸಂಕೀರ್ಣ ನಿರ್ಮಿಸಿ ಬಾಡಿಗೆಗೆ ಕೊಡುವುದಲ್ಲದೆ ಮೀನು, ಮಾಂಸ ಮತ್ತು ತರಕಾರಿ ಮಾರುಕಟ್ಟೆಗಳ ಸ್ಥಾಪನೆಯಾಗಬೇಕು ಜನರಿಗೆ ಅಗತ್ಯ ವಿಗುವ ತಾಂತ್ರಿಕ ಜ್ಞಾನ ನೀಡಬೇಕು. ಮಧ್ಯವರ್ತಿಗಳಿಂದ ರಕ್ಷಣೆ ಪಡೆಯಲು ಮಾರುಕಟ್ಟೆಗಳ ವ್ಯವಸ್ಥೆಯಾಗಬೇಕು. ಕಲ್ಯಾಣ ಮಂಟಪಗಳ ನಿರ್ಮಾಣವಾದರೆ ಬಾಡಿಗೆಯ ರೂಪದಲ್ಲಿ ವರಮಾನ ಸಿಗಬಹುದು. ಉದ್ದೇಶಿತ ಗ್ರಾಂಟುಗಳನ್ನು ಅವಲಂಬಿಸದೆ ಇತರ ತೆರಿಗೆಗಳನ್ನು ಹೆಚ್ಚಿಸಿ ಆ ಮೂಲಕ ವರಮಾನವನ್ನು ಹೆಚ್ಚಿಸುವುದರಿಂದ ಪಂಚಾಯತಿನ ಅಭಿವೃದ್ಧಿ ಕಾಮಗಾರಿಗಳಿಗೆ ಇದನ್ನು ವಿನಿಯೋಗಿಸುವುದಲ್ಲದೆ, ಮೈನಸ್ ಫಂಡಿನಿಂದಲೂ ನಮ್ಮ ಗ್ರಾಮ ಪಂಚಾಯತನ್ನು ವಿಮುಕ್ತಿಗೊಳಿಸಬಹುದು.

ಪೈವಳಿಕೆ ಗ್ರಾಮ ಪಂಚಾಯತು-ಆಯ ವಿವರ

A. ಸ್ವಂತ ವರಮಾನ

ಕ್ರ.ಸಂ.	ಆದಾಯ ಮೂಲಗಳು	1993-94	1994-95	1995-96
1.	ಕಟ್ಟಡ ತೆರಿಗೆ	131040.50	140196.05	154613.15
2.	ಉದ್ಯೋಗ ತೆರಿಗೆ	86816.00	108705.00	83876.00
3.	ಮನೋರಂಜನಾ ತೆರಿಗೆ	36.25	24.00	27.00
4.	ಪರವಾನಗಿ ಶುಲ್ಕ (Licence Fee)	5883.50	6323.00	6313.00
5.	ಇತರ ಬಾಡಿಗೆ ವಿಲಂ	415817.30	138429.75	45875.00
	ಒಟ್ಟು	639593.55	393677.80	290704.15

B. ಸರಕಾರೀ ಮಂಜೂರಾತಿಗಳು (ಅನುದಾನಗಳು)

ಕ್ರ.ಸಂ.	ಆದಾಯಮೂಲಗಳು	1993-94	1994-95	1995-96
1.	ಆಸ್ತಿಬದಲಾವಣೆಯತೆರಿಗೆ	166329.00	144585.00	133947.00
2.	ತೆರಿಗೆಮೂಲದಿಂದಗ್ರಾಂಟ್	111838.00	127949.00	129302.00
3.	Establishment Grant	-	-	-
4.	V.R.M. Grant	42400.00	39203.00	40094.00
5.	V.T.C. Grant	-	23000.00	395961.00
6.	M.I. Grant	-	3400.00	3400.00
	ಒಟ್ಟು	320567.00	338137.00	702704.00

ಆಯ

C. ಇನ್ನಿತರ ಮೂಲಗಳು

ಕ್ರ.ಸಂ.	ಆದಾಯ ಮೂಲಗಳು	1993-94	1994-95	1995-96
1.	UNITED Fund	3,04000.00	4,00100.00	4,13540.00
2.	Deposit	3823.25	4511.47	13749.00
3.	Droght Relief	- 307823.25	- 404611.47	10000.00 437289.00
	ಒಟ್ಟು (A+B+C)	12,67983.80	11,36425.94	14,30697.00

ವ್ಯಯ

ವ್ಯಯ ಕ್ರ.ಸಂ.	ವ್ಯಯದ ಮೂಲಗಳು	1993-94	1994-95	1995-96
1.	ಆಡಳಿತ ಖರ್ಚು	324912.10	318929.00	306163.70
2.	ಕಾಮಗಾರಿಕೆ	217517.30	288435.00	229120.00
3.	ವಿದ್ಯಾಭ್ಯಾಸ	2138.45	1987.00	2158.00
4.	ಇತರ	701940	785088.60	856997.90
	ಒಟ್ಟು	1246508.25	1118005.60	1394439.60

ಪೈವಳಿಕೆ ಗ್ರಾಮ ಪಂಚಾಯತ್ ಪರಿಧಿಯೊಳಗಿರುವ

ವಾಣಿಜ್ಯ ಬೇಂಕುಗಳು

ಕ್ರ.ಸಂ. ಹೆಸರು

1. Vijaya Bank-Bayar I
2. Syndicate Bank-Paivalike
3. North Malabar Gramin Bank, Bayar
4. North Malabar Gramin Bank, Permude
5. North Malabar Gramin Bank Jodukalle

ಸಹಕಾರಿ ಬೇಂಕುಗಳು

ಕ್ರ.ಸಂ.	ಹೆಸರು	Deposit	Loans
1.	Bayar Service Co-operative Bank		
2.	Paivalike Co-operative Bank		
3.	Campco-Bayar		




KARNATAKA STATE
VORKADY PANCHAYAT
MEENJA PANCHAYAT
UPPALA RIVER
KANIYALA RIVER
MANGALPADY PANCHAYAT
SUVARNA HOLE
KUMBALA PANCHAYAT
PUTHIGE PANCHAYAT

ಕೃಷಿ ಮತ್ತು ನೀರಾವರಿ

ನಮ್ಮ ಪಂಚಾಯತ್ ಹಳ್ಳಿ ಮತ್ತು ಗುಡ್ಡಗಳಿಂದ ಕೂಡಿದ ಸುಂದರವಾದ ಪ್ರದೇಶವಾಗಿದೆ. ಹಳ್ಳಿಗಳಲ್ಲಿ ಹಿಂದಿನ ಕಾಲದಿಂದಲೂ ಮುಖ್ಯವಾಗಿ ಭತ್ತದ ಕೃಷಿಯನ್ನು ಮಾಡುತ್ತಿದ್ದರು. ಭತ್ತವು ನಮ್ಮ ಆಹಾರದ ಬೆಳೆಯಾಗಿದೆ. ಇದನ್ನು ಮೂರು ಹಂತಗಳಲ್ಲಿ ಬೆಳೆಸಲಾಗುವುದು. ಒಂದನೇ ಬೆಳೆಯನ್ನು ಜೂನ್ ತಿಂಗಳಲ್ಲಿ, ಎರಡನೇ ಬೆಳೆಯನ್ನು ಒಕ್ಟೋಬರ ಯಾ ನವಂಬರ ತಿಂಗಳಲ್ಲಿ ಮತ್ತು ಮೂರನೇ ಬೆಳೆಯನ್ನು ಫೆಬ್ರವರಿ ತಿಂಗಳುಗಳಲ್ಲಿಯೂ ಪ್ರಾರಂಭಿಸಲಾಗುವುದು. ಭತ್ತದ ಕೃಷಿಗೆ ಸಾಧಾರಣ ಮೂರು ತಿಂಗಳವರೆಗೆ ನೀರು ಬುಡದಲ್ಲಿ ನಿಲ್ಲಬೇಕಾಗುವುದು. ಒಂದನೇ ಬೆಳೆಗೆ ಏಪ್ರಿಲ್ ಯಾ ಮೇ ತಿಂಗಳಲ್ಲಿ ಎತ್ತುಗಳು ಅಥವಾ ಕೋಣಗಳನ್ನು ಕಟ್ಟಿ ಹೂಟೆ ಮಾಡಿ ನೇಜಿ ಹಾಕುವರು. ಹೂಟೆಗೆ ಮರದಿಂದ ತಯಾರಿಸಿದ ನೊಗ, ನೇಗಿಲುಗಳನ್ನು ಉಪಯೋಗಿಸಲಾಗುವುದು. ಭತ್ತದ ಸಸಿಗಳಿಗೆ (ನೇಜಿಗೆ) ಮೂವತ್ತು ಅಥವಾ ಮೂವತ್ತೈದು ದಿನಗಳಾಗುವುದಕ್ಕೆ ಮೊದಲಾಗಿಯೇ ಕಿತ್ತು ಬೇರೆ ಹಸನಾಗಿ ಉತ್ತು ಹದಗೊಳಿಸಿದ ಗದ್ದೆಗಳಲ್ಲಿ ನೆಡಬೇಕು. ಈ ಕೆಲಸಗಳನ್ನು ಹೆಚ್ಚಾಗಿ ಹೆಂಗಸರು ಮಾಡುತ್ತಾರೆ. ನೇಜಿ ತೆಗೆಯುವಾಗಲೂ, ನೆಡುವಾಗಲೂ ಹೆಂಗಸರು ತುಳು ಪಾಡ್ದನಗಳನ್ನು ಹಾಡುತ್ತಾರೆ. ಉದಾ: ಓ ಬೇಲೆ, ಲಕ್ಕುವರೇ ಲಕ್ಕುಜರೇ, ಮಂಜಟಿ ಕೋಣ, ಮುಂತಾದ ಹಾಡುಗಳು ಗದ್ದೆಗಳನ್ನು ಸಮತಟ್ಟಾಗಿ ಮತ್ತು ನೀರು ನಿಲ್ಲುವಂತೆ ಮಾಡಲಾಗುವುದು. ಪ್ರತಿ ಗದ್ದೆಗಳನ್ನು ಆರು ಯಾ ಏಳು ಸಾಲುಗಳಷ್ಟು ಉತ್ತು ಗೊಬ್ಬರ, ಸೊಪ್ಪು ಬೂದಿ ಮುಂತಾದುವುಗಳನ್ನು ಹಾಕಬೇಕು. ನೇಜಿ ನೆಟ್ಟ ಬಳಿಕ ಗದ್ದೆಗಳಲ್ಲಿ ಮೂರು ತಿಂಗಳ ಕಾಲ ನೀರು ಇರುವಂತೆ ಜಾಗ್ರತೆ ವಹಿಸಬೇಕು. ಈ ಬೇಸಾಯವನ್ನು "ಏಣಿಲ್" (ಖಾರಿಫ್) ಬೇಸಾಯವೆಂದು ಕರೆಯುತ್ತಾರೆ. ಈ ಬೇಸಾಯವನ್ನು ಬೆಟ್ಟುಗದ್ದೆಗಳಲ್ಲಿಯೂ ಬೆಳೆಸಲಾಗುವುದು. ಕಾರಣ, ಜೂನ್, ಜುಲೈ, ಆಗಸ್ಟ್ ತಿಂಗಳಲ್ಲಿ ಧಾರಾಳ ಮಳೆ ಬರುವುದರಿಂದ ಈ ಬೇಸಾಯಕ್ಕೆ ಬೇಕಾದ ನೀರು ದೊರೆಯುತ್ತದೆ. ಬೆಳೆತು ಹಣ್ಣಾದ ಪೈರನ್ನು ಸಪ್ಟಂಬರ, ಒಕ್ಟೋಬರ, ತಿಂಗಳುಗಳಲ್ಲಿ ಕೊಯ್ಯಲಾಗುವುದು. ಮನೆಯ ಅಂಗಳಕ್ಕೆ ಸೆಗಣಿ ಸಾರಿಸಿ ಪೈರನ್ನು ತಂದು ಆನೆಪಡಿಗಳಿಗೆ ಬಡಿದು ಭತ್ತವನ್ನು ಪ್ರತ್ಯೇಕಿಸಲಾಗುವುದು. ಭತ್ತವನ್ನು ಚೆನ್ನಾಗಿ ಒಣಗಿಸಿ ಹೊಟ್ಟುಗಳನ್ನು ಪ್ರತ್ಯೇಕಿಸಿ ಕಣಜ (ಕದಿಕೆ)ಗಳಲ್ಲಿ ಶೇಖರಿಸಿಡಲಾಗುವುದು. ಭತ್ತವನ್ನು ಹಂಡೆಗಳಲ್ಲಿ ಬೇಯಿಸಿ ಒಣಗಿಸುವರು. ಈ ಕೆಲಸಗಳನ್ನು ಹೆಚ್ಚಾಗಿ ಹೆಂಗಸರೇ ಮಾಡುವರು ಬೇಯಿಸಿ ಒಣಗಿಸಿದ ಭತ್ತವನ್ನು ಮೂರು, ನಾಲ್ಕು ಹೆಂಗಸರು ಸೇರಿ ಒನಕೆಗಳಿಂದ ಕುಟ್ಟುವರು. ಆಗ ಭತ್ತದ ಹೊಟ್ಟು (ಉಮಿ) ಮತ್ತು ತೌಡು ಬೇರ್ಪಡುವುದು. ಇದನ್ನು ಗೆರಸೆ (ತಡ್ಪೆ)ಗಳ ಸಹಾಯದಿಂದ ಗಾಳಿಸಿದಾಗ ಅಕ್ಕಿಯು ಬೇರ್ಪಡುವುದು. ಈ ಅಕ್ಕಿಯನ್ನು 'ಕುಟ್ಟಿನ'ದ ಅಕ್ಕಿ ಎಂದು ಕರೆಯುವರು. ಇದು ನಮಗೆ ಉತ್ತಮವಾದ ಆಹಾರವಾಗಿದೆ. ಭತ್ತವನ್ನು ಚೆನ್ನಾಗಿ ಒಣಗಿಸಿ (ಬೇಯಿಸದೆ) ಕುಟ್ಟಿ ಸಿಕ್ಕಿದ ಅಕ್ಕಿಯನ್ನು "ಬೆಳ್ತಿಗೆ" ಅಕ್ಕಿ ಎನ್ನುತ್ತೇವೆ.

ಭತ್ತದ ಬೇಸಾಯವನ್ನು ಎರಡನೇ ಬೆಳೆಯೇ "ಸುಗ್ಗಿ" ಬೇಸಾಯ ಆಗಿದೆ. ಈ ಬೆಳೆಯನ್ನು ಒಂದನೇ ಬೆಳೆಯನ್ನು ಕಟಾವು ಮಾಡಿದ ಕೂಡಲೇ ಅಂದರೆ ಸೆಪ್ಟಂಬರ್ ಯಾ ಒಕ್ಟೋಬರ್ ತಿಂಗಳಲ್ಲಿ ಆರಂಭಿಸಲಾಗುವುದು. ಎರಡು ಸಾಲು ಗದ್ದೆಯನ್ನು ಉತ್ತು ಬಳಿಕ ಹಲಗೆ ಹಾಕಿ ಮೆಟ್ಟಿ ಹಾಕಲಾಗುವುದು. ಬಳಿಕ ಸೊಪ್ಪು ಹಟ್ಟಿಗೊಬ್ಬರವನ್ನು ಹಾಕಿ ಗದ್ದೆಯನ್ನು ಹದಗೊಳಿಸುತ್ತಾರೆ. ಸುಗ್ಗಿಯಲ್ಲಿ ಬಿತ್ತನೆ ಮಾಡುವ ರೂಢಿಯೂ ಇರುವುದು. ಈ ಬೆಳೆಯನ್ನು ನೀರಿನ ಆಶ್ರಯವಿರುವ ಬಯಲು ಪ್ರದೇಶಗಳಲ್ಲಿ ಬೆಳೆಸುವರು. ನೀರಿನ ಸೌಕರ್ಯಕ್ಕೆ ತೋಡುಗಳಿಗೆ ಒಡ್ಡುಗಳನ್ನು ನಿರ್ಮಿಸಿ ನೀರು ಒದಗಿಸಲಾಗುವುದು. ಒಡ್ಡುಗಳಲ್ಲಿ ಸಂಗ್ರಹವಾದ ನೀರನ್ನು ಎತ್ತರದ ಗದ್ದೆಗಳಿಗೆ ಕೈ ದಂಬೆಗಳ ಸಹಾಯದಿಂದ ಗದ್ದೆಗಳಿಗೆ ಹಾಯಿಸುತ್ತಾರೆ. ಕೆರೆಯ ನೀರನ್ನು ಏತಗಳಿಂದಲೂ, ಪಂಪುಗಳಿಂದಲೂ, ಮೇಲೆತ್ತುವರು. ಬಡಗೈತರು ಹೆಚ್ಚಾಗಿ ಏತಗಳನ್ನೇ ಬಳಸುತ್ತಿದ್ದರು.

ಮೂರನೇ ಬೆಳೆಯನ್ನು "ಕೊಳಕೆ" ಎನ್ನುವರು. ಈ ಬೆಳೆಯನ್ನು ಧಾರಾಳ ನೀರು ಇರುವ ಪ್ರದೇಶಗಳಲ್ಲಿ ಬೆಳೆಸಲಾಗುವುದು. ನದೀ ತೀರದಲ್ಲಿ ಹೆಚ್ಚಾಗಿ ಬೆಳೆಸುವರು ಇದಕ್ಕೆ ಏತಗಳ ಸಹಾಯದಿಂದಲೂ ಪಂಪುಗಳಿಂದಲೂ ನೀರನ್ನು ಹಾಕುವರು. ನೀರು ಹರಿದು ಹೋಗುವ ತೋಡುಗಳಿಗೆ ಮಣ್ಣಿನ ಕಟ್ಟುಗಳನ್ನು ನಿರ್ಮಿಸಿ ನೀರುಗದ್ದೆಗೆ ಹರಿಯುವಂತೆ ಮಾಡುವರು. ಈ ಕ್ರಮವು ಲಾಭಕರವಾಗಿದೆ. ಮೂರನೇ ಬೆಳೆಗೆ ಧಾರಾಳ ನೀರು ಇಲ್ಲದ ಗದ್ದೆಗಳಲ್ಲಿ ಧಾನ್ಯ ಕೃಷಿ ಬೆಳೆಸಲಾಗುವುದು. ಉದ್ದು, ಹೆಸರು, ಚೋರ, ಹುರುಳಿ, ಮುಂತಾದುವುಗಳನ್ನು ಬೆಳೆಸುವರು. ಈ ಬೆಳೆಗಳಿಗೆ ಗದ್ದೆಯನ್ನು ಮೂರು ಸಾಲು ಉತ್ತು ಬೂದಿಯನ್ನು ಹಾಕಿ ಬೀಜವನ್ನು ಬಿತ್ತುವರು. ನೀರಿನ ತೇವಾಂಶ ಮಣ್ಣಿನಲ್ಲಿ ಕಡಿಮೆ ಸಮಯ ಉಳಿಯುವ ಗದ್ದೆಗಳಲ್ಲಿ ಭತ್ತದ ಕಟಾವಿಗಿಂತ ಮೊದಲೇ ಧಾನ್ಯವನ್ನು ಬಿತ್ತುವುದೂ ಉಂಟು. ಕೆಲವು ಗದ್ದೆಗಳಲ್ಲಿ ಈ ಸಮಯದಲ್ಲಿ ತರಕಾರಿಗಳನ್ನು ಬೆಳೆಸುವರು. ಉದಾ : ಸೌತೆ, ಚೀನಿಕಾಯಿ, ಕುಂಬಳ, ಅಲಸಂಡೆ, ಬೆಂಡೆ, ತೊಂಡೆ, ಮೆಣಸು, ಗೆಣಸು, ಹಾಗಲ, ಪಡುವಲ ಮುಂತಾದ ತರಕಾರಿಗಳನ್ನು ಮಾಡುವರು. ಗುಡ್ಡ ಪ್ರದೇಶದ ಸಮತಟ್ಟಾದ ಸ್ಥಳಗಳಲ್ಲಿ ಹೊಗೆಸೊಪ್ಪು (ತಂಬಾಕು) ಬೆಳೆಸುತ್ತಿದ್ದರು. ಈ ಬೆಳೆಗೆ ಧಾರಾಳ ಹಟ್ಟಿ ಗೊಬ್ಬರವನ್ನು ಉಪಯೋಗಿಸುತ್ತಿದ್ದರು. ಇದರ ಎಡೆಯಲ್ಲಿ ಕುಂಬಳ ಕಾಯಿ, ಕಲ್ಲಂಗಡಿ (ಬಚ್ಚಂಗಾಯಿ) ಮೊದಲಾದವುಗಳನ್ನು ಬೆಳೆಸುವರು. ಇದಕ್ಕೆ ಏತಗಳ ಸಹಾಯದಿಂದ ನೀರನ್ನು ಹಾಯಿಸುತ್ತಿದ್ದರು. ಗದ್ದೆಗಳಿಗೆ ಧಾರಾಳ ಹಸಿರುಸೊಪ್ಪು ಮತ್ತು ಹಟ್ಟಿ ಗೊಬ್ಬರಗಳನ್ನು ಹಾಕುವುದರಿಂದ ಫಸಲು ಹೆಚ್ಚು ದೊರೆಯುತ್ತಿತ್ತು. ಕ್ರಿಮಿಕೀಟಗಳ ಬಾಧೆಯೂ ಕಡಿಮೆಯಾಗಿತ್ತು.

ಈಗ ನಮ್ಮ ಪಂಚಾಯತಿನ ಬಯಲು ಪ್ರದೇಶಗಳಲ್ಲಿ ಮೊದಲಿನ ಭತ್ತದ ಕೃಷಿಯ 1/3 ಭಾಗದಷ್ಟು ಸ್ಥಳಗಳಲ್ಲಿ ಮಾತ್ರ ಕೃಷಿಯನ್ನು ಮಾಡುವರು. ಬೇಸಾಯ ಮಾಡಲು ಜಾನುವಾರುಗಳ ಬಳಕೆಯು ಕಡಿಮೆಯಾಗುತ್ತಿದೆ. ಕೆಲವೆಡೆ ಗದ್ದೆ ಉಳಲು ಟಿಲ್ಲರ್ ಯಂತ್ರಗಳನ್ನು ಉಪಯೋಗಿಸುತ್ತಾರೆ. ಸಣ್ಣ ರೈತರೇ ಹೆಚ್ಚಿರುವ ಈ ಪ್ರದೇಶದಲ್ಲಿ ಆರ್ಥಿಕವಾಗಿ ಹಿಂದುಳಿದುದರಿಂದ ಟಿಲ್ಲರನ್ನು ಬಳಸಿ ಉಳುಮೆ ಮಾಡುವುದು ಕಷ್ಟಸಾಧ್ಯ. ಇದರಿಂದಾಗಿ ಸಣ್ಣ ರೈತರಿಗೆ ಭತ್ತದ ಕೃಷಿಯು ಕಷ್ಟವಾಗಿದೆ. ಜಾನುವಾರುಗಳ ಸಾಕಣೆಯು ದುಬಾರಿಯಾದುದರಿಂದ ಹಟ್ಟಿಗೊಬ್ಬರದ ಬಳಕೆಯು ಕಡಿಮೆಯಾಗಿದೆ. ಹಟ್ಟಿಗೊಬ್ಬರದ ಬದಲಿಗೆ ರಾಸಾಯನಿಕ ಗೊಬ್ಬರವನ್ನು ಉಪಯೋಗಿಸುತ್ತಾರೆ. ಇದರಿಂದಾಗಿ ಕ್ರಿಮಿಕೀಟಗಳ ಹಾವಳಿ ಹೆಚ್ಚಾಗಿದೆ. ಹಿಂದಿನ ಕಾಲದಷ್ಟು ಫಲಸು ಸಿಗುವುದಿಲ್ಲ.

ನೀರಾವರಿ ಸೌಕರ್ಯಗಳಿಗಾಗಿ ಈಗ ಪಂಪುಸೆಟ್‌ಗಳು ಹೆಚ್ಚಾಗಿ ಬಳಕೆಯಲ್ಲಿದೆ. ಗದ್ದೆ ಬೇಸಾಯದ ಕೆಲಸಗಳಿಗೆ ಕೂಲಿ ಮಾಡಲು ಜನರು ಸಿಗದಿರುವುದೇ ಒಂದು ಸಮಸ್ಯೆಯಾಗಿದೆ. ಯಾಕೆಂದರೆ ಇದರಲ್ಲಿ ಸಿಗುವ ಕೂಲಿಯು ಜೀವನ ನಿರ್ವಹಿಸಲು ಸಾಕಾಗುವುದಿಲ್ಲ. ಕೆಲಸವೂ ಕಷ್ಟ. ಕೂಲಿ ಕಡಿಮೆ, ಅಲ್ಲದೆ ಬಿಸಿಲು ಮಳೆಗಳಿಗೆ ಮೈಯೊಡ್ಡಿ ಕೆಲಸ ಮಾಡಬೇಕಾಗಿದೆ. ಆದುದರಿಂದ ಹೆಂಗಸರು ತಮ್ಮ ಮನೆಗಳಲ್ಲಿಯೇ

ಇದ್ದು ಬೀಡಿಕಟ್ಟುವ ಉದ್ಯಮವನ್ನು ಅವಲಂಬಿಸಿರುತ್ತಾರೆ. ಇದರಲ್ಲಿ ಅವರಿಗೆ ಸಂಬಳ, ಬೋನಸ್, ಮತ್ತು ಇತರ ಸೌಕರ್ಯಗಳು ಸಿಗುವುದು. ಗಂಡಸರು ಗದ್ದೆ ಬೇಸಾಯವನ್ನು ಬಿಟ್ಟು ಬೇರೆ ಕೆಲಸಗಳಿಗೆ ಹೋಗುತ್ತಾರೆ. ತೋಟಗಳಲ್ಲಿ ಅಥವಾ ಇನ್ನಿತರ ಸುಲಭದ ಕೆಲಸಗಳಿಂದ ದಿನವೊಂದಕ್ಕೆ 100 ರಿಂದ 150 ರೂ.ಗಳಷ್ಟು ಪರಮಾನ ಗಳಿಸುತ್ತಾರೆ. ಬೇಸಾಯದ ಕೃಷಿಯಿಂದ ಹೆಚ್ಚು ಆದಾಯವನ್ನು ಪಡೆಯಲು ಸಾಧ್ಯವಿಲ್ಲ. ಮಾರುಕಟ್ಟೆಯಲ್ಲಿ ಅಕ್ಕಿಯ ಬೆಲೆಯು ಬಹಳ ಕಡಿಮೆಯಾಗಿದೆ. (ಉಳಿದ ಧವಸ ಧಾನ್ಯಗಳ ಬೆಲೆಗೆ ಹೋಲಿಸಿದಲ್ಲಿ)

ಈ ಎಲ್ಲಾ ಕಾರಣಗಳಿಂದಾಗಿ ಹಳ್ಳಿಯ ಭತ್ತದ ಕೃಷಿ ಯೋಗ್ಯವಾದ ಗದ್ದೆಗಳಲ್ಲಿ ಜನರು ಅಡಿಕೆ ಕೃಷಿಯನ್ನು ಮಾಡುತ್ತಿದ್ದಾರೆ. ಈ ಕೃಷಿಗೆ ವರ್ಷದಲ್ಲಿ ಆರು ತಿಂಗಳು ನೀರಿನ ಸೌಲಭ್ಯವಿದ್ದರೆ ಸಾಕಾಗುವುದು. ಅಡಿಕೆ ಸಸಿಗಳಿಗೆ ವಾರಕ್ಕೊಮ್ಮೆ ನೀರು ಹಾಕಿದರೆ ಸಾಕಾಗುವುದು. ಅಡಿಕೆ ಕೃಷಿಯು ಪ್ರಾಮುಖ್ಯ ಆರ್ಥಿಕ ಬೆಳೆಯಾಗಿದೆ. ಈಗ ಒಂದು ಕಿಲೋ ಅಡಿಕೆಗೆ (ಗೋಟುಅಡಿಕೆ) ಸಾಧಾರಣ ರೂ. 65/- ರಿಂದ 75/- ರವರೆಗೆ ಮಾರುಕಟ್ಟೆಯಲ್ಲಿ ದೊರೆಯುವುದು. ಅಡಿಕೆ ಸಸಿಗಳನ್ನು ನೆಟ್ಟು ನಾಲ್ಕೈದು ವರುಷಗಳಲ್ಲಿ ಫಲವನ್ನು ಪಡೆಯಬಹುದು. ಮರದ ಬುಡಕ್ಕೆ ಸೊಪ್ಪು, ಹಟ್ಟಿ ಗೊಬ್ಬರಗಳೊಂದಿಗೆ ಈಗ ಕೃತಕ ಗೊಬ್ಬರಗಳನ್ನು ಹಾಕುವುದುಂಟು. ತೋಟಗಳಿಗೆ ನೀರು ಹಾಕಲು ಪಂಪುಗಳನ್ನು ಬಳಸಲಾಗುವುದು. ಸ್ಪ್ರಿಂಕ್ಲರ್ ಮತ್ತು ಹನಿ ನೀರಾವರಿ ಯೋಜನೆಯಂತಹ ಕೃಷಿ ಅಭಿವೃದ್ಧಿ ಕಾರ್ಯಗಳಿಗೆ ಸರಕಾರದಿಂದ ಹಲವು ಸೌಲಭ್ಯಗಳು ಇದೆ. ಬ್ಯಾಂಕು, ಸಹಕಾರಿ ಸಂಘಗಳು ಸಾಲದ ಸೌಲಭ್ಯಗಳನ್ನು ಒದಗಿಸುವುದು. ಅಡಿಕೆ ತೋಟದಲ್ಲಿ ಉಪ ಬೆಳೆಯಾದ, ಬಾಳೆ, ಕರಿಮೆಣಸು, ಕೊಕ್ಕೋ ಮುಂತಾದ ಕೃಷಿಗಳನ್ನು ಮಾಡುತ್ತಾರೆ. ವಿದ್ಯುತ್ ಇಲ್ಲದ ಪ್ರದೇಶಗಳಲ್ಲಿ ಸಣ್ಣ ಪಂಪು ನಡೆಸಲು ಚಿಮಿಣಿ ಎಣ್ಣೆ ಮತ್ತು ದೊಡ್ಡ ಪಂಪುಗಳನ್ನು ನಡೆಸಲು ಡೀಸಿಲ್ ಇವುಗಳ ಅಗತ್ಯವಿದೆ. ಇದರ ಕೊರತೆಯಿಂದಲೂ ಕೃಷಿಕರು ತುಂಬಾ ಕಷ್ಟವನ್ನು ಅನುಭವಿಸುತ್ತಿರುವರು. ಅಡಿಕೆ ತೋಟಕ್ಕಿಂತ ಸ್ವಲ್ಪ ಎತ್ತರದ ಅಂದರೆ ನೀರಾವರಿ ಸ್ವಲ್ಪ ಕಡಿಮೆಯಿರುವ ಪ್ರದೇಶಗಳಲ್ಲಿ ತೆಂಗಿನತೋಟವನ್ನು ಬೆಳೆಸಲಾಗುವುದು. ಇದರ ಎಡೆಯಲ್ಲಿ ಹಸುರು ತರಕಾರಿಗಳನ್ನು ಬೆಳೆಸಬಹುದು. ಈ ತೋಟಗಳಿಂದ ಎತ್ತರದ ಇಳಿಜಾರು ಪ್ರದೇಶಗಳಲ್ಲಿ ಗೇರುಬೀಜದ ಮರಗಳನ್ನು ಬೆಳೆಸಬಹುದು. ಅಲ್ಲದೆ ಬಾಳೆ ಮಾವು, ಪೇರಳೆ, ಚಿಕ್ಕು ಮುಂತಾದ ಫಲವಸ್ತುಗಳ ಕೃಷಿಯನ್ನು ಮಾಡಲಾಗುವುದು. ಈ ಎಲ್ಲಾ ತರದ ಕೃಷಿಗಳಿಗೂ ಸರಕಾರದ ಸಾಲದ ಸೌಲಭ್ಯಗಳಿವೆ. ಅಡಿಕೆ ಕೃಷಿಕರಿಗೆ ವರ್ಷಂಪ್ರತಿ ಫಲಸಿನ ಮೇಲೆ ಬೇಂಕುಗಳಿಂದ ಸಾಲ ಸೌಲಭ್ಯವಿದೆ.

ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆಯು ಸಿಗುವುದಿಲ್ಲ. ಹಳ್ಳಿಗಳಲ್ಲಿ ಮಾರುಕಟ್ಟೆಗಳು ಇರುವುದಿಲ್ಲ. ಈ ಸಂದರ್ಭದಲ್ಲಿ ಮಧ್ಯವರ್ತಿಗಳು ಕೃಷಿಕರಿಂದ ಉತ್ಪನ್ನಗಳನ್ನು ಕೊಂಡುಕೊಂಡು ಪೇಟೆಗಳಿಗೆ ತೆಗೆದುಕೊಂಡು ಯೋಗ್ಯ ಬೆಲೆಗಳಿಗೆ ಮಾರಾಟ ಮಾಡುತ್ತಾರೆ. ಮಧ್ಯವರ್ತಿಗಳು ಹೆಚ್ಚು ಲಾಭವನ್ನು ಗಳಿಸುತ್ತಾರೆ. ಆದುದರಿಂದ ಹಳ್ಳಿ ಹಳ್ಳಿಗಳಲ್ಲೂ ಸಹಕಾರೀ ಮಾರುಕಟ್ಟೆಗಳನ್ನು ಮಾಡಿದಲ್ಲಿ ಕೃಷಿಕರಿಗೆ ಯೋಗ್ಯ ಬೆಲೆಯು ಸಿಕ್ಕಿದಂತಾಗುವುದು. ವಾರಕ್ಕೊಂದಾವರ್ತಿ ಸಂತೆಯ ಏರ್ಪಾಡು ಮಾಡಿದಲ್ಲಿ ತರಕಾರಿ ಮತ್ತು ಕೈಗಾರಿಕಾ ವಸ್ತುಗಳು ಮಾತ್ರವಲ್ಲದೆ ಆಹಾರ ಪದಾರ್ಥಗಳು, ಜೀನಸುಗಳನ್ನು ಮಾರಲು ಮತ್ತು ಕೊಂಡುಕೊಳ್ಳಲು ಅನುಕೂಲವಾಗುವುದು.

ಕೃಷಿಕರೊಳಗೆ ಯೋಗ್ಯ ರೀತಿಯ ಬಾಂಧವ್ಯ ವಿರಬೇಕು. ಒಂದು ಹಳ್ಳಿಯಲ್ಲಿರುವ ಎಲ್ಲಾ ಕೃಷಿಕರು ಒಂದೇ ದಿನ ನೇಜಿ ತೆಗೆಯುವ ಮತ್ತು ನೇಜಿ ನೆಡುವ ಕಾರ್ಯಕ್ರಮವನ್ನು ಇಟ್ಟುಕೊಂಡು ಪರಸ್ಪರ ಸಹಕರಿಸದೆ ಇದ್ದಲ್ಲಿ ಕೂಲಿಗಳ ಅಭಾವದಿಂದಾಗಿ ಕೆಲಸ ಕಾರ್ಯಗಳು ಸ್ಥಗಿತಗೊಳ್ಳುವುದು. ಇಂತಹ ಸಂದರ್ಭದಲ್ಲಿ ಗುಂಪು ಕೃಷಿಯು ಫಲಕಾರಿಯಾಗಿದೆ. ಗುಂಪು ಕೃಷಿ ಪದ್ಧತಿಯಲ್ಲಿ ಎಲ್ಲರಿಗೂ ಕೂಲಿಗಳ ಅಭಾವವು ಕಡಿಮೆಯಾಗುವುದು. ಎಲ್ಲಾ ಭಾಗಗಳಲ್ಲೂ ಏಕರೀತಿಯ ಕೂಲಿಯು ಜಾರಿಯಲ್ಲಿ ಬರುವುದು. ಕೃಷಿಕರಲ್ಲಿ ಒಮ್ಮತದ ಬಾಂಧವ್ಯವು ಬೆಳೆಯುವುದು.

ಕೃಷಿಯಲ್ಲಿ ಯಂತ್ರದ ಉಪಯೋಗವು ಹೆಚ್ಚಾಗಿರುವುದರಿಂದ ಜಾನುವಾರುಗಳ ಬಳಕೆಯು ಬಹಳ ವಿರಳವಾಗಿದೆ. ಇದರಿಂದಾಗಿ ಗೊಬ್ಬರದ ಉತ್ಪಾದನೆಯು ಕಡಿಮೆಯಾಗಿದೆ. ಕೃಷಿಕರು ರಾಸಾಯನಿಕ ಗೊಬ್ಬರವನ್ನೇ ಉಪಯೋಗಿಸಬೇಕಾಗಿದೆ. ಇದರಿಂದಾಗಿ ಮಣ್ಣಿನ ಫಲವತ್ತತೆಯು ಕಡಿಮೆಯಾಗಿದೆ. ಕ್ರಿಮಿಕೀಟಗಳ ಬಾಧೆಯು ಹೆಚ್ಚಾಗಿದೆ. ಪ್ರತಿವರ್ಷವೂ ರಾಸಾಯನಿಕ ಗೊಬ್ಬರವನ್ನೇ ಅವಲಂಬಿಸಿಕೊಂಡಿರಬೇಕು. ಎರೆಹುಳಗಳ ಸಂತಾನವೂ ಕಡಿಮೆಯಾಗುತ್ತಾ ಬರುವುದು. ಇದರ ಪರಿಹಾರಕ್ಕಾಗಿ ಸಾವಯವ ಗೊಬ್ಬರವನ್ನು ಬಳಸುವುದರಿಂದ ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸಬಹುದು. ಕೃಷಿಕರಿಗೆ ಜಾನುವಾರುಗಳನ್ನು ಕೊಂಡುಕೊಳ್ಳಲು ಹಾಗೂ ಸಾಕಲು ಸರಕಾರವು ಯೋಗ್ಯ ರೀತಿಯ ಸಾಲ ಸೌಲಭ್ಯಗಳನ್ನು ಒದಗಿಸಬೇಕು. ಆಗ ಕೃಷಿಕರು ದನಕರುಗಳನ್ನು ಸಾಕಬಹುದು. ಗೊಬ್ಬರದ ಉತ್ಪಾದನೆಯು ಹೆಚ್ಚಾಗುವುದು. ಹಟ್ಟಿ ಗೊಬ್ಬರವು ಎಲ್ಲಾ ಕೃಷಿಗೂ ಸಿಗುವಂತಾಗುವುದು. ಇದರಿಂದಾಗಿ ಉತ್ಪನ್ನ ಹೆಚ್ಚಾಗಬಹುದು.

ಬಂಜರು ಭೂಮಿಯನ್ನು ಕೃಷಿ ಯೋಗ್ಯವಾಗಿ ಮಾಡುವುದು. ಈ ಪ್ರದೇಶಕ್ಕೆ ನೀರಾವರಿ ಸೌಕರ್ಯಗಳನ್ನು ಒದಗಿಸುವುದು, ಸರಕಾರದಿಂದ ಸಾಲ ಸೌಲಭ್ಯಗಳನ್ನು ಒದಗಿಸುವುದು, ಕ್ರಿಮಿಕೀಟಗಳ ನಿವಾರಣಾ ಕಾರ್ಯಕ್ರಮಗಳನ್ನು ಜಾರಿಗೊಳಿಸಿದಲ್ಲಿ ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿ ಉಂಟಾಗಬಹುದು.

ಪೈವಳಿಕೆ ಗ್ರಾಮ ಪಂಚಾಯತ್ ಭೂ ಸಂಬಂಧ ವಿವರಗಳು

(Ref a register of B.T. Register)

ವಿಲ್ಲೇಜ್‌ಗಳ ಹೆಸರು	ಭೂಮಿಯ ವಿಸ್ತೀರ್ಣ (ಎಕ್ರೆಗಳು) ಮನೆ ಸ್ಥಳ	ಭೂಮಿ	ಪರಂಬೋಕು	ಬಂಜರು	ಒಟ್ಟು ಸೆಂಟ್ಸ್	ಭೂ ಒಡೆತನ (Owner)ದ ಸಂಖ್ಯೆ 9-10 ಸೆಂಟ್ಸ್	10-25 ಸೆಂಟ್ಸ್	25-50 ಸೆಂಟ್ಸ್	50-100 ಎಕ್ರೆ	1-2 ಎಕ್ರೆ ಗಿಂತಮೇಲೆ	2-5	5ಎಕ್ರೆ
1	2	3	4	5	6	7	8	9	10	11	12	13
ಪೈವಳಿಕೆ	328.66	743.01	184.76	1099.68	5035.61	50	112	118	135	350	250	125
ಚಿಪ್ಪಾರು	60.71	221.31	34.29	273.13	1244.07	22	98	113	122	350	112	55
ಕುಯ್ಯಾರು	59.16	351.56	61.71	1341.40	1813.83	200	200	250	200	200	100	50
ಕುಲ್‌ಮೆಜ್ಜಳ	177.87	662.13	160.93	2799.34	3800.27	100	200	500	300	300	200	100
ಬಾಯಾರು	518.19	132.83	155.49	1814.22	6093.60	115	284	252	318	176	371	209
ಒಟ್ಟು	1144.50	3304.81	597.18	7327.77	1787.38	487.00	8941	233	1075	1376	1033	539

ಪೈವಳಿಕೆ ಪಂಚಾಯತ್

ಪರಂಬೋಕು ಭೂ ಸಂಬಂಧ ವಿವರಗಳು

ಭೂ ವಿಸ್ತೀರ್ಣ (ಎಕ್ರೆಗಳಲ್ಲಿ)

ವಿಲ್ಲೇಜ್‌ಗಳ ಹೆಸರು	ಪೈ	ತೋಟ	ಕೆ	ಹೊಳೆ	ಕೃಷಿ	ಒಟ್ಟು
1	2	3	4	5	6	7
ಪೈವಳಿಕೆ	149.41	52.12	0.76	60.08	-	24.87
ಚಿಪ್ಪಾರು	19.12	12.57	0.06	-	-	1.12
ಕುಡಾಲ್ ಮೇರ್ಕಳ	57.60	14.95	-	80.92	-	475.87
ಬಾಯಾರು	29.42	46.80	1.05	47.17	-	11.20

ಪೈವಳಿಕೆ ಗ್ರಾಮ ಪಂಚಾಯತ್

ಅಳತೆ ಮಾಡಿ ಕೊಡುವಂತಹ ಭೂ ಸಂಬಂಧ ವಿವರಗಳು

(Ref. register No.5)

ವಿಸ್ತೀರ್ಣ ಎಕ್ರೆಗಳಲ್ಲಿ

ವಿಲ್ಲೇಜ್‌ನ ಹೆಸರು	ಮನೆ ಸ್ಥಳ	ಭೂಮಿ	ಬಂಜರು ಭೂಮಿ	ಉಳಿದವು	ಒಟ್ಟು
ಪೈವಳಿಕೆ	-	-	88.89	-	88.89
ಚಿಪ್ಪಾರು	-	-	76.63	-	76.63
ಕುಡಾಲ್ ಮೇರ್ಕಳ	-	-	437.85	-	437.85
ಕಯ್ಯಾರು	-	-	191.32	-	191.32
ಒಟ್ಟು			794.63		794.63

ಸಂರಕ್ಷಿತ ವೃಕ್ಷಗಳ ಬಗ್ಗೆ ವಿವರಗಳು

(Ref. Register No. 5)

ವೃಕ್ಷಗಳ ಸಂಖ್ಯೆ

ವಿಲ್ಲೇಜ್‌ಗಳ ಹೆಸರು	ಬೀಟೆ	ತೇಗು	ಮರುವ ಮಾವು	ಅಣವು	ಶ್ರೀಗಂಧ	ಒಟ್ಟು
ಪೈವಳಿಕೆ	-	-	-		-	-
ಚಿಪ್ಪಾರು	80	1			67	148
ಕುಡಾಲ್ ಮೇರ್ಕಳ	6	116			200	322
ಕಯ್ಯಾರು	-	12			60	72
ಬಾಯಾರು	37	48	-	-	102	187
ಒಟ್ಟು	123	-	129		429	729

ಪಂಚಾಯತಿನ ಅಭಿವೃದ್ಧಿ ಕಾರ್ಯಗಳು

Iನೇ ವಾರ್ಡು :

1. ಬಾಯಾರು ಸುದೆಂಬಳದಲ್ಲಿ ಮತ್ತು ದಳಿಕುಕ್ಕು ಶಾಲೆಯ ಹತ್ತಿರ ಅಣೆಕಟ್ಟುಗಳನ್ನು ನಿರ್ಮಿಸಿದರೆ ಹತ್ತಿರದ ಬಂಜರು ಭೂಮಿಯು ಕೃಷಿ ಯೋಗ್ಯವಾಗುವುದು.

2. ಕಟ್ಟಪುಣಿ ದುರಸ್ಥಿ (ಕಲ್ಲುಗದ್ದೆಯಿಂದ ಒತ್ತರೆ ಬೈಲಿನವರೆಗೆ)

3. ಬಾಯಾರು ಪಂಚಲಿಂಗೇಶ್ವರದೇವಸ್ಥಾನದ ಬಳಿಯಿಂದ ಸುದೆಂಬಳದವರೆಗಿನ ತೋಡಿನ ಬದಿ ಕಟ್ಟುವುದು. ಮತ್ತು ಕಟ್ಟಪುಣಿ ದುರಸ್ಥಿ

4. ಬದಿಯಾರಿನಲ್ಲಿ ಕೊಳವೆ ಬಾವಿ ನಿರ್ಮಾಣ ಮಾಡುವುದು.

5. ಕೃಷಿ ನೀರಾವರಿಗೆ ಬೇಕಾದ ವಿದ್ಯುತ್ ಸರಬರಾಜು ಮಾಡುವುದು.

6. ಪೆಲತ್ತಡ್ಕ ಎಂಬಲ್ಲಿ ಅಣೆಕಟ್ಟು ನಿರ್ಮಿಸಿ ಕೃಷಿಗೆ ನೀರು ಒದಗಿಸುವುದು.

7. ಕನಿಯಾಲ ಪಡೀಲ್‌ನಲ್ಲಿ ಒಂದು ಸಾರ್ವಜನಿಕ ಬಾವಿ

IIನೇ ವಾರ್ಡು

1. ಕನಿಯಾಲದ ಕೃಷಿ ಭೂಮಿಗೆ ವಾಟೆತ್ತಿಲಗುತ್ತು, ಚೇರಾಲು, ಕನಿಯಾಲ, ಬದಿಕಂಬಳ ಗದ್ದೆ, ತಲೆಂಗಳ, ಎಂಬೀ ಸ್ಥಳಗಳಲ್ಲಿ ತೋಡಿಗೆ ಸಣ್ಣ ಸಣ್ಣ ಅಣೆಕಟ್ಟು ಕಟ್ಟಿ (ಚೆಕ್ ಡ್ಯಾಂ) ನೀರು ಒದಗಿಸುವುದು.

2. ಚೇರಾಲಿನಿಂದ ಕನಿಯಾಲದ ಹೊಳೆಯವರೆಗಿನ ತೋಡಿಗೆ ಇಬ್ಬದಿಯನ್ನು ಕಲ್ಲುಗಳಿಂದ ಕಟ್ಟುವುದು. ಹಾಗೂ ತಲೆಂಗಳದಿಂದ ಆವಳ ಸಾಗು-ಮಧುವನ ಪರೆಗಿನ ತೋಡಿನ ಬದಿ ಕಟ್ಟಿ ಕೃಷಿ ಭೂಮಿಯನ್ನು ರಕ್ಷಿಸುವುದು.

3. ಕೃಷಿಗೆ ಟ್ರಾಕ್ಟರ್, ನೇಜಿ ನೆಡುವ ಮತ್ತು ಕೊಯ್ಯುವ ಯಂತ್ರಗಳನ್ನು ವಿನಾಯಿತಿ ದರದಲ್ಲಿ ಒದಗಿಸುವುದು.

4. ಅಡಿಕೆ ಮತ್ತು ತೆಂಗಿನ ಕೃಷಿ ಅಧಿಕವಾಗಿರುವುದರಿಂದ, ಮರ ಏರುವ ಯಂತ್ರ ಒದಗಿಸುವುದು. ರೋಗಗಳನ್ನು ತಡೆಯುವ ಔಷಧಿಗಳು, ಸುಲಭವಾಗಿ ದೊರೆಯುವ ವ್ಯವಸ್ಥೆ ಮತ್ತು ಮರ ಏರುವ ಕಾರ್ಮಿಕರಿಗೆ ಜೀವವಿಮೆ ಮತ್ತು ನಿವೃತ್ತಿ ವೇತನ ನೀಡಬೇಕು.

5. ಚೇರಾಲ್, ತಲೆಂಗಳ, ಆವಳ ಸಾಗು, ಕನಿಯಾಲಗಳಲ್ಲಿ ಚೆಕ್‌ಡೇಮ್ ಕಮ್ ಬ್ರಿಡ್ಜ್ (Checkdam cum bridge) ನಿರ್ಮಾಣ.

6. ಬಳ್ಳೂರು ತೋಡಿಗೆ ನಿರ್ಮಾಣ ಹಂತದಲ್ಲಿರುವ ಸಂಕವನ್ನು ಅಣೆಕಟ್ಟು ಹೊಂದಿದ ಸಂಕ (Checkdam cum bridge) ವನ್ನಾಗಿ ಪರಿವರ್ತಿಸಿದಲ್ಲಿ ಆ ಪ್ರದೇಶದ ಬಂಜರು ಭೂಮಿಯನ್ನು ಕೃಷಿ ಯೋಗ್ಯವಾಗುವುದು.

7. ವ್ಯವಸ್ಥಿತ ಮಾರುಕಟ್ಟೆಯನ್ನು ಪಂಚಾಯತು ಕ್ಷೇತ್ರದಲ್ಲಿ ತೆರೆಯಬೇಕು.

8. ಕೃಷಿ ಪ್ರದೇಶದಲ್ಲಿ ಸಾರ್ವಜನಿಕ ಕೆರೆಗಳನ್ನು ಆಳಬಾವಿಗಳನ್ನು ನಿರ್ಮಿಸಿ ನೀರೆತ್ತುವ ಯಂತ್ರಗಳನ್ನು ಅಳವಡಿಸುವುದು.

IIIನೇ ವಾರ್ಡು

1. ವಿದ್ಯುತ್ ಸಂಪರ್ಕವಿಲ್ಲದೆ ಸಂಕಷ್ಟಕ್ಕೊಳಗಾದ ಕುರುಡಪದವಿನ ಕೃಷಿಕರಿಗೆ ಅಗತ್ಯವಾಗಿ ವಿದ್ಯುತ್ ಸಂಪರ್ಕ ಒದಗಿಸಿದಲ್ಲಿ ಈ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಾಗಬಹುದು.

2. ಕುಡಿಯುವ ನೀರಿನ ಬಾವಿ ಕುರುಡಪದವು ಪರಿಸರದಲ್ಲಿ ಅಗತ್ಯವಿದೆ. ಕುರುಡಪದವು, ಮೂಡಾಯಿಗುಡ್ಡೆ, ಸಮಗಾರಮೂಲೆ, ಬೆಳ್ಳಿಪದವು, ಕುಡಿಯರ ಮೂಲೆ, ಬರಂಗೈ, ಓಟೆಪಡ್ಪು, ಕಾಪಿಕಾಡು, ಕಾಡೂರು, ಗೋಳಿಕಟ್ಟೆ ಎಂಬೀ ಸ್ಥಳಗಳಲ್ಲಿ ಕುಡಿಯುವ ನೀರಿನ ಬಾವಿ ನಿರ್ಮಿಸುವುದು.

3. ಕುರಿಯ ಬಂಡಿಮಾರು ಎಂಬಲ್ಲಿ ಉಪ್ಪಳ ಹೊಳೆಗೆ ದೊಡ್ಡ ಪ ಂಪನ್ನು ಅಳವಡಿಸಿ ಅದರ ಮುಖಾಂತರ ಕುರಿಯ ಬಯಲನ್ನು ದಾಟಿ ಕುರುಡಪದವಿನವರೆಗೂ ನೀರು ಸರಬರಾಜು ಮಾಡಬಹುದು. ಮತ್ತು ಕುರುಡಪದವಿನಲ್ಲಿ ಟ್ಯಾಂಕ್ ಕಟ್ಟಿ ಸುತ್ತುಮುತ್ತಲಿನ ಜನರಿಗೆ ನೀರಿನ ಪೂರೈಕೆ ಮಾಡಬಹುದು.

4. ಮಳೆಗಾಲದ ನೀರಿನ ಶೇಖರಣೆಗಾಗಿ ಕೊಮ್ಮಂಗಳದಲ್ಲಿ ತಡೆಗೋಡೆಗಳನ್ನು ನಿರ್ಮಾಣ ಮಾಡಿ ನೀರಿನ ಸಂಗ್ರಹವಾದಲ್ಲಿ ನೂರಾರು ಎಕ್ರೆ ಬಂಜರು ಭೂಮಿಯನ್ನು ಕೃಷಿಯೋಗ್ಯವಾಗಿ ಮಾಡಬಹುದು. ಕಾಡೂರು, ಕರುವೋಳು ಪ್ರದೇಶದ ತೋಡುಗಳಿಗೆ ಅಲ್ಲಲ್ಲಿ ಅಣೆಕಟ್ಟುಗಳನ್ನು ಕಟ್ಟಬೇಕು.

5. ಕೃಷಿ ಭವನವು ತುಂಬಾ ದೂರವಿರುವ ಕಾರಣ ಕೃಷಿ ಸವಲತ್ತುಗಳಿಂದ ಈ ಪ್ರದೇಶದ ಜನರು ವಂಚಿತರಾಗಿರುವುದರಿಂದ ಕುರುಡಪದವಿನಲ್ಲಿ ಕೃಷಿ ಭವನವನ್ನು ತೆರೆಯಬೇಕು.

6. ಕೃಷಿ ಉತ್ಪನ್ನಗಳ ಸಾಗಾಣಿಕೆಗೆ ಸರಿಯಾದ ಮಾರ್ಗಗಳ ಸವಲತ್ತು ಮತ್ತು ಸರಿಯಾದ ವಾಹನಗಳ ವ್ಯವಸ್ಥೆ ಇಲ್ಲ. ಅದಲ್ಲದೆ ಸಹಕಾರಿ ಸಂಘಗಳ ಅವಶ್ಯಕತೆ ಇದೆ.

7. ಬಬ್ಬರೆಕಲ್ಲು ಎಂಬಲ್ಲಿ ಕೃಷಿ ಭೂಮಿ ತುಂಬಾ ಇರುವುದರಿಂದ ಕೃಷಿ ಸ್ಥಳಗಳಿಗೆ ನೀರಿನ ಪೂರೈಕೆಗಾಗಿ ಸಾರ್ವಜನಿಕ ಪಂಪು ಅಳವಡಿಸುವುದು.

IVನೇ ವಾರ್ಡು

1. ಕೃಷಿಕರಿಗೆ ಅಗತ್ಯವಾದ ವಿದ್ಯುತ್ ಒದಗಿಸಲು ಮೂರು ಹೊಸ ಟ್ರಾನ್ಸ್‌ಫಾರ್ಮರ್‌ಗಳನ್ನು ಸ್ಥಾಪಿಸಬೇಕು. 1) ಚಿಪ್ಪಾರು ಶಾಲಾ ಬಳಿ 2) ಸುಣ್ಣಾಡ 3) ಚಿಪ್ಪಾರು ಪೆರ್ಲದ ಖಿರ್ಪು ಎಂಬಲ್ಲಿ.

2. ಗದ್ದೆ ಬೇಸಾಯಕ್ಕೆ ಬೇಕಾದಂತಹ ರಸಗೊಬ್ಬರ, ಕೀಟನಾಶಕಗಳನ್ನು 70% ಸಬ್ಸಿಡಿ ದರದಲ್ಲಿ ನೀಡಬೇಕು.

3. ಕೃಷಿಗೆ ಬೇಕಾದ ಸೀಮೆಎಣ್ಣೆ ಮತ್ತು ಡೀಸೆಲ್ ಪರ್ಮಿಟ್‌ಗಳನ್ನು ಮತ್ತು ಎಣ್ಣೆಯನ್ನು ಪಂಚಾಯತಿನ ಕೇಂದ್ರದಲ್ಲಿ ವಿತರಣೆಯಾಗುವಂತೆ ಮಾಡಬೇಕು.

4. ಕೃಷಿ ನೀರಾವರಿಗೆ ಅಣೆಕಟ್ಟುಗಳನ್ನು ಈ ಕೆಳಗಿನ ಸ್ಥಳಗಳಲ್ಲಿ ನಿರ್ಮಿಸಬೇಕು.

1) ಕಂಬಳಕಟ್ಟ, 2) ಪೋಕರೆ ಕಟ್ಟ 3) ಚಿಪ್ಪಾರು ಅಂಗಡಿ ಬಳಿ 4) ಅಮ್ಮೇರಿ ದೂಮಾವತಿ ಸ್ಥಾನದ ಬಳಿ 5) ಕಲ್ಲ ಕಟ್ಟ 6) ಚಿಪ್ಪಾರು ನಡುವಳಚ್ಚಲು 7) ಪಾದೆಕಟ್ಟ 8) ಸುಣ್ಣಾಡ

5. ಕೃಷಿ ಭೂಮಿಯು ಸವೆತ ತಪ್ಪಿಸಲು ತೋಡಿನ ಬದಿಯನ್ನೂ, ಪರಂಬೋಕು ಸ್ಥಳ ಜರಿದು ಹೋಗುವ ಸ್ಥಳವನ್ನು ಕಟ್ಟುವ ವ್ಯವಸ್ಥೆ ಯಾಗಬೇಕು.

6. ಅಡಿಕೆ ಹಾಗೂ ಅದರ ಹಾಳೆಯನ್ನು ಕಚ್ಚಾವಸ್ತುವಾಗಿಸಿಕೊಂಡಿರುವ ಒಂದು ಕಾರ್ಖಾನೆ ಸ್ಥಾಪಿಸಬೇಕು.

7. ಅಡಿಕೆ ಬೆಳೆಗೆ ಕೇರಳ ಸರಕಾರದಿಂದ ಅಧಿಕೃತ ಕೃಷಿ ಬೆಳೆಯ ಮಾನ್ಯತೆ ಲಭಿಸಬೇಕು. ಈಗ ಕೇವಲ ಭತ್ತ ಬೆಳೆಯುವ ಪ್ರದೇಶಕ್ಕೆ ಮಾತ್ರ ಲಭ್ಯವಿರುವ V.C.B. ಮತ್ತು ಸಣ್ಣ ಅಣೆಕಟ್ಟಿನ ಸೌಲಭ್ಯ ಅಡಿಕೆ ಬೆಳೆಯುವ ಪ್ರದೇಶಕ್ಕೂ ಲಭಿಸಬೇಕು.

Vನೇ ವಾರ್ಡು

1. ಭತ್ತದ ಕೃಷಿಗೆ ಟಿಲ್ಲರ್, ಕೊಯ್ಯುವ ಯಂತ್ರ, ನಾಟಿಯಂತ್ರವನ್ನು ಪೈವಳಿಕೆ ಪ್ರದೇಶಕ್ಕೆ ಒದಗಿಸಿದಲ್ಲಿ ಕೃಷಿಯು ತುಂಬಾ ಅಭಿವೃದ್ಧಿ ಹೊಂದಬಹುದು.

2. ಈ ವಾರ್ಡಿನಲ್ಲಿರುವ ಮೂರು ಹಳ್ಳಗಳನ್ನು ದುರಸ್ಥಿ ಮಾಡಿ, ನೀರನ್ನು ಕೃಷಿಗೆ ಉಪಯೋಗವಾಗುವಂತೆ ಮಾಡುವುದು.

3. ಸುವರ್ಣಗಿರಿ ತೋಡಿಗೆ ಕಟ್ಟಿದ ಮನೆ, ಶಿರಂತಡ್ಕ, ಸಣ್ಣ ತಡ್ಕ, ಎರ್‌ಪೆಕಟ್ಟ, ಕುಕ್ಕೆ ಬೆಟ್ಟು, ಮೂಡಾಯಿತೋಟ ಎಂಬಲ್ಲಿ ಅಣೆಕಟ್ಟುಗಳನ್ನು ನಿರ್ಮಿಸುವುದು.

4. ಪೈವಳಿಕೆ ತೋಡಿಗೆ ಸುರಕ್ಷಾ ಬದಿಯನ್ನು ನಿರ್ಮಿಸಬೇಕು.

5. ಪೈವಳಿಕೆ ಕೃಷಿ ಭವನದ ಶಾಖೆಯನ್ನು ಪಂಚಾಯತು ಕಛೇರಿಯಲ್ಲಿ ತೆರೆಯುವುದು.

6. ಕೃಷಿಯ ಬಗ್ಗೆ ಕಾಲಕಾಲಗಳಲ್ಲಿ ಕೃಷಿಕರಿಗೆ ತಿಳುವಳಿಕೆ ನೀಡಲು ಸೆಮಿನಾರನ್ನು ಸಂಘಟಿಸಬೇಕು.

7. ಕಳಾಯಿ ಹೊಳೆಯಿಂದ ನೀರು ಸರಬರಾಜು ಮಾಡಿ ಎರಡನೇ ಬೆಳೆಗೆ ನೀರಿನ ಪೂರೈಕೆ ಮಾಡುವುದು.

VIನೇ ವಾರ್ಡು

1. ಪೆರ್ಮುದೆ ಹಳ್ಳಕ್ಕೆ ಕಟ್ಟ ನಿರ್ಮಿಸಿ ಪರಿಸರದ ಕೃಷಿಗೆ ನೀರು ಸರಬರಾಜು ಮಾಡುವುದು 2. ಪೆರ್ಮುದೆ ತೂತುಬಾವಿಯ ನೀರನ್ನು ಕೊಳವೆ ಮುಖಾಂತರ ಪೆರಿಯಡ್ಕ, ದಾಸನಡ್ಕ ಮತ್ತು ಮಾಣಿ ಚೇವಾರಿನವರೆಗೆ ನಳ್ಳಿ ನೀರಿನ ಮೂಲಕ ಸರಬರಾಜು ಮಾಡುವುದು.

3. ಮುನ್ನೂರಿನಲ್ಲಿ ಹೊಳೆಯ ಬದಿಗೆ ಮತ್ತು ಮುಗೇರಿನಲ್ಲಿ ಕಟ್ಟ ಪುಣೆ (ಪಾರ್ಶ್ವಭಿತ್ತಿ) ಕಟ್ಟುವುದು.

4. ಕಂಬಾರು ಹೊಳೆಗೆ ವಿದ್ಯುತ್ ಪಂಪು ಅಳವಡಿಸಿ ಕೊಳವೆ ಮೂಲಕ ಅಮ್ಮೂವಾಲು, ಕುಂಡೇರಿ, ಹೊಳ್ಳರಗುಳಿ, ಈ ಭಾಗದ ಕೃಷಿಗೆ ನೀರು ಸರಬರಾಜು ಮಾಡುವುದು.

5. ದಾಸನಡ್ಕದಲ್ಲಿ ಮತ್ತು ಮುನ್ನೂರು ಪಳ್ಳದಲ್ಲಿ ಸಾರ್ವಜನಿಕ ಬಾವಿ ನಿರ್ಮಾಣ ಮಾಡುವುದು.

6. ಗುಂಪೆಯಲ್ಲಿ ನೀರು ಶೇಖರಣಾ ಘಟಕವನ್ನು ನಿರ್ಮಿಸಿ, ಆಸುಪಾಸಿನ ಗ್ರಾಮದ ಜನರಿಗೆ ನೀರು ಒದಗಿಸುವುದು.

7. ಎಡಕ್ಕಾನದಲ್ಲಿ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಥಾಪಿಸಿ ಕೃಷಿಕರಿಗೆ ವಿದ್ಯುತ್ ಒದಗಿಸುವುದು.

VIIನೇ ವಾರ್ಡು

1. ಎರ್ಪೆಕಟ್ಟೆ, ಬೊಳಂಪಾಡಿ, ಅಶ್ವತ್ಥಕಟ್ಟೆ, ಬೈತಾಡಿ, ಎಂಬೀ ಸ್ಥಳಗಳಲ್ಲಿ ಸಂಕ ಹೊಂದಿದ ಅಣೆಕಟ್ಟು (Dam cum Bridge) ನಿರ್ಮಿಸುವುದು.

2. ಪೊನ್ನೆತ್ತೋಡು, ಪಿಲಿಯಂದೂರು, ಸಾಂತ್ಯೋಡು, ಮೂಲಾನ, ಎಂಬೀ ಕೈ ತೋಡುಗಳಿಗೆ ಕಟ್ಟಗಳನ್ನು ನಿರ್ಮಿಸಿ ಕೃಷಿಗೆ ನೀರು ಸರಬರಾಜು ಮಾಡುವುದು.

3. ಮೇರ್ಲ, ಪೊನ್ನೆತ್ತೋಡು ಮತ್ತು ಪರಂಬಳ ಎಂಬೀ ಕಡೆಗಳಲ್ಲಿ ಸರಕಾರದಿಂದ ಮಂಜೂರು ಮಾಡಲ್ಪಟ್ಟ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಕೂಡಲೇ ಅಳವಡಿಸಿ ಕೃಷಿಕರಿಗೆ ವಿದ್ಯುತ್ ಸಂಪರ್ಕ ಒದಗಿಸುವುದು.

4. ತರಕಾರಿ ಕೃಷಿ ಹಾಗೂ ಮಲ್ಲಿಗೆ ಹೂ ತೋಟಗಾರಿಕೆಯನ್ನು ಅಭಿವೃದ್ಧಿ ಪಡಿಸುವುದು.

5.ಕೃಷಿಗೆ ಬೇಕಾಗುವ ಜೈವಿಕ ಗೊಬ್ಬರ, ಕ್ರಿಮಿನಾಶಕಗಳನ್ನು ರಿಯಾಯತಿ ದರದಲ್ಲಿ ವಾರ್ಡಿನಲ್ಲಿಯೇ ವಿತರಿಸುವ ಕೇಂದ್ರವನ್ನು ಪ್ರಾರಂಭಿಸುವುದು.

6. ಬೊಳಂಪಾಡಿ ಮತ್ತು ಜಪ್ಪ ಎಂಬೀ ಸ್ಥಳಗಳಲ್ಲಿ ಕೆರೆ ನಿರ್ಮಿಸಿ ಕೃಷಿಗೆ ನೀರು ಒದಗಿಸುವುದು.

7. ಎರ್ಪೆಕಟ್ಟೆಯಿಂದ ಕಯ್ಯಾರು ದೇವಸ್ಥಾನದವರೆಗೆ ಮತ್ತು ಅಶ್ವತ್ಥ ಕಟ್ಟೆಯಿಂದ ಬೈತಾಡಿವರೆಗೆ ಸುವರ್ಣಗಿರಿ ತೋಡಿಗೆ ಬದಿಕಟ್ಟೆ ಕೃಷಿ ಭೂಮಿಯನ್ನು ರಕ್ಷಿಸುವುದು.

VIIIನೇ ವಾರ್ಡು

1. ಕುಂಡೇರಿಯಿಂದ ಶಾಂತಿ ಹಿತ್ತಿಲಿನ ಹೊಳೆಯವರೆಗೆ ಇರುವ ತೋಡಿನ ಕಟ್ಟಪ್ಪಣೆ ಕಡಿದು ಹೋಗಿ ಯಾವ ರೀತಿಯ ಕೃಷಿಯೂ ಆಗುವುದಿಲ್ಲ. ಸಾಧಾರಣ 2 ಕಿ.ಮೀ. ಉದ್ದದ ಕಟ್ಟಪ್ಪಣೆ ನಿರ್ಮಿಸುವುದು.

2. ಸಿದ್ದಿಕುಡಾಲಿನಲ್ಲಿ ದೊಡ್ಡ 40HP ಪಂಪುಸೆಟ್ ಸ್ಥಾಪಿಸಿ ಅಲ್ಲಿಂದ ಕೋರಿಕಾರ್ ಮುಖಾಂತರವಾಗಿ ಕುಂಡೇರಿ ನೀರ್ ಪಂತಿಯವರೆಗೆ ನೀರು ಸರಬರಾದು ಮಾಡುವುದು.

3. ಪತ್ತಾಯದ ಕೊಟ್ಟಿಗೆ (ಕುಡಾಲು ಬಯಲು) ಯಲ್ಲಿ ಸುಮಾರು 10 ಎಕ್ರೆ ಕೃಷಿ ಭೂಮಿಯು ನೀರು ಇಲ್ಲದೆ ತೊಂದರೆಯಾಗಿದೆ. ಇಲ್ಲಿಗೆ ಹತ್ತಿರದ ತೋಡಿನಿಂದ ಪಂಪ್‌ಸೆಟ್ ಮೂಲಕ ನೀರು ಸರಬರಾಜು ಮಾಡುವುದು.

4.ಕಾಪು ಎಂಬಲ್ಲಿಂದ ಹೊಳೆ ನೀರನ್ನು ಪಂಪ್ ಮೂಲಕ ಮೇರ್ಕಳ ಮಂಡೆ ಕಾಪು ಪ್ರದೇಶಗಳಿಗೆ ಒದಗಿಸುವುದು.

5.ಮೇರ್ಕಳ ಯಲಿನಲ್ಲಿರುವ ತೋಡನ್ನು ರಿಪೇರಿಗೊಳಿಸುವುದು.

6. ಮಂಡೆಕಾಪು ಮತ್ತು ಮಾಣಿಯಲ್ಲ ಹೊಸ ವಿದ್ಯುತ್ ಟ್ರಾನ್ಸ್‌ಫಾರ್ಮರ್ ಸ್ಥಾಪಿಸುವುದು.

IXನೇ ವಾರ್ಡು

1. ಪೆರುವಡಿ ಮತ್ತು ಕಲ್ಲಗದ್ದೆಯಿಂದ ಹೊರಡುವ ತೋಡುಗಳು ಸಂಧಿಸುವಲ್ಲಿ 'ವೆಂಟೆಡ್ ಡ್ಯಾಂ', ಜತ್ತಿಯಲ್ಲಿ ಸಂಕ ಹೊಂದಿರುವ ಅಣೆಕಟ್ಟು (Dam cum bridge) ನಿರ್ಮಿಸುವುದು ಬಾಣಾಂಪಾಡಿ ಮತ್ತು ಕೋಡಿಚಾಲು ಎಂಬಲ್ಲಿ ವೆಂಟೆಡ್ ಡ್ಯಾಂ, ಮರಕ್ಕೆತಡ್ಕದಲ್ಲಿ ತೋಡಿಗೆ ಕಟ್ಟಪ್ಪಣೆಯನ್ನು ನಿರ್ಮಿಸಬೇಕು.

2. ಪೆರುವಡಿಯಿಂದ ಹೊರಡುವ ತೋಡಿಗೆ ಕೆಳಗಿನ ಪೆರುವಡಿಯಲ್ಲಿ ಅಣೆಕಟ್ಟು ಮತ್ತು ಪೆರುವಡಿ-ಜತ್ತಿ ಮಧ್ಯದಲ್ಲಿ ಒಂದು ವೆಂಟೆಡ್ ಡ್ಯಾಂ. ಮೂರು ತೋಡುಗಳು ಹೊಳೆಗೆ ಸೇರುವ ಮಧ್ಯಭಾಗದಲ್ಲಿ ಬಳ್ಳೂರು ಎಂಬಲ್ಲಿ ಒಂದು ಸೇತುವೆ ಹೊಂದಿರುವ ಅಣೆಕಟ್ಟು, ಇದೇ ತೋಡಿಗೆ ಪುದ್ಕೋಟು ಮೊಗರು ಎಂಬಲ್ಲಿ ಸೇತುವೆ ಹೊಂದಿರುವ ಅಣೆಕಟ್ಟು ನಿರ್ಮಿಸಬೇಕು.

3. ಪೆರುವಾಯಿ ಹೊಳೆಗೆ ಉದ್ದಡ್ಕ ಮತ್ತು ಮುಣಿಚಿತ್ತಡ್ಕ ಎಂಬಲ್ಲಿ ಸೇತುವೆ ಹೊಂದಿರುವ ಅಣೆಕಟ್ಟು ನಿರ್ಮಿಸುವುದು.

4. ತೋಟಕ್ಕೆ ಔಷಧಿ ಸಿಂಪಡಿಸಲು ರಿಯಾಯಿತಿ ದರದಲ್ಲಿ ಯಂತ್ರೋಪಕರಣಗಳ ಸರಬರಾಜು.

5. ಗದ್ದೆ ಉಳಲು, ಕೊಯ್ಯಲು, ನೇಜಿ ನೆಡಲು, ವಾರ್ಡಿಗೆ ಒಂದರಂತೆ ಯಂತ್ರವನ್ನು ಬಾಡಿಗೆಗೆ ಒದಗಿಸಬೇಕು.

Xನೇ ವಾರ್ಡು

1. ತಲೆಂಗಳದಿಂದ ಕಟ್ಟದ ಮನೆ ಭಾಗಕ್ಕೆ ಹೋಗುವ ಸುವರ್ಣಗಿರಿ ಪರಂಬೋಕು ತೋಡಿನಲ್ಲಿ ಕಲ್ಲಡ್ಕ, ಕಟ್ಟದ ಮನೆ, ತೆಂಕ ಮಾಣಿಪ್ಪಾಡಿ, ಪಯ್ಯಾರಕೋಡಿ, ದೇವಕಾನ ಎಂಬ ಸ್ಥಳಗಳಲ್ಲಿ ವೆಂಟೆಡ್ ಡ್ಯಾಂ (Vernted Dam) ನಿರ್ಮಾಣ ಆಗಬೇಕು. ಇದರಿಂದ ಸುಮಾರು 200 ಎಕ್ರೆ ಕೃಷಿ ಭೂಮಿಗೆ ಪ್ರಯೋಜನವಾದೀತು.

2. ಮಾಣಿಪ್ಪಾಡಿ, ನೂತಿಲ, ಪೈಯರಕೋಡಿ ಮೊದಲಾದ ಕಡೆಗಳಲ್ಲಿ ಕಟ್ಟಪ್ಪಣೆ ನಿರ್ಮಾಣ, ಮತ್ತು ತೋಡುಗಳ ಹೊಯಿಗೆ ತೆಗೆಯುವ ಕಾರ್ಯಕ್ರಮ.

3. ಆವಳ ಪಳ್ಳಿಬಳಿಯಲ್ಲಿ ತೋಡಿಗೆ ಸೇತುವೆ ಹೊಂದಿರುವ ಅಣೆಕಟ್ಟು (Dam cum bridge) ನ್ನು ಈಗ ಇರುವ ಮಾರ್ಗಕ್ಕೆ ಅನುಕೂಲವಾಗುವಂತೆ ಮಾಡಬೇಕು.

4.ಬೋಳುಕಟ್ಟೆ ಎಂಬಲ್ಲಿ ತೂತುಬಾವಿ ಮಾಡಿ, ವಿದ್ಯುತ್ ಅಥವಾ ಗಾಳಿ ಯಂತ್ರದ ಮೂಲಕ ನೀರು ಶೇಖರಿಸಿದಲ್ಲಿ ಸುಮಾರು 100 ಮನೆಗಳಿಗೆ ನೀರಿನ ಸೌಕರ್ಯವಾಗುವುದು.

5. ಇದೇ ವಾರ್ಡಿನ ಕೃಷಿ ಭವನದ ಬಳಿ ನಾಯರಡ್ಕ, ಪಾಕದ ಗುಡ್ಡೆ, ಕಲ್ಲರಗುಳಿ, ಎಂಬೀ ಸ್ಥಳಗಳಲ್ಲಿ ವಿಸ್ತಾರವಾದ ಕೊಳಗಳನ್ನು ನಿರ್ಮಿಸಿ ಮಳೆಗಾಲದ ನೀರನ್ನು ಇಂಗುವಂತೆ ಮಾಡುವುದು.

6. ಮಾಣಿಪ್ಪಾಡಿ, ಕುಕ್ಕಾಣ, ತೊಟ್ಟಿಗುಡ್ಡೆ, ಮದನಕೋಡಿ ಗುಡ್ಡೆ, ಪಯ್ಯರಕೋಡಿ ಸೇಡಿಗುಳಿ, ರಾಜಮೂಲೆ, ಬದಿಗುಡ್ಡೆ, ಅಂಬಿಕಾನ, ನೂತಿಲಗುಡ್ಡೆಗಳ ತೊಟ್ಟಿಗಳಲ್ಲಿ ಮಳೆಗಾಲದ ನೀರು ಇಂಗುವಂತೆ ಮದಕ್ಕಗಳನ್ನು ಮಾಡಬೇಕು.

7. ಕಾಯರ್‌ಕಟ್ಟೆಯ ಸರಕಾರಿ ಜಾಗದಲ್ಲಿ ಪಂಚಾಯತಿನ ಎಲ್ಲಾ ವಾರ್ಡುಗಳಿಗೂ ಅನುಕೂಲವಾಗುವಂತೆ ಕೃಷಿ ಭವನ ಮತ್ತು "ಮಣ್ಣು ಪರೀಕ್ಷಣಾ ಕೇಂದ್ರ" ವನ್ನು ತೆರೆದಲ್ಲಿ ಕೃಷಿಕರ ಸರ್ವತೋಮುಖ ಅಭಿವೃದ್ಧಿಗೆ ಸಹಾಯಕವಾಗಬಹುದು.

XIನೇ ವಾರ್ಡು

1. ಕಳಾಯಿ, ಮರಿಕ್ಕೆ, ಪಲ್ಲೆಕುಡೆಲು, ಕಡೆಂಕೋಡಿ, ದೋಣಿಕಡವು ವರೆಗಿನ ತೋಡು ಮತ್ತು ಹೊಳೆಯ ಬದಿಯ ಕಟ್ಟಪುಣಿಗಳನ್ನು ಕಟ್ಟಿಸಿದಲ್ಲಿ ಕೃಷಿಯನ್ನು ಅಭಿವೃದ್ಧಿಗೊಳಿಸಬಹುದು.

2. ಕೋರಿಕ್ಕಾರ್, ಕಾನದಿಂದ ಮೇಲ್ಕಾರ್‌ವರೆಗಿನ ಮತ್ತು ಮರಿಕ್ಕೆಯಿಂದ ಅಡಿಬ್ಯಾಕಲ್ವರ್ಟಿನವರೆಗಿನ ಒಂದು ಬದಿಯ ಕಟ್ಟಪುಣಿಯನ್ನು ಕಟ್ಟುವುದು.

3. ಉರ್ಮಿ ಸಂಕದಿಂದ ಕಳಾಯಿವರೆಗೆ ಇರುವ ಕಟ್ಟಪುಣಿಯನ್ನು ಮಾರ್ಗವಾಗಿ ಪರಿವರ್ತಿಸುವುದು.

4. ಬದಿಯಾರಿನಿಂದ ಮುದಲೆಗುಂಡಿಗೆ ಸೇರುವ ಕೈತೋಡು ಅಭಿವೃದ್ಧಿ ಪಡಿಸಬೇಕು.

5. ಕುಳಾಯಿ ಪೊಳ್ಳರ ಕೋಡಿಯಲ್ಲಿರುವ ಸಾರ್ವಜನಿಕ ಕೆರೆಯನ್ನು ಅಭಿವೃದ್ಧಿ ಪಡಿಸಲು ಕ್ರಮಕ್ಕೆಗೊಳ್ಳಬೇಕು.

6. ವಾದ್ಯ ಪಡ್ಪು ಎಂಬಲ್ಲಿ ಕೃಷಿ ಸೌಕರ್ಯಕ್ಕೆ ಬೇಕಾಗಿ ಒಂದು ಕೆರೆ ನಿರ್ಮಾಣವಾಗಬೇಕು.

7. ಪೈವಳಿಕೆ ಪಂಚಾಯತಿನ ಕೃಷಿ ಭವನವನ್ನು ಪಂಚಾಯತು ಕಟ್ಟಡದ ಸಮೀಪಕ್ಕೆ ವರ್ಗಾಯಿಸುವುದು ಮತ್ತು ಕೃಷಿ ಉತ್ಪನ್ನ ಮಾರುಕಟ್ಟೆಯನ್ನು ನಿರ್ಮಿಸುವುದು.

8. ಕೋರಿಕ್ಕಾರ್, ಕಳ್ಳಿಗೆ, ಮೀಂಜ, ಈ ಪ್ರದೇಶಗಳಲ್ಲಿ ಭತ್ತದ ಕೃಷಿ ಹೆಚ್ಚಿನ ಪ್ರಮಾಣದಲ್ಲಿರುವುದರಿಂದ ಒಂದು ಕೃಷಿ ಉಳುಮೆ ಯಂತ್ರವನ್ನು ಒದಗಿಸಬೇಕು.

9. ಕಂಡತ್ತಾಡ್ ಎಂಬಲ್ಲಿ ಸರಕಾರಿ ಸ್ಥಳದಲ್ಲಿರುವ ಕೆರೆಯನ್ನು ದೊಡ್ಡದಾಗಿ ಪರಿವರ್ತಿಸಿ ನೀರು ಮೇಲೆತ್ತುವ ಯಂತ್ರದ ಸಹಾಯದಿಂದ ಲಾಲ್‌ಬಾಗ್, ಮಾಸಿಕುಮೇರಿ, ಬೋಳಂಗಳದ ವರೆಗಿನ ನಿವಾಸಿಗಳಿಗೂ, ಕೃಷಿಕರಿಗೂ ನೀರನ್ನು ಒದಗಿಸಬಹುದು.

ಪಂಚಾಯತು ಮಟ್ಟದಲ್ಲಿ ಸಲಹೆಗಳು

1. ಗುಡ್ಡವನ್ನು ಸಮತಲ ಮಾಡಿ ಭೂಮಿಯನ್ನು ಕೃಷಿಯೋಗ್ಯವನ್ನಾಗಿ ಮಾಡುವರೇ ಪಂಚಾಯತ್ ಮಟ್ಟದಲ್ಲಿ ಒಂದು ಭೂಮಿಯನ್ನು ತಸಮತಲ ಮಾಡುವ ಯಂತ್ರವನ್ನು ಒದಗಿಸುವುದು.

2. ಪಂಚಾಯತು ಕ್ಷೇತ್ರದಲ್ಲಿ ಕೃಷಿ ಸಂಶೋಧನಾ ಕೇಂದ್ರವನ್ನು ಸ್ಥಾಪಿಸುವುದು.

3. ಕೃಷಿಗೆ ಹಾನಿಗೈಯುವ ಕಾಡು ಹಂದಿ ಮೊದಲಾದ ಕಾಡುಪ್ರಾಣಿಗಳ ನಿಯಂತ್ರಣಕ್ಕೆ ಕ್ರಮಕ್ಕೆಗೊಳ್ಳುವುದು.

4. ಕೃಷಿಯನ್ನು ಸಂರಕ್ಷಿಸುವ ಸಲುವಾಗಿ ಜಾನುವಾರುಗಳನ್ನು ಬೇಕಾಬಿಟ್ಟಿ ಮೇಯಲು ಬಿಡುವುದಕ್ಕೆ ನಿಯಂತ್ರಣವನ್ನು ತರುವುದು.

5. ರಬ್ಬರ್, ಕರಿಮೆಣಸು, ಮತ್ತು ತರಕಾರಿ ಕೃಷಿಗಳಿಗೆ ಪ್ರೋತ್ಸಾಹ ನೀಡುವುದು.

6. ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವ ಮಳೆಯನ್ನು ಲಕ್ಷಿಸಿ ಮಳೆಯ ನೀರನ್ನು ಭೂಮಿಗೆ ಇಂಗುವಂತೆ ಮಾಡಲು ಹೆಚ್ಚಿನ ಕಡೆಗಳಲ್ಲಿ ಚೆಕ್ ಡ್ಯಾಂ, ಒಡ್ಡು ಇತ್ಯಾದಿಗಳನ್ನು ನಿರ್ಮಿಸುವುದು.

7. ಮಣ್ಣು ಸಂರಕ್ಷಣೆ ಮತ್ತು ಜಲ ಮರು ಪೂರಣಾ ಸೆಮಿನಾರ್‌ಗಳನ್ನು ಜರಗಿಸಿ ಕೃಷಿಕರಿಗೆ ಸಲಹೆಗಳನ್ನೀಯುವುದು.

ಕೃಷಿ ತೋ ನಾಸ್ತಿ ಃ ದುರ್ಭಿಕ್ಷ ಂ॥

ಮೃಗ ಸಂರಕ್ಷಣೆ

ಜಾನುವಾರು ದೇಶದ ಪ್ರಧಾನವಾದ ಒಂದು ಸಂಪತ್ತಾಗಿದೆ. ಪಶುಪಾಲನೆಯನ್ನು ಹೆಚ್ಚಿನ ಜನರು ತಮ್ಮ ಜೀವನದ ಉಪ ವೃತ್ತಿಯನ್ನಾಗಿ ಸ್ವೀಕರಿಸಿರುವರು. ಹಾಲು ಮನುಷ್ಯನ ಅತ್ಯುತ್ತಮ ಆಹಾರ ಘಟಕವಾಗಿರುವುದು. ಪಶು ಗೊಬ್ಬರವು ಕೃಷಿಗೆ ವರದಾನವಾಗಿದೆ. ಒಂದು ದೇಶದ ಜನತೆಯ ಆರೋಗ್ಯ ಮತ್ತು ಸಂಪತ್ತು ಆ ದೇಶದ ಪಶು ಸಂಪತ್ತನ್ನು ಅವಲಂಬಿಸಿರುತ್ತದೆ. ನಮ್ಮ ಪ್ರಾಂತ್ಯಕ್ಕೆ ಸಂಬಂಧಿಸಿದಂತೆ ನಮ್ಮ ಆದಾಯದಲ್ಲಿ ಹಾಲು ಪ್ರಧಾನ ಪಾತ್ರ ವಹಿಸುತ್ತದೆ ಎಂದು ಅಂಕೆ ಸಂಖ್ಯೆಗಳಿಂದ ತಿಳಿದು ಬರುತ್ತದೆ. ಇತ್ತೀಚೆಗೆ ಅತ್ಯುತ್ಪಾದನಾ ಸಾಮರ್ಥ್ಯ ವಿರುವ ಹಸುಗಳ ಸಂಖ್ಯೆಯಲ್ಲಿ ವರ್ಧನೆಯುಂಟಾಗುತ್ತಿರುವುದಾದರೂ ನಮ್ಮ ಪೈವಳಿಕೆ ಗ್ರಾಮಪಂಚಾಯತ್ ಪ್ರದೇಶದಲ್ಲಿ ಉಂಟಾದ ಪ್ರಗತಿ ನಗಣ್ಯ. ಕೃಷಿ ಪ್ರಧಾನವಾದ ನಮ್ಮ ಪಂಚಾಯತಿನಲ್ಲಿ ಪಶುಪಾಲನೆಯು ಜೀವನದ ಒಂದು ಅವಿಭಾಜ್ಯ ಘಟಕವಾಗಿದೆ. ಇಲ್ಲಿ ಪಶುಪಾಲನೆಯನ್ನು ಮುಖ್ಯ ಜೀವನೋಪಾಯವಾಗಿ ಸ್ವೀಕರಿಸಿರುವ ಕುಟುಂಬಗಳು ಕಡಿಮೆಯಾದರೂ ಕೃಷಿಕರು ಊರ ತಳಿ ಜಾನುವಾರುಗಳನ್ನು ಕೃಷಿ ಕೆಲಸಗಳಿಗೆ, ಹಾಲು ಉತ್ಪಾದನೆಗೆ ಹಾಗೂ ಗೊಬ್ಬರಕ್ಕಾಗಿ ಸಾಕುತ್ತಾರೆ.

ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಜನಸಂಖ್ಯೆಗೆ ಪೋಷಕ ಪ್ರಧಾನವಾದ ಹಾಲು ಮೊಟ್ಟೆ, ಕೃಷಿಗೆ ಅಗತ್ಯವಾದ ಜೈವಿಕ ಗೊಬ್ಬರ ಬಯೋಗ್ಯಾಸ್ (ಜೈವಿಕ ಅನಿಲ) ಮತ್ತು ಸ್ವ ಉದ್ಯೋಗ ಹಾಗೂ ಉಪಕಸುಬಾಗಿ ತೊಡಗಲು ಪಶು ಸಂಗೋಪನೆಯು ಬಹಳ ಪ್ರಾಮುಖ್ಯತೆಯನ್ನು ಹೊಂದಿದೆ. ಮಧ್ಯಮವರ್ಗದ ಕೃಷಿಕರು ಈ ಪ್ರದೇಶದಲ್ಲಿ ಉತ್ತಮ ತಳಿಯ ಜಾನುವಾರುಗಳನ್ನು ಸಾಕುವುದಾದರೂ ಹೆಚ್ಚಿನ ಸಂಖ್ಯೆಯಲ್ಲಿ ಊರ ತಳಿಗಳೇ ಸಾಕಲ್ಪಡುತ್ತವೆ.

1995-96ರ ಅಂಕೆ ಸಂಖ್ಯೆಗಳ ಪ್ರಕಾರ ಈ ಪಂಚಾಯತ್ ಪ್ರದೇಶದಲ್ಲಿ ಸಾಕು ಮೃಗಪಕ್ಷಿಗಳ ಸಂಖ್ಯೆ ಈ ಪ್ರಕಾರ ಕಂಡು ಬರುತ್ತದೆ.

	ಗಂಡು	ಹೆಣ್ಣು	ಒಟ್ಟು
ಊರ ಜಾನುವಾರು	1013	6090	7103
ಮಿಶ್ರ ತಳಿ ಜಾನುವಾರು	129	915	1044
ಎಮ್ಮೆ ವರ್ಗ	190	361	551
ಆಡು	-	-	130
ಹಂದಿ	-	-	45
ನಾಯಿ	-	-	2615
ಊರಕೋಳಿ	-	-	19000
ಬ್ರೋಯಿಲರ್ ಕೋಳಿ	-	-	2450

ಆರ್ಥಿಕವಾಗಿ ಉತ್ತಮ ಸ್ಥಿತಿಯಲ್ಲಿರುವ ಕೃಷಿಕರು ಪಶುಪಾಲನೆಯನ್ನು ಲಾಭದಾಯಕ ವೃತ್ತಿ ಎಂಬುದಾಗಿ ಅನುಭವಗಳಿಂದ ಕಂಡು ಕೊಂಡಿದ್ದಾರೆ. ಪಶುಪಾಲನೆಗೆ ವಿಶಾಲ ಅವಕಾಶಗಳಿವೆಯಾದರೂ ಕಳೆದ ಒಂದು ದಶಕದಲ್ಲಿ ಅಲ್ಪ ಪ್ರಮಾಣದಲ್ಲಿ ಮಾತ್ರ ಪ್ರಗತಿ ಹೊಂದಿದೆ. ಕೆಲವು ಉತ್ಸಾಹೀ ಹಾಲುತ್ಪಾದಕರ ಪರಿಶ್ರಮದಿಂದ ಈ ಪಂಚಾಯತಿಗೊಳಪಟ್ಟ ಬಾಯಾರು ಪದವು, ಪೈವಳಿಕೆ ಮತ್ತು ಜೋಡುಕಲ್ಲು ಎಂಬ ಸ್ಥಳಗಳಲ್ಲಿ 'APCOS' ಮಾದರಿಯ ಮೂರು ಹಾಲು ಉತ್ಪಾದಕರ ಸಹಕಾರೀ ಸಂಘಗಳು ಸ್ಥಾಪನೆಗೊಂಡು ಪ್ರಗತಿಯ ದಾರಿಯಲ್ಲಿ ಕಾರ್ಯಾಚರಿಸುತ್ತವೆ. ಈ ಸಹಕಾರೀ ಸಂಘಗಳು ಒಟ್ಟು ಹಾಲುತ್ಪಾದನೆಯ ಶೇಕಡಾ ಹತ್ತಕ್ಕಿಂತ ಕಡಿಮೆ ಹಾಲು ಸಂಗ್ರಹಿಸಿ ವಿತರಣೆ ಮಾಡುತ್ತವೆ. 'ಮಿಲ್ಮಾ' ಸಹಕಾರಿ ಸಂಘಕ್ಕೂ ಹಾಲನ್ನು ಒದಗಿಸುತ್ತವೆ. ಈ ಸಂಘಗಳು ಹಾಲಿನಿಂದ ವಿವಿಧ ತಿಂಡಿ ತಿನಿಸುಗಳನ್ನು ತಯಾರಿಸುವ ಘಟಕಗಳನ್ನೂ ಹೊಂದಿ ಸ್ವಯೋಗ ಅವಕಾಶವನ್ನು ಸೃಷ್ಟಿಸಿದೆ. ಪಶು ಆಹಾರವನ್ನು ಈ ಸಹಕಾರೀ ಸಂಘಗಳ ಮೂಲಕ ಸಬ್ಸಿಡಿ ದರದಲ್ಲಿ ವಿತರಿಸಲಾಗುತ್ತದೆ. ಬಾಯಾರು ಪದವು ಮತ್ತು ಜೋಡುಕಲ್ಲು ಸಹಕಾರೀ ಹಾಲು ಉತ್ಪಾದಕರ ಸಂಘಗಳು ಕೃತಕ ಗರ್ಭಧಾರಣಾ ಘಟಕಗಳನ್ನು ಹೊಂದಿದ್ದು ಪೈವಳಿಕೆ ಮೃಗಾಸ್ಪತ್ರೆ ಹಾಗೂ ಪೆರ್ಮುದೆ ಸಹಘಟಕದಲ್ಲೂ ಈ ಅನುಕೂಲತೆ ಇದೆ. ಮಿಶ್ರ ತಳಿ ಹೆಣ್ಣು ಕರುಗಳಿಗೆ ನಾಲ್ಕರಿಂದ ಮೂವತ್ತೆರಡು ತಿಂಗಳುಗಳ ವರೆಗೆ ಸಬ್ಸಿಡಿ ದರದಲ್ಲಿ ಪಶು ಆಹಾರ ಒದಗಿಸುವ ವ್ಯವಸ್ಥೆ ಪ್ರಸ್ತುತ ಜ್ಯಾರಿಯಲ್ಲಿದೆ. ಈಗ ಈ ಪಂಚಾಯತ್ ವ್ಯಾಪ್ತಿಯಲ್ಲಿ ಸಾಧಾರಣ ದಿನ ಒಂದಕ್ಕೆ 5000 ಲೀಟರ್ ಹಾಲು ಉತ್ಪಾದನೆಯಾಗುತ್ತಿದ್ದು ಇದರ ಸುಮಾರು ಹತ್ತು ಶೇಕಡಾ ಮಾತ್ರವೇ ಹಾಲು ಉತ್ಪಾದಕರ ಸಹಕಾರಿ ಸಂಘಗಳ ಮೂಲಕ ಸಂಗ್ರಹಿಸಲ್ಪಡುತ್ತದೆ. ಉಳಿದ ಹಾಲು ಮನೆಗಳಲ್ಲೂ, ಹೊಟೇಲುಗಳಲ್ಲೂ ಖಾಸಗಿಯಾಗಿ ವಿಚ್ಛಾಗುತ್ತದೆ. 1995-96ನೇ ವರ್ಷದಲ್ಲಿ ಸಾಧಾರಣ 746 ಹಸುಗಳಿಗೆ ಮತ್ತು 90 ಎಮ್ಮೆಗಳಿಗೆ ಕೃತಕ ಗರ್ಭಧಾರಣೆಗಾಗಿ 'ಸೆಮೆನ್' ನೀಡಲಾಗಿದೆ.

ಸಮಸ್ಯೆಗಳು

ಪಶುಪಾಲನೆಯು ಲಾಭದಾಯಕವಲ್ಲವೆಂಬ ಭಾವನೆ ಸಾಮಾನ್ಯವಾಗಿರುವುದು. ಪಶುಪಾಲನೆ ಮತ್ತು ಹಾಲುತ್ಪಾದನೆಯ ಮಹತ್ವದ ಕುರಿತು ಜನರಲ್ಲಿ ಸರಿಯಾದ ತಿಳುವಳಿಕೆ ಇಲ್ಲದಿರುವುದು. ಪಶು ಆಹಾರದ ಬೆಲೆ ಅಧಿಕವಾಗಿಯೂ ಗುಣಮಟ್ಟ ಕೀಳಾಗಿಯೂ ಇರುವುದು. ಗೋಚರಾವುಗಳ ಕೊರತೆ ಹಾಗೂ ಹಸಿರು ಹುಲ್ಲಿನ ಕೊರತೆ ತುಂಬಾ ಇದೆ. ಹಾಲಿಗೆ ಎಲ್ಲಾ ಕಡೆಗಳಲ್ಲಿ ಸರಿಯಾದ ಮಾರಾಟ ವ್ಯವಸ್ಥೆ ಇಲ್ಲದಿರುವುದು. ಹಾಲಿಗೆ ಸರಿಯಾದ ಬೆಲೆ ಸಿಗದಿರುವುದು. ಉತ್ತಮ ತಳಿಯ ಜಾನುವಾರುಗಳ ಕೊರತೆ ಹಾಗೂ ಔಷಧಿಗಳ ದುಬಾರಿ ಬೆಲೆ ಮತ್ತು ಚಿಕಿತ್ಸಾ ಸೌಲಭ್ಯದ ಕೊರತೆ ಇರುವುದು. ಕೃತಕ ಗರ್ಭಧಾರಣೆಯ ಕುರಿತಾದ ತಿಳುವಳಿಕೆ ಹಾಗೂ ಸೌಕರ್ಯದ ಕೊರತೆ ಇರುವುದು. ಅರ್ಹತೆಯ ಆಧಾರದಲ್ಲಿ ಸಬ್ಸಿಡಿ ದರದಲ್ಲಿ ಸಾಲದ ವ್ಯವಸ್ಥೆಗಳ ಕೊರತೆ ಕಂಡು ಬರುತ್ತದೆ.

ಪರಿಹಾರೋಪಾಯಗಳು

ಪಶುಪಾಲನೆಯ ಅತೀ ಪ್ರಧಾನವಾದ ಹಾಗೂ ಜೀವನಾವಶ್ಯಕವಾದ ಮತ್ತು ಲಾಭದಾಯಕವಾಗಿ ನಡೆಸಲ್ಪಡುವ ಉಪಕಸುಬೆಂಬ ಭಾವನೆ ಜನರಲ್ಲಿ ಉಂಟು ಮಾಡಲು ಬೇಕಾದ ತರಬೇತಿ ಹಾಗೂ ಸೆಮಿನಾರ್‌ಗಳನ್ನು ಸಂಘಟಿಸಬೇಕು. ಅರ್ಹ ಹಾಗೂ ಅಭಿರುಚಿ ಇರುವವರಿಗೆ ತಕ್ಕ ಪ್ರೋತ್ಸಾಹ ನೀಡುವುದು ಹಾಗೂ ಹಾಲುತ್ಪಾದಕರಿಗೆ ಯೋಜಿಸಿದ ಕೆಲವು ಪದ್ಧತಿಗಳನ್ನು ರೂಪಿಸಿ ಆ ಮೂಲಕ ಸಾಲ ಹಾಗೂ ಸಬ್ಸಿಡಿ ನೀಡುವುದು. ಕನಿಷ್ಠ ವಾರ್ಡಿಗೊಂದರಂತೆ ಹಾಲುತ್ಪಾದಕರ ಸಹಕಾರಿ ಸಂಘ ಹಾಗೂ ಕೃತಕ ಗರ್ಭಧಾರಣಾ ಕೇಂದ್ರಗಳ ಸ್ಥಾಪನೆಯಾಗಬೇಕಾಗಿದೆ. ಮತ್ತು ಈ ಮೂಲಕ ಪಶು ಆಹಾರ ರಿಯಾಯಿತಿ ದರದಲ್ಲಿ ವಿತರಿಸಲ್ಪಡಬೇಕು. ಪ್ರಸ್ತುತ ಇರುವ ಮೃಗಾಸ್ಪತ್ರೆಯನ್ನು "ಪೊಲೀ ಕ್ಲಿನಿಕ್" ಆಗಿ ಬಡ್ತಿ ಗೊಳಿಸಿ ಅಗತ್ಯ ಸ್ಥಳಗಳಲ್ಲಿ "ಉಪ ಘಟಕ"ಗಳ ಸ್ಥಾಪನೆಯಾಗಬೇಕಾಗಿದೆ. ಮೃಗಾಸ್ಪತ್ರೆಗೆ ದೂರವಾಣಿ ವ್ಯವಸ್ಥೆ ಹಾಗೂ ವಾಹನದ ವ್ಯವಸ್ಥೆಯಾಗಬೇಕಾಗಿದೆ. ಹಸಿರು ಹುಲ್ಲು ಸದಾ ದೊರಕುವಂತಾಗಲು

ಹಸಿರು ಹುಲ್ಲಿನ ಬೀಜಗಳ ವಿತರಣೆ ಹುಲ್ಲು ಕೃಷಿಗೆ ಸಬ್ಸಿಡಿ ದರದಲ್ಲಿ ಆರ್ಥಿಕ ಸಹಾಯ, ಒಣಹುಲ್ಲು ವಿತರಣೆಗೆ ಯೋಗ್ಯ ವ್ಯವಸ್ಥೆ ಬೇಕಾಗಿದೆ. ಹಾಲುತ್ಪಾದಕರಿಗೆ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡಲು ಅನುಕೂಲವಾಗುವಂತೆ ಸಮೃದ್ಧವಾದ ಒಂದು ಅಭಿವೃದ್ಧಿ ಯೋಜನೆಯನ್ನು ಆರಂಭಿಸುವುದು ಅಗತ್ಯ. ಪ್ರಸ್ತುತ ಇರುವ ಗೋಚರಾವುಗಳ ರಕ್ಷಣೆ ಅಗತ್ಯವಾಗಿದೆ. ಬಡ ಕೃಷಿಕರಿಗೆ ಸುಧಾರಿತ ತಳಿಯ ಹೆಣ್ಣು ಕರುಗಳನ್ನು ಧರ್ಮಾರ್ಥವಾಗಿ ಒದಗಿಸಿ ಅವುಗಳಿಗೆ 'ಗ್ರೂಪ್ ಇನ್ಸೂರೆನ್ಸ್' (ಗುಂಪು ವಿಮಾ ಯೋಜನೆ) ಪದ್ಧತಿ ಜಾರಿಗೊಳಿಸಬೇಕು. ಉತ್ತಮ ತಳಿಯ ಹೆಣ್ಣು ಕರುಗಳಿಗೆ ಕರು ಹಾಕಿದ ಮೇಲೆಯೂ ಸಬ್ಸಿಡಿ ದರದಲ್ಲಿ ಪಶು ಆಹಾರ ವಿತರಣೆ ವ್ಯವಸ್ಥೆ ಮುಂದುವರಿಯಬೇಕು. ಪಶುಪಾಲನೆಗೆ ಸಂಬಂಧಿಸಿದಂತೆ ಪನಿತಾ ಯುನಿಟ್‌ಗಳನ್ನು ಸ್ಥಾಪಿಸಬೇಕು. ಹೋರಿ ಕರುಗಳನ್ನು ಚೆನ್ನಾಗಿ ಸಾಕಿ ಅವುಗಳನ್ನು ಹೊಲದ ಉಳುಮೆಯ ಉಪಯೋಗಕ್ಕಾಗಿ ಬಳಸುವಂತೆ ಮಾಡಿ ಆ ಮೂಲಕ ಹೋರಿ ಕರುಗಳು ನಿರರ್ಥಕವೆಂಬ ಭಾವನೆಯನ್ನು ದೂರೀಕರಿಸಬೇಕು.

ಕೋಳಿ ಸಾಕಣೆ

ಕೋಳಿ ಮತ್ತು ಬಾತುಕೋಳಿಗಳು ಮೊಟ್ಟೆ ಮತ್ತು ಮಾಂಸಕ್ಕಾಗಿ ಸಾಕುವ ಪಕ್ಷಿಗಳಾಗಿವೆ. ಮನುಷ್ಯನ ಮಾಂಸಾಹಾರದ ಒಂದು ದೊಡ್ಡ ಪಾಲು ಕೋಳಿಗಳಾಗಿವೆ. ನಮ್ಮ ಪಂಚಾಯತಿನಲ್ಲಿ ಕೋಳಿ ಸಾಕಣೆಯ ಹೆಚ್ಚಾಗಿ ವಿಕೇಂದ್ರೀಕರಿಸಲ್ಪಟ್ಟು ಮನೆ ಮನೆಗಳಲ್ಲಿ ಸ್ವಂತ ಉಪಯೋಗಕ್ಕಾಗಿ ಸಾಕಲ್ಪಡುತ್ತವೆ. ಪ್ರಕೃತ ಇಲ್ಲಿ ಸುಮಾರು ಹತ್ತರಷ್ಟು 'ಬ್ರೊಯಿಲರ್ ಕೋಳಿ' ಗಳ ಫಾರಂಗಳು ಪ್ರತಿ ತಿಂಗಳು 3000 ದಿಂದ 4000 ದ ತನಕ ಉತ್ಪಾದಿಸಲ್ಪಡುತ್ತವೆ. ಆದರೆ 1995-96ರ ಗಣತಿ ಪ್ರಕಾರ 19,000 ಊರ ಕೋಳಿಗಲು ಈ ಪಂಚಾಯತ್ ವ್ಯಾಪ್ತಿಯಲ್ಲಿದೆ. ಮತ್ತು ಸಾಧಾರಣ 1250 ಮೊಟ್ಟೆಗಳನ್ನು ಪ್ರತಿ ದಿನ ಪಡೆಯಬಹುದಾಗಿದೆ. ಆದರೆ ಬ್ರೊಯಿಲರ್ ಕೋಳಿಗಳಿಂದ ಪ್ರತಿ ತಿಂಗಳು ನಮ್ಮ ಪಂಚಾಯತಿಗೆ ಸುಮಾರು ರೂ. ಎರಡು ಲಕ್ಷದಷ್ಟು ಆದಾಯವಿದೆ. ಮತ್ತು ನಾಡಕೋಳಿಗಳಿಂದ ವಾರ್ಷಿಕವಾಗಿ ಸುಮಾರು ರೂ. ಹತ್ತು ಲಕ್ಷದಷ್ಟು ಆದಾಯವಿದೆ. ಈಗ ಇಲ್ಲಿ ಸಾಕಲ್ಪಡುವ ಕೋಳಿಗಳಿಂದ ಇಲ್ಲಿನ ಜನರಿಗೆ ಬೇಕಾದಷ್ಟು ಮಾಂಸ ಮತ್ತು ಮೊಟ್ಟೆ ಪೂರೈಸಲ್ಪಡುತ್ತಿಲ್ಲ. ಮಾತ್ರವಲ್ಲ ಮೊಟ್ಟೆಗಾಗಿ ನಾವು ಅನ್ಯ ಪ್ರಾಂತ್ಯಗಳನ್ನು ಅವಲಂಬಿಸಿರುವೆವು. ಇಲ್ಲಿ ಮೊಟ್ಟೆಗಾಗಿ ಕೋಳಿ ಸಾಕಣೆಗೆ ವಿಫುಲವಾದ ಅವಕಾಶವಿದೆ. ಅಂತೆಯೇ ಬಾತುಕೋಳಿ ಸಾಕಣೆಗೆ ತುಂಬಾ ಅವಕಾಶ ಇದೆ.

ಪ್ರಸ್ತುತ ಒಂದು ಮನೆಗೆ 15ರಂತೆ ಕೋಳಿಗಳನ್ನು ರೂ. 100/- ಸಬ್ಸಿಡಿ ದರದಲ್ಲಿ ವಿತರಿಸುವ ವ್ಯವಸ್ಥೆ ಜ್ಯಾರಿಯಲ್ಲಿದೆ.

ಸಮಸ್ಯೆಗಳು

ಇಲ್ಲಿ ಶಾಸ್ತ್ರೀಯ ರೀತಿಯಲ್ಲಿ ಕೋಳಿಸಾಕಣೆಯ ಕುರಿತು ಜನರಿಗೆ ತಿಳುವಳಿಕೆ ಇಲ್ಲ. ಕೋಳಿಗಳ ಮಾರಾಟಕ್ಕೆ ಸರಿಯಾದ ವ್ಯವಸ್ಥೆ ಇಲ್ಲ. ಕೋಳಿಸಾಕಣೆಯು ಲಾಭದಾಯಕವೆಂಬುದರ ಬಗ್ಗೆ ಜನರಿಗೆ ತಿಳುವಳಿಕೆ ಇಲ್ಲ. ಕೋಳಿಗಳ ರೋಗಗಳಿಗೆ ತಕ್ಕ ಚಿಕಿತ್ಸಾ ಪದ್ಧತಿಯ ಕುರಿತು ಜನರಿಗೆ ತಿಳುವಳಿಕೆ ಇಲ್ಲ ಮತ್ತು ಸರಿಯಾದ ಅವಕಾಶವಿಲ್ಲದಿರುವುದು. ಸುಧಾರಿತ ತಳಿಗಳ ಅಲಬ್ಯತೆ, ಕೋಳಿ ಆಹಾರದ ದುಬಾರಿ ಬೆಲೆ ಮತ್ತು ಸರಿಯಾದ ವಿತರಣಾ ವ್ಯವಸ್ಥೆ ಇಲ್ಲದಿರುವುದು. ಹೊರ ಪ್ರದೇಶದಿಂದ ಹೆಚ್ಚಿನ ಸಂಖ್ಯೆಯಲ್ಲಿ ಕಡಿಮೆ ಬೆಲೆಗೆ ಕೋಳಿಮೊಟ್ಟೆ ಒದಗಿಸಲ್ಪಡುವುದು. ಇಲ್ಲಿ ಕೋಳಿ ಸಾಕಣೆಗಾರರ ಸಹಕಾರಿಗುಂಪುಗಳು ಕಾರ್ಯಾಚರಿಸುತ್ತಿಲ್ಲ. ಕೋಳಿ ಮರಿಗಳ ಉತ್ಪಾದನೆಗೆ ಬೇಕಾದ ವ್ಯವಸ್ಥೆಗಳಿಲ್ಲ.

ಪರಿಹಾರೋಪಾಯಗಳು

ಕೋಳಿಸಾಕಣೆಯ ಲಾಭದಾಯಕತೆಯ ಮತ್ತು ಶಾಸ್ತ್ರೀಯ ರೀತಿಯಲ್ಲಿ ಕೋಳಿ ಸಾಕಣೆಯ ಕುರಿತು ಅರಿವು ಮೂಡಿಸಲು ತರಬೇತಿ ನೀಡುವುದು.

ಕೋಳಿ ಸಾಕಾಣೆಗಾರರಿಗೆ ಸಬ್ಸಿಡಿ ಆಧರಿತ ಸ್ಕೀಮುಗಳ ಮೂಲಕ ಧನಸಹಾಯ ನೀಡುವುದು. ಮನೆಯಂಗಳದಲ್ಲಿ ಕೋಳಿ ಸಾಕಣೆಯ ಪದ್ಧತಿಯಲ್ಲಿ ಮಿಶ್ರತಳಿ ಕೋಳಿ ಮರಿಗಳನ್ನು ಒದಗಿಸಲು 'ಎಗ್ಸ್ ನರ್ಸರಿ' ಹಾಗೂ ಶಾಲೆಗಳಲ್ಲಿ ಶಾಲಾ ಕೋಳಿ ಸಾಕಣಾ ಕ್ಲಬ್ (School Poultry Club) ಗಳ ಸ್ಥಾಪನೆಯಾಗಬೇಕು. ಕೋಳಿಗಳ ರೋಗ ನಿರೋಧಕ ಔಷಧಿಗಳನ್ನು ಉಚಿತವಾಗಿ ನೀಡುವುದು ಮತ್ತು ಚುಚ್ಚುಮದ್ದು ನೀಡಲು ಬೇಕಾದ ತರಬೇತಿ ನೀಡಬೇಕು. ಕೋಳಿ ಆಹಾರವನ್ನು ನ್ಯಾಯಬೆಲೆಗೆ ಒದಗಿಸಬೇಕು. ಕೋಳಿ ಸಾಕಣೆಗಾರರ ಸಹಕಾರಿ ಸಂಘಗಳನ್ನು ರೂಪಿಸಬೇಕು. ಕೋಳಿ ಮಾಂಸ ಮತ್ತು ಮೊಟ್ಟೆಗಳನ್ನು ಸಂಸ್ಕರಿಸುವ ಹಾಗೂ ವಿತರಿಸುವ ಕೇಂದ್ರವನ್ನು ಸ್ಥಾಪಿಸಬೇಕು. ಕೋಳಿ ಸಾಕಣೆಗೆ ಕೋಳಿ ಗೂಡು ಯಾ ಕಟ್ಟಡಗಳ ರಚನೆಗೆ ಬೇಕಾದ ಸಹಾಯಧನ ಒದಗಿಸಬೇಕು. ಮೊಟ್ಟೆ ಉತ್ಪಾದಿಸುವ ಕೋಳಿ ಮತ್ತು ಬಾತುಕೋಳಿಗಳ ಮರಿಗಳನ್ನು ಸುಲಭವಾಗಿ ಕೊಂಡುಕೊಳ್ಳಲು ಸಾಧ್ಯವಾಗುವ ವ್ಯವಸ್ಥೆ ಮಾಡಬೇಕು. ಇದಕ್ಕೆ ಧನಸಹಾಯವನ್ನು ಒದಗಿಸುವ ವ್ಯವಸ್ಥೆ ಬೇಕು. ಮಾಂಸದ ಕೋಳಿ (ಬ್ರೊಯಿಲರ್) ಸಾಕಣೆಗೆ ಧನಸಹಾಯ ಒದಗಿಸುವ ವ್ಯವಸ್ಥೆ ಬೇಕು. ಕೋಳಿ ಆಹಾರ ಉತ್ಪಾದನಾ ಘಟಕವನ್ನು ಪಂಚಾಯತ್ ಕೇಂದ್ರವಾಗಿ ಸ್ಥಾಪಿಸಬೇಕು.

ಆಡು ಸಾಕಣೆ

'ಆಡು ಬಡವರ ಧನ' ವೆಂಬ ನಾಣ್ಣುಡಿ ಇದೆ. ಆಡು ಸಾಕಣೆಯು ಎಲ್ಲಾ ಪರಿಸ್ಥಿತಿಗಳಿಗೆ ಹೊಂದಿಕೊಳ್ಳುವ ಗುಣ ಉಳ್ಳದ್ದಾಗಿದೆ. ನಮ್ಮ ಪಂಚಾಯತಿನಲ್ಲಿ ಆಡು ಸಾಕಣೆಯು ವಿಕೇಂದ್ರೀಕೃತವಾಗಿ ನಡೆಯುತ್ತದೆ. ಆಡುಗಳನ್ನು ಮೇಯಲು ಗುಡ್ಡಗಳಿಗೆ ಬಿಟ್ಟು ಸಾಕುವ ಪದ್ಧತಿ ಇದೆ. 1995-96ರ ಗಣತಿ ಪ್ರಕಾರ ಇಲ್ಲಿ ಕೇವಲ 130 ಆಡುಗಳು ಸಾಕಲ್ಪಡುತ್ತವೆ. ಇಲ್ಲಿನ ಜನರು ಆಡಿನ ಮಾಂಸಕ್ಕೆ ಇತರ ರಾಜ್ಯಗಳನ್ನು ಆಶ್ರಯಿಸಿಕೊಂಡಿರುವರು. ಪ್ರಸ್ತುತ ಒಂದು ಮನೆಗೆ ಎರಡರಂತೆ ರೂ. 450/- ಸಬ್ಸಿಡಿ ದರದಲ್ಲಿ ಆಡುಗಳನ್ನು ಒದಗಿಸುವ ಪದ್ಧತಿ ಜಾರಿಯಲ್ಲಿದೆ. ಆಡಿನ ಹಾಲು ಔಷಧ ಉಳ್ಳದೆಂದು ನಂಬಿಕೆ ಇದೆ. ಪ್ರಸ್ತುತ ಆಡಿನ ಮಾಂಸಕ್ಕೆ ಕಿಲೋ ಒಂದರ ರೂ. 110/- ಬೆಲೆ ಇದೆ.

ಸಮಸ್ಯೆಗಳು

ಆಡುಗಳನ್ನು ಹೊರಗೆ ಮೇಯಲು ಬಿಟ್ಟು ಸಾಕುವ ಪದ್ಧತಿಗೆ ಬೇಕಾದಷ್ಟು ಮೈದಾನ ಪ್ರದೇಶದ ಕೊರತೆ ಇದೆ. ಆಡು ಸಾಕಣೆಯ ಬಗ್ಗೆ ಜನರಿಗೆ ಬೇಕಾದಷ್ಟು ತಿಳುವಳಿಕೆ ಇಲ್ಲದಿರುವುದು. ಉತ್ತಮತಳಿ ಆಡುಗಳ ಅಲಭ್ಯತೆ. ಉತ್ತಮತರದ ಕಸಾಯಿಖಾನೆಗಳ ಕೊರತೆ ಆಡುಗಳು ಕೃಷಿಗೆ ಮಾರಕವಾಗಹುದೆಂಬ ಅಭಿಪ್ರಾಯ ಜನರಲ್ಲಿರುವುದು. ಆಡು ಸಾಕಣೆಗೆ ಪ್ರೋತ್ಸಾಹ ನೀಡುವಿಕೆಯ ಕೊರತೆ ಇದೆ.

ಪರಿಹಾರೋಪಾಯಗಳು

ಆಡು ಸಾಕಣೆಗೆ ಯೋಗ್ಯ ರೀತಿಯಲ್ಲಿ ಧನಸಹಾಯ ಮತ್ತು ಮಾರ್ಗದರ್ಶನ

ವೀಯುವುದರೊಂದಿಗೆ ಪ್ರೋತ್ಸಾಹ ಅಗತ್ಯವಾಗಿದೆ. ಆಡಿನ ಆಹಾರವು ಸುಲಭವಾಗಿ ನ್ಯಾಯಬೆಲೆಗೆ ಸಿಗುವಂತಾಗಬೇಕು. ಸುಧಾರಿತ ತಳಿಯ ಆಡಿನಮರಿಗಳನ್ನೂ ಆಡುಸಾಕಣೆಗೆ ಅಭಿರುಚಿ ಇರುವವರಿಗೆ ಒದಗಿಸಬೇಕು. ಉತ್ತಮ ತರದ ಕಸಾಯಿ ಖಾನೆಗಳನ್ನು ಸ್ಥಾಪಿಸಿ ಮಾಂಸವನ್ನು ಸಂಗ್ರಹಿಸಿಡುವ ವ್ಯವಸ್ಥೆಯಾಗಬೇಕು. ಆಡಿನ ಚರ್ಮದ ಮಾರಾಟಕ್ಕೆ ಸರಿಯಾದ ವ್ಯವಸ್ಥೆ. ಆಡುಗಳಿಗೆ ಕೃತಕ ಗರ್ಭಧಾರಣಾ ವ್ಯವಸ್ಥೆಯ ಮೂಲಕ ಉತ್ತಮ ತಳಿಗಳನ್ನುಂಟು ಮಾಡುವ ವ್ಯವಸ್ಥೆ ಮಾಡಬೇಕಾಗಿದೆ. ಆಡು ಬೆಳೆಸುವವರ ಸಂಘಟನೆಗಳು ರೂಪಿತವಾಗಬೇಕು. ಉತ್ತಮ ತಳಿಯ ಆಡುಗಳನ್ನು ಸಾಕುವುದರಿಂದ ಆಡಿನಿಂದ ಹಾಲು ಪಡೆಯುವ ಉದ್ದೇಶವನ್ನು ವಿಪುಲೀಕರಿಸಬೇಕು. ಮಾರ್ಕೆಟ್‌ಗಳಲ್ಲಿ ಸಿಗುವ ಎಲ್ಲಾ ತರದ ಮಾಂಸಗಳೂ ತಿನ್ನಲು ಯೋಗ್ಯವೆಂಬುದರ ಬಗ್ಗೆ ಖಾತರಿ ಆಗತ್ಯವಾಗಿದೆ.

ಹಂದಿ ಸಾಕಣೆ

ಹಂದಿಯು ಮಾಂಸಕ್ಕಾಗಿ ಸಾಕುವ ಒಂದು ಪ್ರಾಣಿಯಾಗಿದೆ. ನಮ್ಮ ಪಂಚಾಯತ್ ವ್ಯಾಪ್ತಿಯಲ್ಲಿ ಇದು ತೀರಾ ವಿರಳವಾದರೂ 1995-96ರ ಗಣತಿಯ ಪ್ರಕಾರ 45 ಹಂದಿಗಳಿವೆ. ಹಂದಿ ಮಾಂಸಕ್ಕೆ ಬೇಡಿಕೆ ತುಂಬಾ ಇದೆ. 'ಗೊಂದೋಳು ಪೂಜೆ' ಎಂಬ ಕಾರ್ಯ ಕ್ರಮಕ್ಕೆ ಹಂದಿಯ ಮಾಂಸದ ಪದಾರ್ಥ ಬಹಳ ಪ್ರಾಮುಖ್ಯವಾಗಿದೆ. ಸುಧಾರಿತ ತಳಿಯ ಹಂದಿಗಳ ಸಾಕಣೆಯು ಲಾಭದಾಯಕವಾದ ಒಂದು ವೃತ್ತಿಯಾಗಿದೆ.

ಸಮಸ್ಯೆಗಳು

ಹಂದಿಯ ಕುರಿತು ಜನರಲ್ಲಿ ತಾತ್ಸಾರ ಭಾವನೆ ಮತ್ತು ಕೆಲವು ವಿಭಾಗದವರು ಹಂದಿಯನ್ನು ಮತೀಯ ಕಾರಣದಿಂದ ದೂರಗೊಳಿಸುವುದು. ಹಂದಿಯ ಸಾಕಣೆಗೆ ಪ್ರೋತ್ಸಾಹ ಇಲ್ಲದಿರುವುದು ಮತ್ತು ಹಂದಿಸಾಕಣೆಯ ಕುರಿತಾದ ತಿಳುವಳಿಕೆಯ ಕೊರತೆ, ಹಂದಿ ಸಾಕಣೆಗೆ ಆರ್ಥಿಕ ಸಹಾಯದ ಕೊರತೆ, ಉತ್ತಮ ತಳಿಗಳ ಹಂದಿಮರಿಗಳ ಅಲಭ್ಯತೆ.

ಪರಿಹಾರೋಪಾಯಗಳು

ಹಂದಿಸಾಕಣೆಯ ಬಗ್ಗೆ ಜನರಿಗೆ ಸರಿಯಾದ ಮಾರ್ಗದರ್ಶನ ವೀಯುವುದು ಮತ್ತು ಆರ್ಥಿಕ ಸಹಾಯ ಒದಗಿಸುವುದು. ಉತ್ತಮ ತಳಿಯ ಹಂದಿ ಮರಿಗಳನ್ನು ಅಭಿರುಚಿ ಇರುವ ಹಂದಿಸಾಕಣೆಗಾರರಿಗೆ ಕಡಿಮೆ ಬೆಲೆಯಲ್ಲಿ ಒದಗಿಸುವುದು. ಹಂದಿ ಮಾಂಸ ಮಾರಾಟ ಮತ್ತು ಸಂಸ್ಕರಣೆ ಯೋಗ್ಯ ವ್ಯವಸ್ಥೆಯನ್ನು ಮಾಡುವುದು. ಹಂದಿಯ ಕುರಿತಾದ ಕೀಳರಿಮೆಯನ್ನು ಹೋಗಲಾಡಿಸುವುದು.

ಮೊಲ ಸಾಕಣೆ

ಮೊಲ ಸಾಕಣೆ ಲಾಭದಾಯಕ ವೃತ್ತಿಯಾಗಿಯೂ ಉತ್ತಮ ಹವ್ಯಾಸವಾಗಿಯೂ ನಡೆಸಬಹುದಾದ ಒಂದು ಉಪಕಸುಬಾಗಿದೆ. ಮೊಲವನ್ನು ಮೆಚ್ಚದವರು ಬಹಳ ಅಪರೂಪ. ಅದರ ಮಾಂಸವು ಬಹಳ ರುಚಿಕರವಾಗಿರುವುದರಿಂದ ಮೊಲಕ್ಕೆ ಬೇಡಿಕೆ ಸಾಕಷ್ಟಿದೆ. ಇದನ್ನು ಸಾಕಲು ಮನೆಯಂಗಳವೇ ಯೋಗ್ಯ ವಾದ ಸ್ಥಳವಾಗಿದೆ. ಮೊಲ ಸಾಕಣೆಗೆ ನಮ್ಮ ಪಂಚಾಯತ್ ಪ್ರದೇಶದಲ್ಲಿ ವಿಪುಲವಾದ ಅವಕಾಶವಿದೆ.

ಸಮಸ್ಯೆಗಳು

ಮೊಲಸಾಕಣೆಗೆ ಬೆಕ್ಕುಗಳ ಮತ್ತು ನಾಯಿಗಳ ಉಪದ್ರ. ಮೊಲಸಾಕಣೆ ಪ್ರೋತ್ಸಾಹದ ಕೊರತೆ ಹಾಗೂ ಸಾಕಣೆಯ ಕುರಿತಾದ ಮಾಹಿತಿಯ ಕೊರತೆ. ಯೋಗ್ಯ ತಳಿಗಳ ಮೊಲದ ಮರಿಗಳ ಅಲಭ್ಯ.

ಪರಿಹಾರೋಪಾಯಗಳು

ಮೊಲಸಾಕಣೆಯಲ್ಲಿ ಅಭಿರುಚಿ ಇರುವವರಿಗೆ ಯೋಗ್ಯ ಮಾರ್ಗದರ್ಶನ ಹಾಗೂ ಧನಸಹಾಯ ಒದಗಿಸುವುದು. ಯೋಗ್ಯ ತಳಿಗಳ ಮೊಲದ ಮರಿಗಳ ವಿತರಣೆ. ಮೊಲದ ಗೂಡು ರಚನೆಗೆ ಧನಸಹಾಯ, ಮಹಿಳೆಯರಿಗೆ ಮತ್ತು ಮಕ್ಕಳಿಗೆ ಮೊಲಸಾಕಣೆಯ ಕುರಿತಾದ ತರಬೇತಿ ನೀಡುವುದು ಅಗತ್ಯವಾಗಿದೆ.

ಮೀನುಸಾಕಣೆ

ಮನುಷ್ಯನ ಮಾಂಸಾಹಾರದ ಒಂದು ಮುಖ್ಯ ಘಟಕವು ಮೀನು ಆಗಿರುವುದರಿಂದ ಮೀನಿಗೆ ಬೇಡಿಕೆ ತುಂಬಾ ಇದೆ. ಒಳ ಪ್ರದೇಶದಲ್ಲಿ ಸಿಹಿ ನೀರಿನಲ್ಲಿ ಕೆಲವು ಜಾತಿಯ ಮೀನುಗಳನ್ನು ಸಾಕುತ್ತಾರೆ. ಸಿಗಡಿ ಮೀನು ಸಾಕಣೆ ಅಂತರ್ರಾಷ್ಟ್ರೀಯ ಮಟ್ಟದಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಕಡಿಮೆ ಅವಧಿಯಲ್ಲಿ ಬೆಳೆಯುವ ಮೀನುಸಾಕಣೆಗೆ ಖಾಸಗಿ ಕೆರೆ, ಬಾವಿ ಗಳಲ್ಲಿ ತುಂಬಾ ಅವಕಾಶಗಳಿವೆ. ಕಯ್ಯಾರು, ಕುಡಾಲ್ ಮೇರ್ಕಳ, ಚೇರಾಲ್, ಕನಿಯಾಲ, ಕಳಾಯಿ, ಬಾಯಾರು, ಚಿಪ್ಪಾರು, ಬಳ್ಳೂರು ಮೊದಲಾದೆಡೆ ಮೀನುಸಾಕಣೆಗೆ ಅವಕಾಶಗಳಿವೆ. ಒಂದೆರಡು ಮೀನು ಸಾಕಣೆಯ ಕೇಂದ್ರಗಳ ಈ ಪಂಚಾಯತ್ ವ್ಯಾಪ್ತಿಯಲ್ಲಿದೆ.

ಸಮಸ್ಯೆಗಳು

ಈ ಪ್ರದೇಶದಲ್ಲಿ ದೊಡ್ಡ ದೊಡ್ಡ ಕೆರೆಗಳು ಕಡಿಮೆ ಮಾತ್ರವಲ್ಲ ಬೇಸಗೆ ಕಾಲದಲ್ಲಿ ಬತ್ತಿ ಹೋಗುವುದು ಮತ್ತು ಮಳೆಗಾಲದಲ್ಲಿ ನೀರು ಹೊರಗೆ ಹರಿದು ಹೋಗುವುದು. ಸಮುದ್ರದ ಮೀನು ಧಾರಳವಾಗಿ ಲಭಿಸುವುದರಿಂದಲೂ ಬೆಲೆ ಅಗ್ಗವಾಗಿರುವುದರಿಂದಲೂ ಸಾಕು ಮೀನು ಮಾರಾಟಕ್ಕೆ ಕಷ್ಟವಾಗುವುದು. ಸಿಹಿನೀರಿನಲ್ಲಿ ಬೆಳೆಯುವ ಮರಿಗಳ ಲಭ್ಯತೆಯ ಅಭಾವ. ಮೀನುಸಾಕಾಣೆಗೆ ಬೇಕಾದ ಮಾಹಿತಿಯ ಕೊರತೆ.

ಪರಿಹಾರೋಪಾಯಗಳು

ಮೀನು ಸಾಕಣೆಗೆ ಸರಿಯಾದ ಮಾಹಿತಿ ಹಾಗೂ ತರಬೇತಿಗಳನ್ನು ನೀಡುವುದು. ಕಡಿಮೆ ಅವಧಿಯಲ್ಲಿ ಬೆಳೆಯುವ ಮೀನುಗಳನ್ನು ಖಾಸಗಿಯಾಗಿ ಬೆಳೆಸಲು ಅಭಿರುಚಿ ಇರುವವರಿಗೆ ಅವರವರ ಕೆರೆ ಮತ್ತು ಕೊಳಗಳಲ್ಲಿ ಬೆಳೆಸಲು ಯೋಗ್ಯ ಮೀನಿನ ಮರಿಗಳನ್ನು ತಕ್ಕ ಸಮಯದಲ್ಲಿ ವಿತರಿಸುವ ವ್ಯವಸ್ಥೆ ಬೇಕಾಗಿದೆ. ಸಮುದ್ರದ ಮೀನಿನ ಕೊರತೆ ಇರುವ ಸಮಯದಲ್ಲಿ ಸಾಕಿದ ಮೀನನ್ನು ಹಿಡಿದು ಮಾರುವಂತೆ ಮಾಡಲು ಸರಿಯಾದ ವ್ಯವಸ್ಥೆಯನ್ನು ತಿಳಿಯಪಡಿಸುವುದು. ಮೀನುಸಾಕಣೆಗೆ ಯೋಗ್ಯ ಸ್ಥಳದ ಸರ್ವೆ ನಡೆಸಿ ಜನರಿಗೆ ಸಿಗಡಿ ಮೀನು ಯಾ ಅನುಯೋಜಿಸಿದ ತಳಿಗಳ ಮೀನು ಬೆಳೆಸಲು ಮಾರ್ಗದರ್ಶನ ನೀಡುವುದು.

ನಾಯಿ ಸಾಕಣೆ

ಮನೆಯನ್ನು ಕಾಯುವ ಉದ್ದೇಶಕ್ಕಾಗಿ ನಾಯಿಗಳನ್ನು ಸಾಕುತ್ತಾರೆ. ನಮ್ಮ ಪಂಚಾಯತ್ ಪ್ರದೇಶದಲ್ಲಿ 1995-96ರ ಗಣತಿಯ ಪ್ರಕಾರ ಸುಮಾರು 2615 ಸಾಕುನಾಯಿಗಳಿವೆ ಮತ್ತು ಬೀದಿ ನಾಯಿಗಳ ಸಂಖ್ಯೆ ಬೇರೆಯೇ ಇದೆ. ನಾಯಿಗಳನ್ನು

ಕಟ್ಟಿ ಹಾಕಿಯೂ ಬಿಟ್ಟೂ ಸಾಕುವ ಕ್ರಮ ಇಲ್ಲಿದೆ. ಕಳೆದ ವರ್ಷ ಕೇವಲ 50 ನಾಯಿಗಳಿಗೆ ಮಾತ್ರ ಏಂಟೀ ರೇಬೀಸ್ ಚುಚ್ಚು ಮದ್ದು ನೀಡಲಾಗಿದೆ. ಆದುದರಿಂದ ಹುಚ್ಚು ನಾಯಿ ರೋಗದ ಭಯ ತುಂಬಾ ಇದೆ. ವರ್ಷಂಪ್ರತಿ ನೂರಾರು ಹುಚ್ಚು ನಾಯಿಗಳು ಇಲ್ಲಿ ಪತ್ತೆಯಾಗುತ್ತವೆ. ಇಲ್ಲಿ ಸುಧಾರಿತ ತಳಿಯ ನಾಯಿಗಲೂ ಸಣ್ಣ ಪ್ರಮಾಣದಲ್ಲಿ ಸಾಕಲ್ಪಡುತ್ತವೆ. ಬೀದಿನಾಯಿಗಳ ಮತ್ತು ಬಿಟ್ಟು ಸಾಕುವ ನಾಯಿಗಳ ಉಪದ್ರವದಿಂದ ಶಾಲಾ ಮಕ್ಕಳೂ ಇತರರೂ ಕಷ್ಟ ಅನುಭವಿಸಬೇಕಾದ ಪರಿಸ್ಥಿತಿ ತುಂಬಾ ಇದೆ.

ಎಲ್ಲಾ ಸಾಕು ನಾಯಿಗಳಿಗೆ ಉಚಿತವಾಗಿ ಹುಚ್ಚು ನಿರೋಧಕ ಚುಚ್ಚು ಮದ್ದು ನೀಡಬೇಕು. ಹಾಗೂ ನಾಯಿ ಸಾಕಣೆಗೆ ಅನುಮತಿ ಪಡೆದಿರಬೇಕು. ಅಲೆಮಾರಿ ನಾಯಿಗಳನ್ನು ಸಂಹರಿಸುವ ವ್ಯವಸ್ಥೆ ಬೇಕು.



ಕೈಗಾರಿಕಾ ರಂಗ

ಕೈಗಾರಿಕೆಯಲ್ಲಿ ನಮ್ಮ ಪಂಚಾಯತು ಬಹಳ ಹಿಂದುಳಿದಿರುತ್ತದೆ. ಈ ಪಂಚಾಯತಿನ ಪಶ್ಚಿಮ ಗಡಿಯು ಕರಾವಳಿಯಿಂದ ಐದು ಕಿಲೋಮೀಟರುಗಳಷ್ಟು ದೂರದಲ್ಲಿದ್ದು ಇಲ್ಲಿನ ಭೂಪ್ರಕೃತಿಯು ಏರಿಳಿತ ಗುಡ್ಡ ಬೆಟ್ಟ ಕಣಿವೆಗಳಿಂದ ಕೂಡಿಕೊಂಡಿರುವ ಕಾರಣ ಕೈಗಾರಿಕೆಯ ಬೆಳವಣಿಗೆಗೆ ಬಹಳ ಯೋಗ್ಯವೆನ್ನುವಂತಿಲ್ಲ. ಸಾರಿಗೆ ಸೌಕರ್ಯದ ಕೊರತೆ, ವಿದ್ಯುತ್ ಸರಬರಾಜು ಎಲ್ಲ ಪ್ರದೇಶಗಳಿಗೆ ಇಲ್ಲಿದಿರುವುದು ಉದ್ಯಮಗಳ ಬೆಳವಣಿಗೆಗೆ ಇದು ಪ್ರಧಾನ ತೊಡಕುಗಳಾಗಿರುತ್ತವೆ. ಪ್ರಕೃತಿ ಸಂಪನ್ಮೂಲಗಳನ್ನು ಅವಲಂಬಿಸಿ ಕೊಂಡಿರುವ ಕೆಲವು ಸಣ್ಣ ಪ್ರಮಾಣದ ಕೈಗಾರಿಕೆಗಳು ಪಂಚಾಯತಿನ ಕೆಲವು ಕಡೆಗಳಲ್ಲಿ ಕಂಡು ಬರುತ್ತವೆ. ಇವುಗಳೊಂದಿಗೆ ಪರಂಪರಾಗತವಾದ ಕೆಲವು ತರದ ಗುಡಿಕೈಗಾರಿಕೆಗಳು ಅಸ್ತಿತ್ವದಲ್ಲಿವೆ. ಆದರೆ ಇವೆಲ್ಲಾ ಇಲ್ಲಿಯ ಜನರ ಆರ್ಥಿಕ ಚಟುವಟಿಕೆಯಲ್ಲಿ ಉತ್ತೇಜನಕಾರಿಯಾದ ಪಾತ್ರವನ್ನು ವಹಿಸಿದ ಹಾಗೆ ಕಂಡು ಬರುವುದಿಲ್ಲ. ಸರಿಯಾದ ರೀತಿಯಲ್ಲಿ ಆರ್ಥಿಕ ಸಹಾಯ ಮತ್ತು ಮಾರ್ಗದರ್ಶನವನ್ನು ಮಾಡಿದಲ್ಲಿ ಈ ಕ್ಷೇತ್ರದಲ್ಲಿ ಪರಿಣಾಮಕಾರಿಯಾದ ಬದಲಾವಣೆಯನ್ನು ತರಲು ಸಾಧ್ಯವಿದೆ. ಮುಖ್ಯವಾಗಿ ಎದ್ದು ಕಾಣುವ ನಿರುದ್ಯೋಗಿ ಯುವಕರಲ್ಲಿ ಸ್ವಯಂ ಉದ್ಯೋಗವನ್ನು ನಡೆಸುವ ಅಭಿರುಚಿಯನ್ನು ಉಂಟುಮಾಡಬೇಕಾಗಿರುತ್ತದೆ. ನಮ್ಮಲ್ಲಿ ದೊರೆಯುವ ಸಂಪನ್ಮೂಲಗಳನ್ನು ಸರಿಯಾದ ರೀತಿಯಲ್ಲಿ ಉಪಯೋಗಿಸುವ ಮನೋಭಾವ ಮತ್ತು ಪ್ರಯತ್ನ ನಡೆದಲ್ಲಿ ಹಿಂದುಳಿದ ಈ ಪ್ರದೇಶ ಆರ್ಥಿಕ ಪ್ರಗತಿಯನ್ನು ಸಾಧಿಸಬಹುದು. ಅದಕ್ಕಾಗಿ ಉತ್ಪಾದನಾ ಸಾಧ್ಯತೆಗಳ ಸರಿಯಾದ ಒಂದು ಯೋಜನೆಯನ್ನು ನಾವು ಹಾಕಿಕೊಳ್ಳಬೇಕಾಗಿರುತ್ತದೆ. ಸ್ಥಿತಿ ವಿವರಗಳ ಲೆಕ್ಕಾಚಾರವೂ ಈ ನಿಟ್ಟಿನಲ್ಲಿ ಅಗತ್ಯವಾಗಿರುತ್ತದೆ.

ದೇಶವು ಸ್ವಾತಂತ್ರ್ಯವನ್ನು ಪಡೆದ ಮೇಲೆ ಒಂದರಿಂದ ಎಂಟರ ತನಕದ ಪಂಚವಾರ್ಷಿಕ ಯೋಜನೆಗಳು ಜಾರಿಗೆ ಬಂದರೂ ನಮ್ಮ ಪಂಚಾಯತಿನಲ್ಲಿ ಸಾರ್ವಜನಿಕ ಕ್ಷೇತ್ರದಲ್ಲಿ ಯಾವುದೇ ಘನ ಕೈಗಾರಿಕೆಗಳು ಸ್ಥಾಪಿಸಲ್ಪಟ್ಟಿರುವುದಿಲ್ಲ. ಖಾಸಗಿ ಕ್ಷೇತ್ರದಲ್ಲಿ ಕೆಲವೊಂದು ಸಣ್ಣ ಪುಟ್ಟ ಕೈಗಾರಿಕೆಗಳೂ, ಪರಂಪರಾಗತವಾದ ಹಲವು ತರದ ಗುಡಿಕೈಗಾರಿಕೆಗಳೂ ಇಲ್ಲಿಯ ಜನರಲ್ಲಿ ಶೇಕಡಾ 45ರಷ್ಟು ಜನರಿಗೆ ಪೂರ್ಣವಾಗಿಯೋ, ಭಾಗಿಕವಾಗಿಯೋ ಉದ್ಯೋಗವಕಾಶವನ್ನು ಒದಗಿಸುತ್ತದೆ.

ನಮ್ಮಲ್ಲಿ ಈಗ ಇರುವ ಕೈಗಾರಿಕೆಗಳು

1. ಬಿಸ್ಕೆಟ್ ಫೇಕ್ಟರಿ: ಬಾಯಿಕಟ್ಟೆಯಲ್ಲಿರುವ ಬಿಸ್ಕೆಟ್ ಫೇಕ್ಟರಿಯು ಸಾಧಾರಣ ಲಾಭದಾಯಕವಾಗಿ ನಡೆಯುತ್ತಿದ್ದರೆ, ಕಯ್ಯಾರು ಬಿಸ್ಕೆಟ್ ಫ್ಯಾಕ್ಟರಿಯು ಪ್ರಕೃತ ಮುಚ್ಚಲ್ಪಟ್ಟಿದೆ.

2. ಸ್ಟೀಲ್ ಕಪಾಟು ಮತ್ತು ಪೀಠೋಪಕರಣಗಳ ತಯಾರಿ - ಒಟ್ಟು ನಾಲ್ಕು ಕಡೆಗಳಲ್ಲಿ

3. ಮರದ ಉದ್ಯಮ - ಎರಡು ಕಡೆಗಳಲ್ಲಿ

4. ಕಟ್ಟಡದ ನಿರ್ಮಾಣಕ್ಕೆ ಬೇಕಾದ ಸಿಮೆಂಟಿನ ರಚನೆಗಳು -ಬಾಯಿಕಟ್ಟೆಯಲ್ಲಿ ಇದೆ

5.ಯಂತ್ರದ ಸಹಾಯದಿಂದ ಕೆಂಪುಕಲ್ಲು ಕಡಿಯುವ ಕೆಲಸ -15ಕಡೆಗಳಲ್ಲಿ

6. ಜಲ್ಲಿ ಕಲ್ಲಿನ ಕೋರೆಗಳು (ಕ್ರಶರ್) -6ಕಡೆಗಳಲ್ಲಿ

7. ವಾಹನಗಳ ರಿಪೇರಿ - 4ಕಡೆಗಳಲ್ಲಿ

8. ರೆಡಿಮೇಡ್ ವಸ್ತ್ರ ತಯಾರಿ - (R.M.G.) -3 ಕಡೆಗಳಲ್ಲಿ

9. ತಂಪು ಪಾನೀಯ ತಯಾರಿ - 4 ಕಡೆಗಳಲ್ಲಿ

10. ಬೇಕರಿ ವಸ್ತುಗಳ ತಯಾರಿ - 3 ಸ್ಥಳಗಳಲ್ಲಿ

11. ತೆಂಗಿನ ಎಣ್ಣೆಯ ಮಿಲ್ಲುಗಳು - 3ಕೇಂದ್ರಗಳಲ್ಲಿ

12. ಮುದ್ರಣಾಲಯ - ಏಕೈಕ ಸ್ಥಳದಲ್ಲಿ

13. ಪೈವಳಿಕೆಯಲ್ಲಿ ಖಾಸಗಿ ವ್ಯಕ್ತಿಯೋರ್ವರು ಚರ್ಮದಿಂದ ಕೈ ಗಡಿಯಾರಗಳಿಗೆ ಬೇಕಾದ ಬೆಲ್ಟ್ ತಯಾರಿಸುವ ಉದ್ಯಮವನ್ನು ಆರಂಭಿಸಿರುವುದು ಉಳಿದವರಿಗೆ ಮಾರ್ಗದರ್ಶಿಯಾಗಿರುತ್ತದೆ. ಬೇಂಕಿನಿಂದ ಧನಸಹಾಯ ಪಡೆದು ಕಾನ್‌ಪುರ, ಚೆನ್ನೈಗಳಿಂದ ಹದಗೊಳಿಸಿದ ಚರ್ಮವನ್ನು ತರಿಸಿ ಯಂತ್ರಗಳ ಸಹಾಯದಿಂದ ಈ ಉದ್ಯಮವನ್ನು ನಡೆಸುತ್ತಿರುವರು ಹತ್ತು ಮಂದಿಗೆ ಇದರಿಂದ ಉದ್ಯೋಗ ಅವಕಾಶ ದೊರೆತಿರುತ್ತದೆ.

14. ಬೀಡಿ ಕಟ್ಟುವುದು : ಈ ಗ್ರಾಮ ಪಂಚಾಯತಿನ ಎಲ್ಲಾ ಪ್ರದೇಶಗಳಲ್ಲಿ ಮುಖ್ಯವಾಗಿ ಹೆಂಗಸರು ಬೀಡಿ ಕಟ್ಟುವ ಕೆಲಸವನ್ನು ಮಾಡಿ ಜೀವಿಸುತ್ತಾರೆ. ಭಾರತ್ ದಿನೇಶ್ ಮತ್ತು ಟೆಲಿಫೋನ್ ಬೀಡಿ ಕಂಪೆನಿಗಳ ಏಜಂಟರು ಈ ಕೆಲಸಕ್ಕೆ ಬೇಕಾದ ಎಲೆ ಮತ್ತು ತಂಬಾಕು ಮಜೂರರಿಗೆ ವಿತರಿಸುತ್ತಾರೆ. ತಮ್ಮ ಮನೆಗಳಲ್ಲೇ ದಿನಂಪ್ರತಿ ಸಾಧಾರಣ 1500 ಬೀಡಿಗಳವರೆಗೂ ಕಟ್ಟುತ್ತಾರೆ. ಇವರಿಗೆ ಬೋನಸ್ ಮತ್ತು ಇವರ ಮಕ್ಕಳಿಗೆ ವಿದ್ಯಾರ್ಥಿ ವೇತನ ಮೊದಲಾದ ಸವಲತ್ತುಗಳು ದೊರೆಯುತ್ತವೆ. ಈ ಪ್ರದೇಶದ ಶೇಕಡಾ 40ರಷ್ಟು ಮನೆಯವರ ಜೀವನ ಈ ಉದ್ಯೋಗವನ್ನೇ ಆಶ್ರಯಿಸಿರುತ್ತದೆ. 6000ದಷ್ಟು ಮಹಿಳೆಯರು ಈ ಗ್ರಾಮ ಪಂಚಾಯತಿನಲ್ಲಿ ಬೀಡಿ ಕಟ್ಟುತ್ತಾರೆ. ಹಾಗೂ 200ರಷ್ಟು ಗಂಡಸರು ಈ ವೃತ್ತಿಯಲ್ಲಿ ನಿರತರಾಗಿದ್ದಾರೆ.

15. ಬಾಯಿಕಟ್ಟೆಯಲ್ಲಿ ಹೊಸದಾಗಿ ಪ್ಲಾಸ್ಟಿಕ್ಕಿನಿಂದ ಫ್ಯೆಲು, ಕವರು ಇತ್ಯಾದಿಗಳನ್ನು ತಯಾರಿಸುವ ಘಟಕವು ಆರಂಭಿಸಲ್ಪಟ್ಟಿರುತ್ತದೆ. ಇದು ವಿಸ್ತೃತವಾದ ರೀತಿಯಲ್ಲಿ ನಡೆಸಲು ಸಾಧ್ಯತೆಯಿರುವ ಮಾದರಿಯಾಗಿದೆ.

3.ಪರಂಪರಾಗತವಾದ ಗುಡಿಕೈಗಾರಿಕೆಗಳು

1. ಮಣ್ಣಿನಿಂದ ಮಡಿಕೆ ತಯಾರಿ : ಕನಿಯಾಲ, ಕರುವಜೆ ಮೊದಲಾದ ಕಡೆಗಳಲ್ಲಿ ಸಾಧಾರಣ 25 ಮನೆಯವರು ಈ ವೃತ್ತಿಯಲ್ಲಿ ನಿರತರಾಗಿದ್ದಾರೆ. ಕಾರ್ಮಿಕರ ಸಂಖ್ಯೆಯು ಸುಮಾರು ಐವತ್ತರಷ್ಟಿದೆ.

2. ಬುಟ್ಟಿ ಹೆಣೆಯುವುದು : ಚೆನ್ನಾಯ ಮೂಲೆ, ಬಾಯಾರು, ಪುಟ್ಟಮಾಣಿ, ಕನಿಯಾಲ, ಬೀರ್ನಕೋಡಿ, ಕಯ್ಯಾರು, ಬಳ್ಳೂರು ಮೊದಲಾದ ಕಡೆಗಳಲ್ಲಿ ಬುಟ್ಟಿಯನ್ನು ಸಣ್ಣ ಪ್ರಮಾಣದಲ್ಲಿ ಹೆಣೆಯುತ್ತಾರೆ. ಇದರ ಅಭಿವೃದ್ಧಿಗೆ ವಿಪುಲವಾದ ಅವಕಾಶಗಳಿವೆ.

3. ಹುಲ್ಲಿನಿಂದ ಚಾಪೆ ಹೆಣೆಯುವುದು. ಸಜಂಕಿಲ ಮತ್ತು ಜೋಡುಕಲ್ಲು ಮೊದಲಾದ ಕಡೆಗಳಲ್ಲಿ ಈ ವೃತ್ತಿಯನ್ನು ಅವಲಂಬಿಸಿದವರಿದ್ದಾರೆ.

4. ಮರದ ಕೆಲಸ : ಪಂಚಾಯತಿನ ಅಲ್ಲಲ್ಲಿ ಈ ಕೆಲಸವನ್ನು ಮಾಡುವ

ಬಡಗಿಗಳಿದ್ದಾರೆ. ಕುಶಲ ಕೈಗಾರಿಕೆಯಾದ ಕಾರಣ ಈ ಕೆಲಸಕ್ಕೆ ಉತ್ತಮವಾದ ಮಜೂರಿ ದೊರೆಯುತ್ತದೆ.

5. ಕಬ್ಬಿಣದ ಉಪಕರಣಗಳ ತಯಾರಿ : ಬಾಯಾರು, ಪೆರ್ಮುದೆ, ಪೈವಳಿಕೆ, ಜೋಡುಕಲ್ಲು, ಚೇವಾರು, ಕನಿಯಾಲ, ಸಜಂಕಿಲ ಮೊದಲಾದ ಕಡೆಗಳಲ್ಲಿ ಕೃಷಿ ಸಲಕರಣೆಗಳನ್ನು ತಯಾರಿಸುವ ಕಮ್ಮಾರರಿದ್ದಾರೆ.

6. ಚಿನ್ನದ ಕೆಲಸ : ಅಲ್ಲಲ್ಲಿ ಚಿನ್ನದ ಆಭರಣಗಳನ್ನು ತಯಾರಿಸುವ ಅಕ್ಕಸಾಲಿಗರಿದ್ದಾರೆ. ಇತ್ತೀಚೆಗೆ ಅಲ್ಲಲ್ಲಿ ಅಂಗಡಿಗಳನ್ನು ತೆರೆದು ಈ ವೃತ್ತಿಯನ್ನು ಬಹಳ ಲಾಭ ದಾಯಕವಾಗಿ ಮಾಡುವವರಿದ್ದಾರೆ.

7. ಬಟ್ಟೆ ನೇಯ್ಗೆ ಕೆಲಸ : ಜೋಡುಕಲ್ಲಿನಲ್ಲಿ ಒಂದೆರಡು ಮನೆಯವರು ಮಾತ್ರ ಕೈಮಗ್ಗಗಳ ಮೂಲಕ ಬಟ್ಟೆ ನೇಯುವ ಕೆಲಸವನ್ನು ಮಾಡಿ ಜೀವಿಸುತ್ತಾರೆ. ಕಾಸರಗೋಡಿನಿಂದ ಇದಕ್ಕೆ ಬೇಕಾದ ನೂಲು ಮತ್ತು ಬಣ್ಣವನ್ನು ಪಡೆಯುತ್ತಾರೆ. ಖಾದಿ ಬೋರ್ಡಿನವರು ಇದಕ್ಕೆ ಬೇಕಾದ ಧನಸಹಾಯವನ್ನು ಒದಗಿಸುತ್ತಾರೆ.

ಕೈಗಾರಿಕೆಯ ಬೆಳವಣಿಗೆಗೆ ಬೇಕಾದ ಸವಲತ್ತುಗಳು

1. ಘನ ಕೈಗಾರಿಕೆಗಳನ್ನು ಆರಂಭಿಸಲು ಯೋಗ್ಯವಾದ ಭೂ ಪ್ರದೇಶಗಳು ಈ ಪಂಚಾಯತಿನಲ್ಲಿ ಧಾರಾಳವಾಗಿವೆ.

ವಾರ್ಡು ನಂಬ್ರ 3ಕ್ಕೆ ಸೇರಿದ ಕೊಮ್ಮಂಗಳ, ವಾರ್ಡು ನಂಬ್ರ 5ರ ಬಾಯಿಕಟ್ಟೆಯಲ್ಲಿ ಈಗಾಗಲೇ ಹಲವು ತರದ ಸಣ್ಣ ಕೈಗಾರಿಕೆಗಳು ಅಸ್ತಿತ್ವದಲ್ಲಿವೆ. ಇನ್ನಷ್ಟು ಉದ್ಯಮಗಳನ್ನು ಆರಂಭಿಸಿದಲ್ಲಿ ಒಂದು ಕೈಗಾರಿಕಾ ವಲಯ (Indistrial Estate) ಆಗಿ ಬೆಳೆಯಲು ಸಾಧ್ಯವಿದೆ. ಇದೇ ರೀತಿ ಕಾಯರ್‌ಕಟ್ಟೆ, ಬಾಯಾರು, ಸುಬ್ಬಯಕಟ್ಟೆ, ಪೆರ್ಮುದೆ, ಚೇವಾರುಗಳಲ್ಲೂ ಉದ್ಯಮಗಳನ್ನು ಆರಂಭಿಸಲು ಮುಕ್ತವಾದ ಸ್ಥಳಗಳಿವೆ.

2. ಹೆಚ್ಚಿನ ಜನರು ನಿರುದ್ಯೋಗಿಗಳಾಗಿದ್ದಾರೆ. ಸರಿಯಾದ ತರಬೇತಿಯನ್ನು ನೀಡಿದರೆ ಕಾರ್ಮಿಕರು ಬೇಕಾದ ಸಂಖ್ಯೆಯಲ್ಲಿ ದೊರೆಯಬಹುದು.

3. ಹೊಸತಾದಿ ಉದ್ಯಮವನ್ನು ಆರಂಭಿಸುವವರಿಗೆ ಸಾಲ ರೂಪದಲ್ಲಿ ಧನಸಹಾಯ ಮಾಡುವ ಆರ್ಥಿಕ ವ್ಯವಸ್ಥೆ ಇದೆ.

ಈ ಪ್ರದೇಶದಲ್ಲಿರುವ ಪ್ರಮುಖ ರಾಷ್ಟ್ರೀಕೃತ ಬೇಂಕುಗಳಲ್ಲಿ ಒಂದಾದ ಸಿಂಡಿಕೇಟ್ ಬೇಂಕ್, ಪೈವಳಿಕೆ ಶಾಖೆಯಿಂದ ಒದಗಿಸಿದ ಸಾಲದ ವಿವರ

Sl.No.	Sector	Nos.	Amount as on 15-11-96
1.	S.S.I.	2	ರೂ. 30953.00
2.	Retail Trade	49	3,98,297.00
3.	Small Business	26	1,42,992.00
4.	Self Employment	29	1,37,598.00

ಅನುಭವಕ್ಕೆ ಬಂದ ಸಮಸ್ಯೆಗಳು

ಆರ್ಥಿಕ ಪ್ರಕ್ರಿಯೆಯ ಅವಿಭಾಜ್ಯ ಘಟಕಗಳಾದ ಪ್ರಕೃತಿ ಸಂಪನ್ಮೂಲಗಳು ಇಲ್ಲಿ ನಿಷ್ಕ್ರಿಯಾವಸ್ಥೆಯಲ್ಲಿ ಇರುವುದನ್ನು ಕಾಣುತ್ತೇವೆ. ಕೈಗಾರಿಕೆಯ ಬೆಳವಣಿಗೆಗೆ ಅಗತ್ಯವಾಗಿರುವ ಮೂಲಘಟಕಗಳಾಗಿರುವ, ಭೂಮಿ ಮೂಲಧನ, ಮಜೂರರು ಮತ್ತು ವ್ಯವಸ್ಥೆಗೆ ಬೇಕಾದ ಸವಲತ್ತುಗಳೆಲ್ಲಾ ನಮ್ಮಲ್ಲಿ ಇದ್ದರೂ, ಅವುಗಳ ಉಪಯೋಗ ಏನೂ ಸರಿಯಾಗಿಲ್ಲ. ಹೆಚ್ಚಿನ ಜನರಿಗೆ ಉದ್ಯೋಗ ಅವಕಾಶವನ್ನು ಒದಗಿಸಬಲ್ಲ ಘನ ಕೈಗಾರಿಕೆಗಳ್ಯಾವುವೂ ನಮ್ಮ ಪಂಚಾಯತು ಕ್ಷೇತ್ರದಲ್ಲಿಲ್ಲ. ಪರಂಪರಾಗತವಾಗಿರುವ ಕೆಲವು ಗುಡಿ ಕೈಗಾರಿಕೆಗಳು ಕುಂಠಿತಾವಸ್ಥೆಯಲ್ಲಿವೆ.

ಮರದ ಕೆಲಸ, ಕಬ್ಬಿಣದ ಉಪಕರಣಗಳ ತಯಾರಿ ಮಡಿಕೆ ತಯಾರಿಸುವುದು. ಚಾಪೆ ಹೆಣೆಯುವುದು, ಬುಟ್ಟಿ ಹೆಣೆಯುವುದು, ಚಿನ್ನದ ಆಭರಣಗಳ ತಯಾರಿ ಮೊದಲಾದ ಕೆಲಸಗಳು ಸರಿಯಾದ ವ್ಯವಸ್ಥೆಯಲ್ಲಿಲ್ಲದೆ ನಡೆಯುವುದನ್ನು ಕಾಣುತ್ತೇವೆ. ಹಾಗಾಗಿ ಹೆಚ್ಚಿನವು ಲಾಭದಾಯಕವಾಗಿಲ್ಲ. ಇತ್ತೀಚೆಗೆ ಪ್ರಾರಂಭಿಸಿದ ಕೆಲವು ಕಿರು ಕೈಗಾರಿಕೆಗಳು ಬಹಳ ನಿಧಾನಗತಿಯಲ್ಲಿದ್ದು ಚಡಪಡಿಸುತ್ತಿರುವುದನ್ನು ಕಾಣುತ್ತೇವೆ.

ಇದಕ್ಕಿರುವ ಪ್ರಧಾನ ಕಾರಣಗಳು

1. ಹೊಸ ತರದ ಉದ್ಯಮಗಳನ್ನು ಲಾಭದಾಯಕವಾಗಿ ನಡೆಸಲು ಬೇಕಾದ ತರಬೇತಿ ಇಲ್ಲದಿರುವುದು.

2. ಸಾಕಷ್ಟು ಪ್ರಮಾಣದಲ್ಲಿ ಸಾಲ ಸೌಲಭ್ಯವಾಗಲೀ ಧನಸಹಾಯವಾಗಲೀ ಇಲ್ಲದಿರುವುದು. ಅದಕ್ಕೆ ಬೇಕಾದ ಮಾಹಿತಿಯ ಕೊರತೆಯೂ ಇದೆ.

3. ನುರಿತ ಮಜೂರರ ಕೊರತೆ ಪ್ರಾರಂಭ ಘಟ್ಟದಲ್ಲಿರುವ ಉದ್ಯಮಗಳಿಗೆ, ಮಜೂರರನ್ನು ತೃಪ್ತಿ ಪಡಿಸುವಷ್ಟು ಸಂಬಳ ಕೊಡಲು ಸಾಧ್ಯವಾಗದಿರುವುದು.

ಈ ಕಾರಣದಿಂದಾಗಿಯೇ ಇಲ್ಲಿಯ ನಿರುದ್ಯೋಗಿ ಯುವಕರು ಕೆಲಸವನ್ನು ಅರಸಿಕೊಂಡು ಹೊರಗೆ ಹೋಗುವ ಪ್ರವೃತ್ತಿ ಬೆಳೆಯುತ್ತಾ ಇದೆ.

4. ಹೊಸ ಹೊಸ ಉದ್ಯಮಗಳನ್ನು ಆರಂಭಿಸಲು ಸಾಮರ್ಥ್ಯ ಇರುವವರು ಮುಂದೆ ಬರದೆ ಇರುವುದು. ಇತರ ಪೇಟೆ ಪಟ್ಟಣಗಳಿಗೆ ವ್ಯಾಪಾರ ಮತ್ತು ಉದ್ಯೋಗವನ್ನು ಅರಸುತ್ತಾ ಅಂತಹವರು ದೂರದೂರಿಗೆ ಹೋಗುವರು.

5. ಸಣ್ಣ ಪ್ರಮಾಣದಲ್ಲಿ ತಯಾರಾಗುವ ವಸ್ತುಗಳಿಗೆ ಯೋಗ್ಯವಾದ ಮಾರುಕಟ್ಟೆ ದೊರೆತೀತೆಂಬ ಭರವಸೆ ಇಲ್ಲದಿರುವುದು.

6. ಕೈಗಾರಿಕೆಗೆ ಬೇಕಾದ ಕಚ್ಚಾವಸ್ತುಗಳು ಇಲ್ಲೇ ಸಾಕಷ್ಟು ಪ್ರಮಾಣದಲ್ಲಿ ದೊರೆಯದಿರುವುದು. ಇಲ್ಲೇ ಪೂರೈಸುವ ವಸ್ತುಗಳಿಗಾಗಿ ಇತರ ಕಡೆಗಳನ್ನು ಅವಲಂಬಿಸಿಕೊಂಡಿರುವುದು.

7. ಕೆಲವೊಂದು ಉದ್ಯಮಗಳಿಗೆ ಅತ್ಯಗತ್ಯವಾದ ಇಂಧನ ಶಕ್ತಿ, ನೀರು ಮೊದಲಾದ ಸೌಲಭ್ಯಗಳು ಎಲ್ಲಾ ಕಡೆಗಳಲ್ಲಿಯೂ ದೊರೆಯದಿರುವುದು.

8. ವಿದ್ಯುತ್ತಿನ ಸರಬರಾಜು ಎಲ್ಲೆಡೆ ತಲುಪದೆ ಇರುವುದು. ಹಿಂದುಳಿದ ಪ್ರದೇಶಗಳಲ್ಲಿ ಸಾಧ್ಯವಿರುವ ಹೊಸ ಉದ್ಯಮಗಳನ್ನು ಆರಂಭಿಸಲು ಇರುವ ಒಂದು ದೊಡ್ಡ ತೊಡಕಾಗಿರುತ್ತದೆ.

9. ಪಂಚಾಯತಿನ ಎಲ್ಲ ಕಡೆಗೂ ಸರಿಯಾದ ಸಂಪರ್ಕ ವ್ಯವಸ್ಥೆ ಇಲ್ಲದಿರುವುದು ಕೆಲವು ಕಡೆಗಳಲ್ಲಿ ಒಳ ಪ್ರದೇಶಗಳನ್ನು ಸೇರಲು ಮಾರ್ಗಗಳಿಲ್ಲ. ಇರುವ ರಸ್ತೆಗಳೂ ಸರಿಯಾದ ದುರಸ್ತಿಯಿಲ್ಲದೆ ಸಂಚಾರ ಯೋಗ್ಯವಾಗಿಲ್ಲ.

10. ಮಾರುಕಟ್ಟೆಯಲ್ಲಿ ಉತ್ತಮ ಬೇಡಿಕೆಯನ್ನು ದೊರಕಿಸಲು ಸಾಧ್ಯವಾಗುವಂತೆ ಉತ್ಪಾದನೆಯ ಗುಣ ಮಟ್ಟವನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಾಗದೆ ಇರುವುದು.

11. ಕೈಗಾರಿಕೆಯನ್ನು ಪ್ರೋತ್ಸಾಹಿಸುವಂತಹ ವ್ಯವಸ್ಥೆ ಇಲ್ಲದಿರುವುದು.

ಪರಿಹಾರೋಪಾಯಗಳು

1. ಜನರಲ್ಲಿ ಬೇರೆ ಬೇರೆ ಉದ್ಯಮಗಳ ಕುರಿತು ಅಭಿರುಚಿ ಮೂಡಿಸುವಂತಾಗಬೇಕು. ಅಲ್ಪಸ್ವಲ್ಪ ವಿದ್ಯಾಭ್ಯಾಸದ ನಂತರ ಬಹುಕಾಲ ಸರಕಾರಿ ಕೆಲಸಕ್ಕಾಗಿ ಕಾಯುತ್ತಿರುವ ಅನೇಕ ಜನರು ನಮ್ಮಲ್ಲಿದ್ದಾರೆ. ಶಾಲೆಗಳಲ್ಲಿ ವೃತ್ತಿಪರ ಶಿಕ್ಷಣಕ್ಕೆ ಹೆಚ್ಚು ಪ್ರಾಧಾನ್ಯವನ್ನು ಕೊಟ್ಟಲ್ಲಿ ಸುಧಾರಣೆಯನ್ನು ತರಬಹುದು. ವಿದ್ಯಾಭ್ಯಾಸದ ಅವಧಿಯಲ್ಲಿಯೇ ಬೇರೆಬೇರೆ ವೃತ್ತಿಗೆ ಸಂಬಂಧಪಟ್ಟ ತರಬೇತಿಯನ್ನು ಕೊಡುವ ವ್ಯವಸ್ಥೆ ಇರಬೇಕು. ಊರಿನಲ್ಲಿರುವ ನುರಿತ ಕೆಲಸಗಾರರ, ಕುಶಲಕರ್ಮಿಗಳ ಸಹಾಯವನ್ನು ಪಡೆದುಕೊಂಡರೆ ಇದು ಇನ್ನಷ್ಟು ಅರ್ಥಪೂರ್ಣವಾಗಬಹುದು.

ಬೇರೆ ಬೇರೆ ವೃತ್ತಿಗಳಿಗೆ ಸಂಬಂಧಪಟ್ಟ ತರಬೇತಿ ಕೇಂದ್ರಗಳನ್ನು ಪ್ರತಿವಾರ್ಡಿನಲ್ಲಿಯೂ ತೆರೆಯುವುದು ಬಹಳ ಮುಖ್ಯವಾಗಿರುತ್ತದೆ. ಹೊಸ ಉದ್ಯಮಗಳ ಕುರಿತು ಸರಿಯಾದ ತಿಳುವಳಿಕೆ ಇಲ್ಲದಿದ್ದರೆ ಕೈಗಾರಿಕಾ ರಂಗದಲ್ಲಿ ಅಭಿವೃದ್ಧಿಯನ್ನು ಕಾಣಲು ಸಾಧ್ಯವೇ ಇಲ್ಲ. ಆಧುನಿಕ ರೀತಿಯಲ್ಲಿ ಉತ್ಪಾದನಾ ವೃದ್ಧಿಗೆ ಸಾಧ್ಯವೇ ಇಲ್ಲ. ಆಧುನಿಕ ರೀತಿಯಲ್ಲಿ ಉತ್ಪಾದನಾ ವೃದ್ಧಿಗೆ ಯಂತ್ರಗಳ ಬಳಕೆಯೂ ಅದಕ್ಕೆ ಬೇಕಾದ ತರಬೇತಿ ಅತ್ಯಗತ್ಯ. ಹಾಗಾಗಿ ಶಾಲೆಗಳಲ್ಲಿ ವೃತ್ತಿ ಪರ ಶಿಕ್ಷಣವೂ, ಆ ಮೇಲೆ ತರಬೇತಿ ಕೇಂದ್ರಗಳ ಏರ್ಪಾಡೂ ಅತ್ಯಗತ್ಯ.

3. ಹೊಸ ಹೊಸ ಉದ್ಯಮಗಳನ್ನು ಆರಂಭಿಸಲು, ಜನರು ಮುಂದೆ ಬರುವಂತೆ ಮಾಡಲು ಅವರಿಗೆ ಎಲ್ಲಾ ರೀತಿಯ ಪ್ರೋತ್ಸಾಹ ಮತ್ತು ಮಾಹಿತಿ ಕೊಡಲು ತಜ್ಞರಿಂದ ಕೂಡಿದ ಒಂದು ಕೈಗಾರಿಕಾ ಸಮಿತಿಯನ್ನು ಪಂಚಾಯತು ಮಟ್ಟದಲ್ಲಿ ಸ್ಥಾಪಿಸಬೇಕು. ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಿ ಕೊಂಡಿರುವ ಉತ್ಸಾಹೀ ಉದ್ಯಮಶೀಲ ಜನರನ್ನು ಈ ಸಮಿತಿಯಲ್ಲಿ ಸೇರಿಸಬೇಕು.

4. ಸಿದ್ಧ ವಸ್ತುಗಳ ನಿರ್ಮಾಣಕ್ಕೆ ಬೇಕಾದ ಕಚ್ಚಾ ವಸ್ತುಗಳು ನಮ್ಮಲ್ಲೇ ಲಭ್ಯವಾಗುವಂತೆ ಮಾಡಬೇಕು. ಪ್ರಕೃತಿ ಸಂಪನ್ಮೂಲಗಳ ಸದುಪಯೋಗಕ್ಕೆ ಹೆಚ್ಚಿನ ಗಮನ ಕೊಡಬೇಕು.

5. ತಯಾರಾದ ಸಿದ್ಧವಸ್ತುಗಳಿಗೆ ಯೋಗ್ಯವಾದ ಮಾರುಕಟ್ಟೆಯನ್ನು ಕಂಡು ಹಿಡಿಯಬೇಕು. ಸಹಕಾರಿ ಸಂಘಗಳ ಮೂಲಕ ಈ ಕೆಲಸವನ್ನು ಹೆಚ್ಚು ಪರಿಣಾಮಕಾರಿಯಾಗಿ ಮಾಡಬಹುದು. ಬೇರೆ ಬೆರೆ ಕೆಲಸದವರಿಗೆ ಸಂಬಂಧಪಟ್ಟ ಬೇರೆ ಬೇರೆ ಸಹಕಾರಿ ಸಂಘಗಳನ್ನು ಸ್ಥಾಪಿಸಿದರೆ ಹೆಚ್ಚು ಪ್ರಯೋಜನಕಾರಿಯಾಗಬಹುದು. ಪಂಚಾಯತಿನ ಕೇಂದ್ರದಲ್ಲೇ ಒಂದು ಪ್ರದರ್ಶನ ಮಳಿಗೆ (Show-room) ತೆರೆಯುವ ಏರ್ಪಾಡು ಮಾಡಿದರೆ ನಮ್ಮ ಕೈಗಾರಿಕಾ ಬೆಳವಣಿಗೆಗೆ ಅದು ಹೆಚ್ಚು ಉಪಯುಕ್ತವಾಗಬಹುದು.

6. ಉದ್ಯಮಗಳನ್ನಾರಂಭಿಸಲು ಅಗತ್ಯವಾದ ಸಾಲ ಸೌಲಭ್ಯ ಮತ್ತು ಧನ ಸಹಾಯದ ವ್ಯವಸ್ಥೆಯನ್ನು ಹೆಚ್ಚಿಸಬೇಕು. ಇವು ದೊರೆಯುವ ಮೂಲಗಳ ಮಾಹಿತಿಯನ್ನು ಒದಗಿಸಬೇಕು.

7. ಸ್ವಯಂ ಉದ್ಯೋಗದ ಅವಕಾಶಗಳನ್ನು ಕಂಡುಹಿಡಿಯಲು 'Vocvational Guidance corner' ಗಳನ್ನು 'Employment Exchange'ಗಳನ್ನೂ ಪಂಚಾಯತಿನಲ್ಲಿ ಸ್ಥಾಪಿಸಬೇಕು. ಹೆಚ್ಚಿನ ಮಾಹಿತಿಗಳನ್ನು ಪಡೆಯಲು ಕಾಸರಗೋಡು ಜಿಲ್ಲಾ ಕೈಗಾರಿಕಾ ಕೇಂದ್ರದ ಸಹಾಯವನ್ನು ಪಡೆಯಬೇಕು.

8. ಸೆಮಿನಾರ್‌ಗಳನ್ನೂ, ವಸ್ತು ಪ್ರದರ್ಶನಗಳನ್ನೂ ಏರ್ಪಡಿಸಿ ಕೈಗಾರಿಕೆಯ ಅಭಿವೃದ್ಧಿಗೆ ಬೇಕಾದ ವಾತಾವರಣವನ್ನು ಕಲ್ಪಿಸಬೇಕು.

9. ಉದ್ಯಮಗಳು ಲಾಭದಾಯಕವಾಗುವಂತೆ ಮಾಡಲು 'Out-Worker' ಉತ್ಪಾದನಾ ಸಂಪ್ರದಾಯವನ್ನು ಬಳಕೆಗೆ ತರಬಹುದು. ಪ್ರಕೃತ ಬೀಡಿ ತಯಾರಿಯಲ್ಲಿ ಈ ವ್ಯವಸ್ಥೆ ಕಂಡು ಬರುತ್ತದೆ.

10. ಒಂದು ಕಂಪ್ಯೂಟರೀಕೃತ ಮಾಹಿತಿ ಕೇಂದ್ರವನ್ನು ತೆರೆದಲ್ಲಿ ಸ್ವಯಂ ಉದ್ಯೋಗಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಸುಲಭದಲ್ಲಿ ಒದಗಿಸಬಹುದಾಗಿದೆ. ಬೇರೆ ಬೇರೆ ಅಭಿರುಚಿ ಇರುವವರ ಮತ್ತು ಪರಿಣತರ ವಿವರಗಳನ್ನು ಪಡೆಯಲು ಇದು ಸುಲಭ ಸಾಧ್ಯವಾಗಿರುತ್ತದೆ.

ಸಾಧ್ಯತೆಗಳು

1. ಸಜಂಕಿಲ, ಕನಿಯಾಲ ಮೊದಲಾದ ಕಡೆಗಳಲ್ಲಿ ಉತ್ತಮತರದ ಆಸೆಮಣ್ಣು ದೊರೆಯುತ್ತದೆ. ಮಡಿಕೆ ಇಟ್ಟಿಗೆ ಮೊದಲಾದುವುಗಳ ತಯಾರಿಯನ್ನು ದೊಡ್ಡ ಪ್ರಮಾಣದಲ್ಲಿ ಮಾಡಬಹುದಾಗಿದೆ. ಹಂಚಿನ ಕಾರ್ಖಾನೆಗಳನ್ನೂ ತೆರೆಯುವ ಪ್ರಯತ್ನ ಇಲ್ಲಿ ಸಾಧ್ಯ.

2. ಜೋಡುಕಲ್ಲು ಮತ್ತು ಸಜಂಕಿಲದಲ್ಲಿ ಹುಲ್ಲಿನಿಂದ ಚಾಪೆ ತಯಾರಿಸುವವರಿದ್ದಾರೆ. ಇವರಿಗೆ ಬೇಕಾದ ಕಚ್ಚಾವಸ್ತುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಒದಗಿಸಿದರೆ ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಬಹುದು.

3. ಬಡಗಿ, ಕಮ್ಮಾರ, ಅಕ್ಕಸಾಲಿಗ, ಚಮ್ಮಾರ ಮೊದಲಾದ ಕುಶಲಕರ್ಮಿಗಳು ಅಲ್ಲಲ್ಲಿ ಇದ್ದಾರೆ. ಇವರಿಗೆ ಸಾಲ ಸೌಲಭ್ಯಗಳನ್ನೂ ಇತರ ಸೌಕರ್ಯಗಳನ್ನೂ ಒದಗಿಸಿದಲ್ಲಿ ಇನ್ನಷ್ಟು ಜನರು ಈ ವೃತ್ತಿಯನ್ನು ಅವಲಂಬಿಸಿ ಅಭಿವೃದ್ಧಿ ಹೊಂದಬಹುದು. ಇವರದ್ದೇ ಆದ ಸಹಕಾರಿ ಸಂಘಗಳ ಮೂಲಕ ಪ್ರೋತ್ಸಾಹಿಸಬಹುದು.

4. ಪೊಸಡಿ ಗುಂಪೆಯ ಕೆಲವು ಭಾಗಗಳಲ್ಲಿ ಪಿಂಗಾಣಿಪಾತ್ರೆ ತಯಾರಿಸಲು ಯೋಗ್ಯವಾದ ಜೇಡಿಮಣ್ಣು ದೊರೆಯಬಹುದು ಎಂಬ ಪ್ರತೀತಿ ಇದೆ. ಇದರ ಕುರಿತು ಪರಿಶೋಧನೆ ಹಾಗೂ ಸಂಶೋಧನಾತ್ಮಕ ಕಾರ್ಯಗಳನ್ನು ನಡೆಯಿಸಿ ಹೊಸ ಉದ್ಯಮವನ್ನು ಆರಂಭಿಸಬಹುದಾಗಿದೆ.

5. ಪಂಚಾಯತಿನ ಹೆಚ್ಚಿನ ಜನರಿಗೆ ಅದರಲ್ಲೂ ಮಹಿಳೆಯರಿಗೆ ಬೀಡಿ ಕಟ್ಟುವುದು, ಒಂದು ಜೀವನ ಮಾರ್ಗವಾಗಿರುತ್ತದೆ. ಒಂದೇ ಕಡೆಯಲ್ಲಿ ಕೆಲಸ ಮಾಡಲು ಸಾಧ್ಯವಾಗುವಂತೆ "Work-Shop"ಗಳನ್ನೂ ಇತರ ಸೌಕರ್ಯಗಳನ್ನೂ ಹೆಚ್ಚಿಸಿದರೆ ಇನ್ನಷ್ಟು ಮಂದಿಗೆ, ಉದ್ಯೋಗ ಅವಕಾಶವನ್ನು ಒದಗಿಸಬಹುದಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಇರುವ ಇವರ ಯೋಗಕ್ಷೇಮವನ್ನು ನೋಡಿಕೊಳ್ಳಲು ಒಂದು "Welfare Committee"ಯನ್ನೂ ರೂಪಿಸುವ ಅಗತ್ಯವಿದೆ. ಇದರಿಂದಾಗಿ ಸಂಬಳ ಮತ್ತು ಕ್ಷೇಮನಿಧಿ ಯಂತಹ ಇತರ ಸೌಲಭ್ಯಗಳು ಎಲ್ಲರಿಗೂ ನ್ಯಾಯವಾಗಿ ದೊರೆಯುವಂತೆ ನೋಡಿಕೊಳ್ಳಬಹುದು.

6. ಅಡಿಕೆ ತೋಟಗಳೇ ಧಾರಾಳವಾಗಿರುವ ಈ ಪ್ರದೇಶದಲ್ಲಿ ಅಡಿಕೆ ಮರದ ಹಾಳೆ ಮತ್ತು ಅಡಿಕೆ ಸಿಪ್ಪೆ ಅಧಿಕ ಪ್ರಮಾಣದಲ್ಲಿ ದೊರೆಯುತ್ತದೆ. ಇವುಗಳನ್ನು ಕಚ್ಚಾವಸ್ತುಗಳಾಗಿ ಉಪಯೋಗಿಸಿ ಕೆಲವು ಉಪಯುಕ್ತವಾದ ವಸ್ತುಗಳ ನಿರ್ಮಾಣಕ್ಕೆ ಸಾಧ್ಯತೆ ಇದೆ.

ಉದಾ. : ಅಡಿಕೆ ಸಿಪ್ಪೆಯನ್ನು ಪೇಪರ್ ಪಲ್ಪ್‌ಗೆ ಉಪಯೋಗಿಸಬಹುದು. ಮತ್ತು ಕಾಗದವನ್ನು ತಯಾರಿಸುವ ಉದ್ಯಮವನ್ನು ಆಯೋಜಿಸಬಹುದು. ಹಾಳೆಗಳಿಂದ ಹೇಟ್ (ಟೋಪಿ), ಊಟದ ತಟ್ಟೆ ಇತ್ಯಾದಿಗಳನ್ನು ಧಾರಾಳವಾಗಿ ತಯಾರಿಸಬಹುದು. ಇದಕ್ಕೆ ಉತ್ತಮ ಮಾರುಕಟ್ಟೆಯೂ ದೊರೆಯಬಹುದು. ಇದರ ಕುರಿತು ಆಳವಾಗಿ ಚಿಂತಿಸಿ, ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಈ ಪ್ರದೇಶದ ಆರ್ಥಿಕಾಭಿವೃದ್ಧಿಗೆ ತುಂಬಾ ಪ್ರಯೋಜನಕಾರಿಯಾಗಬಹುದು. ಇದರ ಕುರಿತು ಒಂದು ಸಂಶೋಧನಾ ಕೇಂದ್ರವನ್ನು ಪೈವಳಿಕೆಯಲ್ಲಿ ಆರಂಭಿಸಬಹುದಾಗಿದೆ.

7. ತೆಂಗಿನ ಮರಗಳು ಹೇರಳವಾಗಿ ಬೆಳೆಯುವ ಈ ಪ್ರದೇಶದಲ್ಲಿ ತೆಂಗಿನ ಎಣ್ಣೆ, ತೆಂಗಿನ ಹಿಂಡಿ, ಮತ್ತು ಹುರಿ ಹಗ್ಗ ತಯಾರಿಯ ಉದ್ಯಮವನ್ನು ಅಭಿವೃದ್ಧಿಪಡಿಸಲು ಉತ್ತಮ ಅವಕಾಶವಿದೆ. ತೆಂಗಿನ ಮಡಲಿನಿಂದ ಚಾಪೆ, ಹಿಡಿಸೂಡಿ ಇತ್ಯಾದಿಗಳನ್ನು ತಯಾರಿಸಬಹುದು. ಗೆರಟೆಯಿಂದ ಕೆಲವು ತರದ ಅಲಂಕಾರಿಕ ವಸ್ತುಗಳನ್ನು ತಯಾರಿಸಬಹುದಾಗಿದೆ. ಸೀಯಾಳದ ನೀರನ್ನು ಬಾಟ್ಲಿಯಲ್ಲಿ ತುಂಬಿಸಿ ಮಾರಾಟ ಮಾಡುವ ಉದ್ಯಮವನ್ನೂ ಲಾಭದಾಯಕವಾಗಿ ಮಾಡುವ ಕುರಿತು ಆಲೋಚಿಸಬಹುದು.

8. ಈಗ ಒಂದೆರಡು ಕಡೆಗಳಲ್ಲಿರುವ ಎಣ್ಣೆ ಮಿಲ್ಲುಗಳನ್ನು ಇನ್ನಷ್ಟು ಹೆಚ್ಚಿನ ಕೇಂದ್ರಗಳಲ್ಲಿ ಸ್ಥಾಪಿಸುವಂತೆ ಮಾಡಬಹುದಾಗಿದೆ.

9. ಸರಿಯಾದ ತರಬೇತಿಯನ್ನು ಕೊಡುವುದರ ಮೂಲಕ ವಾಹನ ರಿಪೇರಿ ಕೆಲಸ ಮಾಡುವ 'ಗೇರೇಜ್'ಗಳನ್ನು ತೆರೆದು ಯುವಕರಿಗೆ ಉದ್ಯೋಗ ಅವಕಾಶಗಳನ್ನು ಒದಗಿಸಬಹುದಾಗಿದೆ.

10. ವಿದ್ಯುತ್ತಿನ ಸರಬರಾಜು ಸರಿಯಾದಲ್ಲಿ ಕೊಮ್ಮಂಗಳ ಪ್ರದೇಶವು ಒಂದು ಇಂಡಸ್ಟ್ರಿಯಲ್ ಎಸ್ಟೇಟ್ ಸ್ಥಾಪಿಸಲು ಯೋಗ್ಯವಾದ ಸ್ಥಳವಾಗಿದೆ.

11. ಅಲ್ಲಲ್ಲಿ ದರ್ಜಿ ಕೆಲಸ ಮಾಡುವವರಿದ್ದಾರೆ. ಇವರಿಗೆ ಹೆಚ್ಚಿನ ಮಾಹಿತಿ ಮತ್ತು ತರಬೇತಿಯನ್ನು ಕೊಟ್ಟಲ್ಲಿ "Cluster Based Approach"ನ ಮೂಲಕ Readymade Garments ಉದ್ಯಮವನ್ನು ದೊಡ್ಡ ಪ್ರಮಾಣದಲ್ಲಿ ಆರಂಭಿಸಬಹುದಾಗಿದೆ.

Design Testing Desplay Marketing

Training Centres

ಸುಸಂಘಟಿತ ಪ್ರಮಾಣದಲ್ಲಿ ಈ ಉದ್ಯಮವನ್ನು ನಡೆಸಿದಲ್ಲಿ ಹೆಚ್ಚು ಜನರಿಗೆ ಉದ್ಯೋಗಾವಕಾಶವನ್ನು ಒದಗಿಸಬಹುದಾಗಿದೆ.

12. ತೋಟದ ಬೆಳೆಗಳು ಹೆಚ್ಚಾಗಿರುವ ಈ ಪ್ರದೇಶದಲ್ಲಿ "Catering" ನಡೆಸಲು ಹೆಚ್ಚಿನ ಸಾಧ್ಯತೆ ಇದೆ.

ಉದಾ. : ಬಾಳೆಕಾಯಿಯಿಂದ ಚಿಪ್ಸ್ ತಯಾರಿ

ಮಾವಿನಕಾಯಿ ಉಪ್ಪಿನಕಾಯಿ ತಯಾರಿ

ಹಲಸಿನಹಣ್ಣಿನ ಜಾಂ, ಹಪ್ಪಳ ತಯಾರಿ, ಇತ್ಯಾದಿ

ಇದಕ್ಕೆ ಬೇಕಾದ ತರಬೇತಿ ಮತ್ತು ಧನಸಹಾಯದ ವ್ಯವಸ್ಥೆ ಮಾಡಿದಲ್ಲಿ ಹೆಚ್ಚಿನ ಜನರಿಗೆ ಉದ್ಯೋಗಾವಕಾಶ ದೊರೆಯಬಹುದಾಗಿದೆ. ಮಹಿಳೆಯರೇ ಪಾಲುದಾರರಾಗಿ ಇರುವ ಸಹಕಾರಿ ಸಂಘಗಳನ್ನು ಸ್ಥಾಪಿಸುವುದರ ಮೂಲಕ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದಾಗಿದೆ.

13. ಬೇಕರಿ ವಸ್ತುಗಳನ್ನು ತಯಾರಿಸುವ ಕೇಂದ್ರಗಳನ್ನು ದೊಡ್ಡ ಪ್ರಮಾಣದಲ್ಲಿ ನಡೆಸಲು ಸಾಧ್ಯವಿದೆ. ಸೆಖೆಗಾಲದಲ್ಲಿ 'Cold drinks' ತಯಾರಿಸುವ ಇನ್ನಷ್ಟು ಉದ್ಯಮವನ್ನೂ ಲಾಭದಾಯಕವಾಗಿ ನಡೆಸಲು ಸಾಧ್ಯವಿದೆ. ಇದಕ್ಕೆ ಬೇಕಾದ ತಾಂತ್ರಿಕ ಜ್ಞಾನವನ್ನೂ ತರಬೇತಿಯನ್ನೂ ಕೊಡುವ ವ್ಯವಸ್ಥೆ ಇರಬೇಕು.

14. ಪಂಚಾಯತಿನ ಪ್ರಧಾನ ಕೇಂದ್ರದಲ್ಲಿ ವರ್ಷದಲ್ಲಿ ಎರಡು ಬಾರಿ ಜೇನು ವ್ಯವಸಾಯದ ಗುಡಿ ಕೈಗಾರಿಕೆ ಬಗ್ಗೆ ಅಭ್ಯಾಸ ವರ್ಗ (ಟ್ರೈನಿಂಗ್) ಏರ್ಪಡಿಸಿ ನುರಿತ ಜೇನು ವ್ಯವಸಾಯಗಾರರಿಂದ, ತರಬೇತಿ ಹೊಂದಿದ ವ್ಯಕ್ತಿಗಳಿಂದ ಶಿಬಿರಗಳನ್ನು ಏರ್ಪಡಿಸಿ ಜೇನು ವ್ಯವಸಾಯಕ್ಕೆ ಪ್ರೋತ್ಸಾಹ ಕೊಡುವುದು. ಸರಕಾರದಿಂದ ಮತ್ತು ಖಾದಿ ಬೋರ್ಡಿನಿಂದ ಸಿಗುವ ಸಹಾಯಧನ ಮತ್ತು ಸೌಲಭ್ಯಗಳನ್ನು ಒದಗಿಸಿ ಕೊಡುವುದು.

ಕಿರುಕೈಗಾರಿಕೆಗಳನ್ನು ಪ್ರೋತ್ಸಾಹಿಸುವುದರೊಂದಿಗೆ ಈ ಪ್ರದೇಶದಲ್ಲಿ ಕೆಲವು ದೊಡ್ಡ ಪ್ರಮಾಣದ ಕೈಗಾರಿಕೆಯನ್ನು ಆರಂಭಿಸಿದಲ್ಲಿ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಜನರಿಗೆ ಉದ್ಯೋಗಾವಕಾಶವು ದೊರೆತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಬಹುದು. ಅದಕ್ಕೆ ಬೇಕಾದ ಸಾಧ್ಯತೆ ಇಲ್ಲಿ ವಿಪುಲವಾಗಿದೆ.

1. ಹಂಚಿನ ಕಾರ್ಖಾನೆ - ಸಜಂಕಿಲ, ಕನಿಯಾಲ

2. ಗೃಹೋಪಕರಣಗಳ ತಯಾರಿ -ಬಾಯಿಕಟ್ಟೆ, ಈ ಪ್ರದೇಶವನ್ನು Industrial Estate ಆಗಿ ಪರಿವರ್ತಿಸಬಹುದು.

3. ಕಬ್ಬಿಣದ ಯಂತ್ರೋಪಕರಣಗಳು -ಕೊಮ್ಮಂಗಳ ಪ್ರದೇಶವು ಇದಕ್ಕೆ ಸೂಕ್ತವಾಗಿದೆ. ಇಲ್ಲಿಗೆ ವಿದ್ಯುತ್ತಿನ ಸರಬರಾಜಿನ ಅಗತ್ಯವಿದೆ.

4. ಕಾಗದ ತಯಾರಿ - "ಬಾಯಾರು" ಅಡಿಕೆ ಸಿಪ್ಪೆಯನ್ನು ಕಚ್ಚಾ ವಸ್ತುವನ್ನಾಗಿ ಉಪಯೋಗಿಸಬಹುದು.

5. ಗೇರುಬೀಜ ಕಾರ್ಖಾನೆ - ಇದರಿಂದ ಇಲ್ಲಿಯ ಜನರಿಗೆ ಒಳ್ಳೆಯ ಉದ್ಯೋಗಾವಕಾಶ ದೊರೆಯಬಹುದು.

6. ಅಡಿಕೆ ಉತ್ಪನ್ನಗಳ ತಯಾರಿ : ಬಾಯಾರು ಪದವನ್ನು ಕೇಂದ್ರವಾಗಿರಿಸಿಕೊಂಡು ಅಡಿಕೆ ಸಂಸ್ಕರಣೆ ಮಾಡಬಹುದು.

7. ಬಟ್ಟೆ ತಯಾರಿ : ಸಹಕಾರಿ ಸಂಘಗಳ ಮೂಲಕ ಈ ಉದ್ಯಮವನ್ನು ಪ್ರೋತ್ಸಾಹಿಸುವ ಅಗತ್ಯವಿದೆ. ಖಾದಿ ಬೋರ್ಡಿನಿಂದ ಇದಕ್ಕೆ ಅಗತ್ಯವಾದ ಸಹಾಯವನ್ನು ಪಡೆಯಬಹುದಾಗಿದೆ.

ವಿದ್ಯಾಭ್ಯಾಸ

ಕಲಿಕೆ ಮನುಷ್ಯ ಜೀವನದ ಅವಿಭಾಜ್ಯ ಅಂಗ. ಉತ್ತಮ ವಿದ್ಯಾಭ್ಯಾಸ ಉತ್ತಮ ವ್ಯಕ್ತಿಯನ್ನು ರೂಪಿಸುವಲ್ಲಿ ಮುಖ್ಯಪಾತ್ರ ವಹಿಸುತ್ತದೆ. ಒಂದು ಪ್ರದೇಶದ ವಿದ್ಯಾಭ್ಯಾಸದ ಮಟ್ಟ ಅಲ್ಲಿನ ಸ್ಥಿತಿಗತಿಯನ್ನು ಅಭಿವೃದ್ಧಿಯನ್ನು ನಿರ್ಣಯಿಸುತ್ತದೆ. ವಿದ್ಯಾಭ್ಯಾಸ ರಂಗದ ಅಭಿವೃದ್ಧಿಯಿಂದ ಸಮಗ್ರ ಅಭಿವೃದ್ಧಿ ಸಾಧ್ಯ.

ನಮ್ಮ ಪಂಚಾಯತಿನ ವಿದ್ಯಾಭ್ಯಾಸದ ಬೆಳವಣಿಗೆ ಬಹಳ ನಿಧಾನಗತಿಯಲ್ಲಿದೆ. ನಮ್ಮ ಪಂಚಾಯತಿನಿಂದಜಿಲ್ಲಾ ಮಟ್ಟದ ಮತ್ತು ರಾಜ್ಯ ಮಟ್ಟದ ಗಮನಾರ್ಹ ಸಾಧನೆಗಳಾದುದು ಕಡಿಮೆಯೆನ್ನಬಹುದು. ಈ ಪ್ರದೇಶದ ವಿದ್ಯಾಭ್ಯಾಸದ ಸಾಧನೆಯು ಇಬ್ಬರು I.P.S. ಗ್ರೇಡಿನ ಅಧಿಕಾರಿಗಳನ್ನು ಮಾತ್ರ ನೀಡಲು ಸಾಧ್ಯವಾಗಿದೆ. ಬೆರಳೆಣಿಕೆಯ ವೈದ್ಯರು, ಇಂಜಿನಿಯರುಗಳು ಮತ್ತು ಪ್ರೊಫೆಸರರು ಈ ಪಂಚಾಯತಿನಲ್ಲಿ ಪ್ರಾಥಮಿಕ ಹಂತದ ವಿದ್ಯಾಭ್ಯಾಸವನ್ನು ಪಡೆದು ಬೇರೆ ಬೇರೆ ಕಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. 1984 ರಲ್ಲಿ ಸರಕಾರಿ ಪ್ರೌಢಶಾಲೆ ಪೈವಳಿಕೆ.ಯ ವಿದ್ಯಾರ್ಥಿನಿ ಸುಧಾ ಕೆ. ಎಸ್. ಎಸ್. ಎಲ್.ಸಿ. ಪರೀಕ್ಷೆಯಲ್ಲಿ 10ನೇ ರ್‍ಯಾಂಕ್ ಪಡೆದುದನ್ನು ಬಿಟ್ಟರೆ 10ರ ಒಳಗಿನ ರ್‍ಯಾಂಕುಗಳನ್ನು ನಮ್ಮ ಪಂಚಾಯತಿನಲ್ಲಿ ಇತ್ತೀಚೆಗೆ ಪಡೆದವರು ಬಹು ವಿರಳವಾಗಿರುವರು. ಗುಣಾತ್ಮಕವಾಗಿ ಸಾಹಿತ್ಯ ರಂಗದಲ್ಲೂ ಕೆಲವು ಸಾಧನೆಗಳನ್ನು ಬಿಟ್ಟರೆ ವಿಶೇಷ ಕೊಡುಗೆಯನ್ನು ನೀಡಲು ಸಾಧ್ಯವಾಗಿಲ್ಲ.

ನಮ್ಮ ಪಂಚಾಯತಿನಲ್ಲಿ ಆಧುನಿಕ ವಿದ್ಯಾಲಯಗಳು ಈ ಶತಮಾನದ ಒಂದು ಮತ್ತು ಎರಡನೇ ದಶಕಗಳಲ್ಲೇ ಆರಂಭವಾಗಿದ್ದರೂ ಅವುಗಳ ಬೆಳವಣಿಗೆ ಬಹಳ ನಿಧಾನಗತಿಯಲ್ಲಿದೆ. ಆದರೆ ಪ್ರಾರಂಭದಲ್ಲೇ ಈ ವಿದ್ಯಾಲಯಗಳುಯಾವುದೇ ಜಾತಿ ಮತ ಬೇಧವಿಲ್ಲದೆ ಎಲ್ಲರಿಗೂ ಸಾರ್ವಜನಿಕ ವಿದ್ಯಾಭ್ಯಾಸಗಳನ್ನು ನೀಡುತ್ತಿದ್ದುವು. ಪ್ರಸ್ತುತ ಪಂಚಾಯತು ಕರ್ನಾಟಕದ ಗಡಿಗೆ ತಾಗಿರುವ ಗ್ರಾಮಪಂಚಾಯತು ಆಗಿರುವುದರಿಂದಲೂ ಇಲ್ಲಿಯ ಜನರು ಕನ್ನಡ ಭಾಷೆ ಮತ್ತು ಸಂಸ್ಕೃತಿಯನ್ನು ತಮ್ಮದೆಂದು ಸ್ವೀಕರಿಸಿರುವುದರಿಂದಲೂ ಈ ಪಂಚಾಯತಿನ ಹೆಚ್ಚಿನ ಶಾಲೆಗಳೂ ಕನ್ನಡ ಮಾಧ್ಯಮದ ಶಾಲೆಗಳಾಗಿವೆ.

ಪ್ರಕೃತ ಈ ಪಂಚಾಯತಿನಲ್ಲಿ ಒಂದರಿಂದ ನಾಲ್ಕನೇ ತರಗತಿಗಳ ವರೆಗಿನ ವಿದ್ಯಾಭ್ಯಾಸ ನೀಡುವ ಏಳು ಕಿರಿಯ ಪ್ರಾಥಮಿಕ ಶಾಲೆಗಳಿವೆ. (ಎಲ್ಲವೂ ಕನ್ನಡ ಮಾಧ್ಯಮ) ಒಂದರಿಂದ ಐದನೇ ತರಗತಿಯ ವರೆಗಿರುವ 2ಕಿರಿಯ ಪ್ರಾಥಮಿಕ ಶಾಲೆಗಳಿವೆ. ಒಂದರಿಂದ ಏಳನೆಯ ತರಗತಿಯವರೆಗಿನ 6 ಕನ್ನಡ ಮಾಧ್ಯಮದ ಹಿರಿಯ ಪ್ರಾಥಮಿಕ ಶಾಲೆಗಳಿವೆ. 72.5 ಚದರ ಕಿ.ಮೀ. ವಿಸ್ತಾರವಿರುವ ಈ ಪಂಚಾಯತಿನಲ್ಲಿ ಇರುವ ಮೂರು ಪ್ರೌಢಶಾಲೆಗಳೂ ಪಂಚಾಯತಿನ ಒಂದೇ ಭಾಗದಲ್ಲಿವೆ. ಪಂಚಾಯತಿನ IIIನೇ ವಾರ್ಡಿನ ಕುರುಡಪದವಿನಲ್ಲಿ ಇರುವ K.V.S.M. ಹೈಸ್ಕೂಲು ಇತ್ತೀಚೆಗೆ ಸ್ಥಾಪನೆಯಾದ ಖಾಸಗೀ ಶಾಲೆಯಾಗಿದೆ. ಈ ಶಾಲೆಯಲ್ಲಿ ಹೈಸ್ಕೂಲು ತರಗತಿಗಳು ಕನ್ನಡ ಮಾಧ್ಯಮದಲ್ಲಿದೆ. ಇಲ್ಲಿಂದ ಸುಮಾರು 7ಕಿ.ಮೀ. ದೂರದಲ್ಲಿ ಸರಕಾರಿ ಪ್ರೌಢ ಶಾಲೆ ಪೈವಳಿಕೆ ಇದೆ. ಇದರಲ್ಲಿ 5ನೇ ತರಗತಿಯಿಂದ 10ನೇ ತರಗತಿಯ ತನಕ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಈ ಪ್ರೌಢಶಾಲೆಯು ಪಂಚಾಯತಿನಲ್ಲಿ ಸ್ಥಾಪಿಸಲ್ಪಟ್ಟ ಮೊದಲ ಪ್ರೌಢ ಶಾಲೆಯಾಗಿದೆ. (ಸ್ಥಾಪನೆ 1957) ಸರಕಾರಿ ಹೈಸ್ಕೂಲು ಪೈವಳಿಕೆ ನಗರವು ಸರಕಾರಿ ಪ್ರೌಢಶಾಲೆ, ಪೈವಳಿಕೆ ಇಲ್ಲಿಂದ ಸುಮಾರು $1\frac{1}{2}$ ಕಿ.ಮೀ. ದೂರದಲ್ಲಿದೆ. ಪೈವಳಿಕೆ ನಗರ ಹೈಸ್ಕೂಲಿನಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿ ತನಕ ಕನ್ನಡ ಮತ್ತು ಮಲಯಾಳ ಮಾಧ್ಯಮದಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಇಲ್ಲೂ ಪ್ರಧಾನ ಮಾಧ್ಯಮವು ಕನ್ನಡವಾಗಿರುತ್ತದೆ. ಈ ಪಂಚಾಯತಿನ ಕಾಡೂರು ಎಂಬಲ್ಲಿ ಸ್ಥಾಪಿಸಲ್ಪಟ್ಟಿದ್ದ ಸರಕಾರಿ ಕಿರಿಯ ಪ್ರಾಥಮಿಕ ಶಾಲೆಯು, ಸರಕಾರಕ್ಕೆ ಆರ್ಥಿಕವಾಗಿ ನಷ್ಟದಾಯಕವೆಂದು ಮುಚ್ಚಲಾಗಿರುತ್ತದೆ. ನಮ್ಮ ಪಂಚಾಯತಿನ ಔಪಚಾರಿಕ ಶಿಕ್ಷಣ ಸಂಸ್ಥೆಗಳು ಇವುಗಳಾದರೆ ಅನೌಪಚಾರಿಕ ಶಿಕ್ಷಣ ಸಂಸ್ಥೆಗಳು ತೀರಾ ಇಲ್ಲವೆಂದು ಹೇಳಬಹುದು. ಅನೌಪಚಾರಿಕ ಶಿಕ್ಷಣ ಕ್ಷೇತ್ರದಲ್ಲಿ ಹೆದ್ದಾರಿ ಮಿತ್ರ ಮಂಡಳಿ ಅಟ್ಟೆಗೋಳಿ ಯುವಕ ಸಂಸ್ಥೆಯು ಸಂಘ ಗ್ರಂಥಾಲಯ.ವನ್ನು ನಡೆಸುತ್ತಿದೆ. ಉಳಿದಂತೆ ಚೇರಾಲು ಗ್ರಾಮೀಣ ಅಭಿವೃದ್ಧಿ ಸಂಘ, ಜ್ಯೋತಿ ಕಲಾವೃಂದ, ಚೇವಾರು ಮತ್ತು ಅಟ್ಟೆಗೋಳಿ ಯೂತ್ ಕ್ಲಬ್ ಇವುಗಳು ಆಗಾಗ ಜನರಿಗೆ ಆಧುನಿಕ ಕೃಷಿ, ತಾಂತ್ರಿಕತೆ ಆರೋಗ್ಯ ಮುಂತಾದವುಗಳ ಬಗ್ಗೆ ಮಾಹಿತಿ ನೀಡಲು ಪ್ರಯತ್ನಿಸುತ್ತವೆ.

ಪಂಚಾಯತಿನಲ್ಲಿ ಶಿಕ್ಷಣ ಸಂಸ್ಥೆಗಳ ಪ್ರಸಕ್ತ ಸ್ಥಿತಿಗತಿಯ ವಿವರಣಾ ಪಟ್ಟಿ - 1 (1996 ನವಂಬರ್)

ಕ್ರಮಸಂಖ್ಯೆ	ಶಾಲೆಗಳ ಹೆಸರು	ವಿದ್ಯಾರ್ಥಿಗಳ ಸಂಖ್ಯೆ			ಅಧ್ಯಾಪಕರು	
		ಆಡಳಿತ	ಹುಡುಗರು	ಹುಡುಗಿಯರು	ಒಟ್ಟು	ಪ್ರಸ್ತುತ ಕಾರ್ಯನಿರ್ವಹಿಸುವವರು	ಅಗತ್ಯವಿರುವ ಅಧ್ಯಾಪಕರು
1.	ವಿದ್ಯಾರಣ್ಯ ಎಲ್.ಪಿ. ಶಾಲೆ, ಬೆಳಿಪದವು	ಅನುದಾನಿತ	85	76	161	5	5
2.	ಎಎಲ್‌ಪಿ ಶಾಲೆ ಬಾಯಾರು ಪೆರುವೋಡಿ	ಅನುದಾನಿತ	76	76	152	6	6
3.	ಎ.ಎಲ್.ಪಿ.ಶಾಲೆ ಕುಳ	ಅನುದಾನಿತ	98	70	168	5	5
4.	ಶ್ರೀ ಪಂಚಲಿಂಗೇಶ್ವರ ಎ.ಎಲ್.ಪಿ. ಶಾಲೆ ಬಾಯಾರು	ಅನುದಾನಿತ	52	52	104	4	4
5.	ಶ್ರೀ ಶಾರದಾ ಎಎಲ್‌ಪಿ ಶಾಲೆ, ಕುದ್ರೆಪಾಲ	ಅನುದಾನಿತ	80	66	146	5	5
6.	ಅಟ್ಟೆಗೋಳಿ ಎ.ಎಲ್.ಪಿ. ಶಾಲೆ, ಕಯ್ಯಾರು	ಅನುದಾನಿತ	108	103	211	6	6
7	ಶ್ರೀರಾಮ ಎಎಲ್‌ಪಿ ಶಾಲೆ ಕಯ್ಯಾರು	ಅನುದಾನಿತ	75	54	129	4	4
8.	ಪರಮೇಶ್ವರಿ ಎ.ಎಲ್.ಪಿ ಶಾಲೆ ಬಾಡಾರು ಪೆರ್ಮುದೆ	ಅನುದಾನಿತ	74	79	153	5	5
9.	ಎ.ಎಲ್‌ಪಿ ಶಾಲೆ ಕುಡಾಲ್‌ಮೇರ್ಕಳ	ಅನುದಾನಿತ	53	55	108	5	5
10.	ಎಎಲ್‌ಪಿ ಶಾಲೆ ಹೆದ್ದಾರಿ	ಅನುದಾನಿತ	280	265	545	19	19
11.	ಶ್ರೀ ದುರ್ಗಾಪರಮೇಶ್ವರಿ ಎಯುಪಿ ಶಾಲೆ ಸಜಂಕಿಲ	ಅನುದಾನಿತ	138	137	275	9	9
12.	ಹಿಂದೂ ಎ.ಯು.ಪಿ. ಶಾಲೆ, ಚಿಪ್ಪಾರು	ಅನುದಾನಿತ	152	173	325	14	14
13.	ಎಯುಪಿ ಶಾಲೆ, ಕುಡಾಲಪದವು	ಅನುದಾನಿತ	263	212	475	17	17
15.	ಶ್ರೀ ಶಾರದಾ ಎ.ಯು.ಪಿ. ಶಾಲೆ ಚೆಂಬಾರು	ಅನುದಾನಿತ	196	164	360	15	15
16.	ಕುಡಾಲ ಏಕಲ ಶಾಸ್ತ್ರಿ ಸ್ಮಾರಕ ಪ್ರೌಢಶಾಲೆ ಕುಡಾಲಪದವು	ಅನುದಾನಿತ	137	105	242	12	12
17.	ಸರಕಾರಿ ಪ್ರೌಢಶಾಲೆ, ಪೈವಳಿಕೆ	ಸರಕಾರಿ	374	294	668	22	25
18.	ಸರಕಾರಿ ಪ್ರೌಢಶಾಲೆ, ಪೈವಳಿಕೆ ನಗರ	ಸರಕಾರಿ	560	504	1064	38	40
ಒಟ್ಟು			3043	2699	5742	206	211

ಪಟ್ಟಿ - 2

ಪಂಚಾಯತಿನಲ್ಲಿ 1996-1997ನೇ ಅಧ್ಯಯನ ವರ್ಷ ಕಿರಿಯ ಪ್ರಾಥಮಿಕ ಹಿರಿಯ ಪ್ರಾಥಮಿಕ ಪ್ರೌಢಶಾಲಾ ಹಂತಗಳಲ್ಲಿ ಕಲಿಯುತ್ತಿರುವ ವಿದ್ಯಾರ್ಥಿಗಳು

ವಿಭಾಗ	ವಿದ್ಯಾರ್ಥಿಗಳು	ವಿದ್ಯಾರ್ಥಿನಿಯರು	ಒಟ್ಟು
ಕಿರಿಯ ಪ್ರಾಥಮಿಕ ವಿಭಾಗ(L.P.)	1536	1403	2939
ಹಿರಿಯ ಪ್ರಾಥಮಿಕ ವಿಭಾಗ(U.P.)	989	866	1855
ಪ್ರೌಢಶಾಲೆ(H.S.)	518	430	948
ಒಟ್ಟು	3043	2699	5742

ಪಟ್ಟಿ - 3

ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಗಳ ವಿದ್ಯಾರ್ಥಿಗಳು

ಕ್ರ. ಸಂ.	ಶಾಲೆಗಳ ಹೆಸರು	ವಿದ್ಯಾರ್ಥಿಗಳು	ವಿದ್ಯಾರ್ಥಿನಿಯರು	ಒಟ್ಟು	ಶೇಕಡಾವಾರು
1.	ವಿದ್ಯಾರಣ್ಯ ಎಲ್.ಪಿ. ಶಾಲೆ, ಬೆರಿಪದವು	19	16	35	22%
2	ಎ.ಎಲ್.ಪಿ.ಶಾಲೆ, ಬಾಯಾರು ಪೆರ್ವೊಡಿ	12	21	33	21%
3.	ಎ.ಎಲ್‌ಪಿ ಶಾಲೆ ಅವಳ	31	13	44	26%
4.	ಶ್ರೀ ಪಂಚಲಿಂಗೇಶ್ವರ ಎ.ಎಲ್.ಪಿ. ಶಾಲೆ ಬಾಯಾರು	4	2	6	6%
5.	ಶ್ರೀ ಶಾರದಾ ಎ.ಎಲ್.ಪಿ. ಶಾಲೆ, ಕಿನ್ನಿಮೂಲ	21	11	32	22%
6.	ಅಬ್ಬೆಗೋಳಿ ಎ.ಎಲ್.ಪಿ. ಶಾಲೆ ಕುಮ್ಬಳೆ	14	14	28	13%
7.	ಶ್ರೀರಾಮ ಎ.ಎಲ್.ಪಿ. ಶಾಲೆ, ಕುಮ್ಬಾಡಿ	7	4	11	8%
8.	ಪರಮೇಶ್ವರಿ ಎ.ಎಲ್.ಪಿ. ಶಾಲೆ, ಬಾಡೂರು ಪರ್ಮುದೆ	10	7	17	11%
9.	ಎ.ಎಲ್.ಪಿ. ಶಾಲೆ, ಕುದಾರ್‌ಮೇರ್ಕಳ	Nil	Nil	Nil	-
10.	ಎ.ಯು.ಪಿ. ಶಾಲೆ, ಪೆಮ್ಮಾರಿ	23	27	50	9%
11.	ದುರ್ಗಾಪರಮೇಶ್ವರಿ ಎಯುಪಿ ಶಾಲೆ, ಸುಬೇಲ	39	36	75	27%
12.	ಹಿಂದೂ ಎಯುಪಿ ಶಾಲೆ, ಚಿಪ್ಪಾರು	9	3	12	4%
13.	ಎ.ಯು.ಪಿ. ಶಾಲೆ ಕುಡಪದವು	27	21	48	10%
14.	ಡಾನ್‌ಬೋಸ್ಕೋ ಎಯುಪಿ ಶಾಲೆ, ಕುಮ್ಬಾಳೆ	35	24	59	13%
15.	ಶ್ರೀ ಶಾರದಾ ಎ.ಯುಪಿ ಶಾಲೆ ಜೇಮಾರು	27	16	43	12%
16.	ಕುದಿಯ ವಿಠಲ ಶಾಸ್ತ್ರಿ ಸ್ಮಾರಕ ಪ್ರೌಢಶಾಲೆ, ಕುಡಪದವು	17	13	30	12%
17.	ಸರಕಾರಿ ಪ್ರೌಢಶಾಲೆ ಪೆರ್ವಡಿ	73	78	151	22%
18.	ಸರಕಾರಿ ಪ್ರೌಢ ಶಾಲೆ, ಪೆರ್ವಡಿ ನಗರ	39	31	70	6%
	ಒಟ್ಟು	407	331	744	

ಶಾಲೆಗಳ ಶೈಕ್ಷಣಿಕ ಸೌಲಭ್ಯಗಳು

	ಗ್ರಂಥಾಲಯ	ಪ್ರಯೋಗಶಾಲೆ	ರೇಡಿಯೋ	ಟೇಪ್ ರೆಕಾರ್ಡರ್	ಸಿನೆಮಾ ಪ್ರೊಜೆಕ್ಟರ್	ಸ್ಲೈಡ್ ಪ್ರೊಜೆಕ್ಟರ್	ಮೈಕ್
ಇರುವವುಗಳು	9	7	10	12	2	1	2
ಇಲ್ಲದವುಗಳು	9	11	8	6	16	17	16

ಕ್ರ.ಸ	ಶಾಲೆ	ಮಕ್ಕಳಸಂಖ್ಯೆ	ಅಧ್ಯಾಪಕ ಸಂಖ್ಯೆ	ವಿಸ್ತೀರ್ಣ	ಬೇಕಾದ ಕಟ್ಟಡಗಳು	ಇರುವ ಕೋಣೆಗಳು	ವಿಭಾಗಗಳು	ಮೂತ್ರದೊಡ್ಡಿ	ಶೌಚಾಲಯ	ಕುಡಿಯುವನೀರು	ವಿದ್ಯುತ್ ಸೌಲಭ್ಯ
1.	ಎ.ಎ.ಎಲ್.ಪಿ. ಶಾಲೆ, ಬೆಳಪದವು	161	5	1ಎಕ್ರೆ	4	4	4	1	1	ಬಾವಿ	ಇಲ್ಲ
2	ಎ.ಎಲ್.ಪಿ. ಶಾಲೆ, ಬಾಯಾರಪೆರುವೊಡಿ	152	6	90ಸೆಂಟ್ಸ್	5	5	5	1	ಇಲ್ಲ	ಬಾವಿ	ಇಲ್ಲ
3.	ಎ.ಎಲ್.ಪಿ. ಶಾಲೆಅನಳ	168	5	1.37ಎಕ್ರೆ	4	4	4	2	ಇಲ್ಲ	ಬಾವಿ	ಇಲ್ಲ
4.	ಎಸ್.ಪಿ.ಎ.ಎಲ್.ಪಿ. ಶಾಲೆಬಾಯಾರು	104	4	50ಸೆಂಟ್ಸ್	4	5	4	ಇಲ್ಲ	ಇಲ್ಲ	ಬಾವಿ	ಇಲ್ಲ
5	ಎಸ್.ಎಸ್.ಎ.ಎಲ್.ಪಿ. ಶಾಲೆಕೊಮ್ಮಾಲ	146	5	1ಎಕ್ರೆ	4	4	4	ಇಲ್ಲ	ಇಲ್ಲ	ಬಾವಿ	ಇಲ್ಲ
6.	ಅಚ್ಚೆಗೋಳಿ ಎ.ಎಲ್.ಪಿ. ಶಾಲೆ, ಕುಮ್ಮಾರು	129	4	1.70ಎಕ್ರೆ	4	4	4	1	ಇಲ್ಲ	ಇಲ್ಲ	ಇಲ್ಲ
7.	ಎಸ್.ಆರ್.ಎಲ್.ಪಿ.ಶಾಲೆ, ಕುಮ್ಮಾರು	129	4	1.70ಎಕ್ರೆ	4	4	4	ಇಲ್ಲ	ಇಲ್ಲ	ಇಲ್ಲ	ಇಲ್ಲ
8.	ಎ.ಎಲ್.ಪಿ. ಶಾಲೆಬಾಡೂರುಪರ್ಮುದೆ	153	5	1.05ಎಕ್ರೆ	4	4	4	ಇಲ್ಲ	ಇಲ್ಲ	ಇಲ್ಲ	ಇಲ್ಲ
9.	ಎ.ಎಲ್.ಪಿ. ಶಾಲೆವಿಠಲಮೂರ್ಕಳ	108	5	1.50ಎಕ್ರೆ	5	5	4	2	ಇಲ್ಲ	ತೂತುಬಾವಿ	ಇಲ್ಲ
10.	ಎಯುಪಿ ಶಾಲೆ, ಹೆಬ್ಬಾರಿ	535	19	2.32ಎಕ್ರೆ	17	15	15	2	2	ಬಾವಿ	ಇದೆ.
11	ಎಸ್‌ಡಿಎಯುಪಿ ಶಾಲೆಸಜಂಕಿಲ	275	9	165ಎಕ್ರೆ	10	7	7	1	ಇಲ್ಲ	ಬಾವಿ	ಇದೆ
12	ಹಿಂದೂ ಎಯುಪಿ ಶಾಲೆಚಿಪ್ಪಾರು	325	14	2ಎಕ್ರೆ	11	11	9	1	ಇಲ್ಲ	ಬಾವಿ	ಇದೆ
13.	ಎಯುಪಿಎಸ್ ಶಾಲೆ, ಕುರುಡಪದವು	475	17	2.89ಎಕ್ರೆ	10	8	13	1	1	ತೂತು ಬಾವಿ	ಇದೆ
14	ಡಾನ್‌ಬೋಸ್ಕೋ ಎಯುಪಿ ಶಾಲೆಕುಮ್ಮಾರು	456	15	2.91ಎಕ್ರೆ	16	12	13	1	1	ಬಾವಿ	ಇಲ್ಲ
15.	ಎಸ್.ಎಸ್.ಎ.ಯುಪಿ ಶಾಲೆಚೇವಾರು	360	15	1.61ಎಕ್ರೆ	10	10	10	1	1	ಬಾವಿ	ಇದೆ.
16.	ಕೆ.ಪಿ.ಎಸ್.ಯಂ. ಪ್ರೌಢಶಾಲೆಕುರುಡಪದವು	242	12	3.5ಎಕ್ರೆ	11	11	17	ಇಲ್ಲ	ಇಲ್ಲ	ಇಲ್ಲ	ಇಲ್ಲ
17.	ಸರಕಾರಿಪ್ರೌಢಶಾಲೆಪೈವಳಿಕೆ	668	22	6.73ಎಕ್ರೆ	16	16	16	1	1	ಬಾವಿ	ಇದೆ
18.	ಸರಕಾರಿಪ್ರೌಢಶಾಲೆಪೈವಳಿಕೆನಗರ	1064	38	3.2ಎಕ್ರೆ	29	13	29	5	3	ತಡುಬಾವಿ ತೂತು	ಇದೆ

ನಮ್ಮ ಹೈಸ್ಕೂಲುಗಳ ಎಸ್.ಎಸ್.ಎಲ್.ಸಿ. ಪರೀಕ್ಷಾ ಫಲಿತಾಂಶ (ಶೇಕಡಾದಲ್ಲಿ)

ಶಾಲೆ	1991-92	1992-93	1993-94	1994-95	1995-96
ಕುರಿಯ ವಿಠಸಲ ಶಾಸ್ತ್ರಿ ಪ್ರೌಢಶಾಲೆ, ಕುರುಡಪದವು	83%	93%	61%	70%	83%
ಸರಕಾರಿ ಪ್ರೌಢ ಶಾಲೆ, ಪೈವಳಿಕೆ	34%	38%	28%	32%	29%
ಸರಕಾರಿ ಪ್ರೌಢಶಾಲೆ, ಪೈವಳಿಕೆ ನಗರ	6%	25%	15%	17%	24%

ಕಲಿಕೆ ನಿಲ್ಲಿಸಿದ ಮಕ್ಕಳ ಪಟ್ಟಿ

ಶಾಲೆಗಳು	ಪ.ಜಾತಿ. ಮತ್ತು ಪ.ಪಂಗಡ		ಒಟ್ಟು	ಇತರರು		ಒಟ್ಟು	ಮೊತ್ತ
	ಹುಡುಗರು	ಹುಡುಗಿಯರು		ಹುಡುಗರು	ಹುಡುಗಿಯರು		
1.	ವಿ.ಎ.ಎಲ್.ಪಿ. ಶಾಲೆ, ಬೆರಿಪದವು	-	-	-	-	-	-	-
2.	ಎ.ಎಲ್. ಪಿ. ಶಾಲೆ, ಬಾಯಾರು ಪೆರುವೊಡಿ	-	-	-	-	-	-	-
3.	ಎ.ಎಲ್.ಪಿ. ಶಾಲೆ, ಆವಳ	-	-	-	2	0	2	2
4.	ಎಸ್.ಪಿ.ಎ.ಎಲ್.ಪಿ ಶಾಲೆ, ಬಾಯಾರು	1	0	1	0 0	1	1	2
5.	ಎಸ್.ಎಸ್.ಎ.ಎಲ್.ಪಿ. ಶಾಲೆ, ಕನಿಯಾಲ	2	0	2	0	0	0	2
6.	ಅಸೈಗೋಳಿ ಎ.ಎಲ್.ಪಿ.ಶಾಲೆ, ಕಯ್ಯಾರು	-	-	-	1	4	5	5
7.	ಎಸ್.ಆರ್.ಎ.ಎಲ್.ಪಿ. ಶಾಲೆ, ಕಯ್ಯಾರು	-	-	-	-	-	-	-
8.	ಎ.ಎಲ್.ಪಿ. ಶಾಲೆ, ಬಾಡೂರು ಪೆರ್ಮುದೆ	-	-	-	-	-	-	-
9.	ಎ.ಎಲ್.ಪಿ. ಶಾಲೆ, ಕುಡಾಲ್ ಮೇರ್ಕಳ	-	-	-	-	-	-	10.
10	ಎ.ಯು.ಪಿ. ಶಾಲೆ, ಹೆದ್ದಾರಿ	1	1	2	3	3	6	8
11.	ಎಸ್.ಡಿ.ಎ.ಯು.ಪಿ. ಶಾಲೆ, ನಜಂಕಿಲ	0	7	7	19	32	51	58
12.	ಎಚ್.ಎ.ಯು.ಪಿ. ಶಾಲೆ, ಚಿಪ್ಪಾರು	1	1	2	8	9	17	19
13.	ಎ.ಯು.ಪಿ. ಶಾಲೆ, ಕುರುಡಪದವು	1	0	1	6	6	12	13
14.	ಡಾನ್‌ಬೋಸ್ಕೊ ಎ.ಯು.ಪಿ. ಶಾಲೆ, ಕಯ್ಯಾರು	-	-	-	1	6	7	7
15	ಎಸ್.ಎಸ್.ಎ.ಯು.ಪಿ. ಶಾಲೆ, ಚೇವಾರು	-	-	-	-	-	-	-
16.	ಕೆ.ವಿ.ಎಸ್. ಎಂ.ಎಚ್. ಶಾಲೆ, ಕುರುಡಪದವು	1	-	1	6	2	8	9
17.	ಸರಕಾರಿ ಪ್ರೌಢಶಾಲೆ, ಪೈವಳಿಕೆ	-	5	5	29	30	59	64
18	ಸರಕಾರಿ ಪ್ರೌಢಶಾಲೆ, ಪೈವಳಿಕೆ ನಗರ	3	0	3	25	38	63	66

ಮೇಲಿನ ವಿವಿಧ ತಖ್ತೆಗಳಿಂದ ಈ ಪಂಚಾಯತಿನ ವಿದ್ಯಾರಂಗದ ಸ್ಥಿತಿಗತಿಗಳನ್ನು ಸ್ಥೂಲವಾಗಿ ತಿಳಿದುಕೊಳ್ಳಬಹುದು. ಈ ಅಂಕಿಸಂಖ್ಯೆಗಳ ಆಧಾರದಲ್ಲಿ ನಾವು ನಮ್ಮ ವಿದ್ಯಾರಂಗದ ಸಮಸ್ಯೆಗಳನ್ನು ವಿಶ್ಲೇಷಿಸುವುದು ಸೂಕ್ತವಾಗಬಹುದು ಅಭಿವೃದ್ಧಿ ವರದಿಯನ್ನು ತಯಾರಿಸುವರೇ ನಡೆದ ಗ್ರಾಮಸಭೆಗಳಲ್ಲಿ ಸಿಕ್ಕಿದ ವಿವರಗಳಲ್ಲಿ ಕಂಡು ಬಂದ ಒಂದು ಪ್ರಧಾನ ಅಂಶವೆಂದರೆ ಶಿಕ್ಷಕರ ಕಾರ್ಯ ವಿಧಾನದಲ್ಲಿ ಅಸಮಾಧಾನ. ಅಲ್ಲದೆ ಅವರಿಗೆ ವಿವಿಧ ಇತರ ಕೆಲಸಗಳನ್ನು ಹಚ್ಚುವುದರ ಬಗ್ಗೆ ಆಕ್ಷೇಪ. ಕಲಿಕೆ ನಿಲ್ಲಿಸಿದ ಮಕ್ಕಳ ಪಟ್ಟಿಯನ್ನು ನೋಡಿದರೆ ಕೆಲವು ಶಾಲೆಗಳಲ್ಲಿ ಮಧ್ಯೆ ಕಲಿಕೆ ನಿಲ್ಲಿಸುವವರ ಸಂಖ್ಯೆ ಇಲ್ಲದಿರುವುದು ಸಮಾಧಾನದ ಅಂಶ. ಆದರೆ ಎಲ್.ಪಿ. ವಿಭಾಗದಿಂದ ಯು.ಪಿ. ವಿಭಾಗಕ್ಕೆ ಬರುವಾಗ ಮಕ್ಕಳ ಸಂಖ್ಯೆ ಕಡಿಮೆಯಿರುತ್ತದೆ. ಗ್ರಾಮಸಭೆಯಲ್ಲಿ ಕ್ರೀಡಾಶಿಕ್ಷಣ ಮತ್ತು ಸವಲತ್ತುಗಳ ಕುರಿತು ತೀರಾ ಚರ್ಚೆಯಾಗಿಲ್ಲವೆಂದೇ ಹೇಳಬಹುದು. ಒಟ್ಟಿನಲ್ಲಿ ಈ ಪಂಚಾಯತಿನ ಯಾವ ಶಾಲೆಗಳೂ ಗಮನಾರ್ಹ ಸಾಧನೆಯನ್ನು ಮಾಡಿಲ್ಲ. ಇವುಗಳ ಅಭಿವೃದ್ಧಿಗೆ ಬೇಕಾದ ಸವಲತ್ತುಗಳೂ ನಮ್ಮ ಶಾಲೆಗಳಲ್ಲಿತೀರಾ ಇಲ್ಲ. ಸಾಂಸ್ಕೃತಿಕ ಚಟುವಟಿಕೆಗಳೂ ಶಾಲೆಗಳಲ್ಲಿ ಕೇವಲ ಸ್ಪರ್ಧೆಗಳಿಗೆ ಮಾತ್ರ ಸೀಮಿತವಾಗಿದೆಯೇ ಹೊರತು ಶಿಕ್ಷಣದ ಅಂಗವಾಗಿಲ್ಲ. ಹೀಗಿದ್ದರೂ ನಮ್ಮ ವಿದ್ಯಾರ್ಥಿಗಳು ಬಾಲಕಲೋತ್ಸವ ಯುವಜನೋತ್ಸವಗಳಲ್ಲಿ ಜಿಲ್ಲಾಮಟ್ಟದಲ್ಲೂ ರಾಜ್ಯಮಟ್ಟದಲ್ಲೂ ಕೆಲವು ಸಾಧನೆ ಮಾಡಿರುತ್ತಾರೆ. ಕೆ.ವಿ.ಯಸ್.ಯಂ. ಪ್ರೌಢ ಶಾಲೆ ಕುರುಡಪದವು ರಾಜ್ಯಮಟ್ಟದ ಸಂಸ್ಕೃತೋತ್ಸವದಲ್ಲಿ ಪ್ರಶಂಸಾರ್ಹ ಸಾಧನೆ ಮಾಡಿದೆ.

ಇಂದಿನ ವಿದ್ಯಾಭ್ಯಾಸ ಪದ್ಧತಿಯ ದುರಂತವೆಂದರೆ 10ನೇ ತರಗತಿಯ ವರೆಗೆ ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳಿಗೂ ಸರಿಯಾಗಿ ಓದಲು ಬರೆಯಲು ಬಾರದಿರುವುದು, ಗಣಿತದ ಮೂಲ ಕ್ರಿಯೆಗಳ ಅರಿವಿಲ್ಲದಿರುವುದು. ಪುಸ್ತಕ ಪತ್ರಿಕೆಗಳನ್ನು ಓದುವ ಅಭ್ಯಾಸವಿಲ್ಲದೆ ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನದ ಕೊರತೆ ಕಾಣಿಸುತ್ತದೆ. ಜನರಲ್ಲೂ ಶಿಕ್ಷಣದ ಬಗ್ಗೆ ಅರಿವು ಮತ್ತು ಅದರ ಅಭಿವೃದ್ಧಿಯಲ್ಲಿ ಅವರ ಪಾತ್ರದ ಬಗ್ಗೆ ತಿಳುವಳಿಕೆ ಇಲ್ಲದಿರುವುದು ಒಂದು ತೊಡಕಾಗಿ ಪರಿಣಮಿಸಿದೆ. ಶಾಲೆಗೆ ಸೇರಿದ ಮಕ್ಕಳು ಇಂದಿನ ಪ್ರಮೋಶನ್ ನೀತಿಯಿಂದಾಗಿ ಸಂಬಂಧಿತ ತರಗತಿಗಳಲ್ಲಿ ಪಡೆಯಬೇಕಾದ ಜ್ಞಾನವನ್ನು ಪಡೆಯದೆ ಮುಂದಿನ ತರಗತಿಗೆ ದಾಟುತ್ತಿದ್ದಾರೆ. ಶಾಲೆಗಳ ಒಟ್ಟು ಸೌಕರ್ಯಗಳು ಮತ್ತು ಇರುವ ಸೌಕರ್ಯಗಳ ಯೋಜಿತ ಬಳಕೆಯಾಗದಿರುವುದು ಒಂದು ಸಮಸ್ಯೆಯಾಗಿದೆ. ಜನರ ಸಾಂಪತ್ತಿಕ ದೌರ್ಬಲ್ಯದಿಂದಾಗಿ ಮಕ್ಕಳನ್ನು ಶಾಲೆ ಬಿಡಿಸಿ ಕೆಲಸಕ್ಕೆ ಹಚ್ಚುವುದು ಶಾಲೆಗೆ ಕಳುಹಿಸುವುದಿದ್ದರೂ ಅವರ ಅಧ್ಯಯನಕ್ಕೆ ಗಮನ ನೀಡದೆ ಇರುವುದು ಕೆಟ್ಟ ಪರಿಣಾಮ ಬೀರುತ್ತಿದೆ. ಜೀವನಕ್ಕೂ ವಿದ್ಯಾಭ್ಯಾಸಕ್ಕೂ ಇರುವ ಸಂಬಂಧದ ಕೊರತೆಯೂ ಶಿಕ್ಷಣ ರಂಗವನ್ನು ಬಾಧಿಸುತ್ತಿದೆ. ಇತರ ಮಾಧ್ಯಮಗಳ ಪ್ರಭಾವ, ಪಾಶ್ಚಾತ್ಯ ಸಂಸ್ಕೃತಿಗಳ ಪ್ರಭಾವ, ನೈತಿಕ ಶಿಕ್ಷಣದ ಕೊರತೆ, ತಪ್ಪು ಕಲ್ಪನೆಗಳ ಮುಂದುವರಿಕೆಗಳು ನಮ್ಮ ಸಮಾಜದ ಮಕ್ಕಳ ನೈತಿಕ ಅಧಃಪತನವನ್ನುಂಟುಮಾಡುತ್ತದೆ. ಫಲದಿಂದ ಸಾಧನೆಮಾಡುವ ಮನಸ್ಸಿಲ್ಲದೆ ಸುಲಭ ಶೀಘ್ರ ಫಲಿತಾಂಶ ಪಡೆಯುವ ಪ್ರವೃತ್ತಿಯೊಡನೆ ನಮ್ಮ ಭಾವೀ ಜನಾಂಗ ಬೆಳೆಯುತ್ತಿದೆ.

ಈ ಎಲ್ಲಾ ಹಿನ್ನಲೆಯ ಬೆಳಕಿನಲ್ಲಿ ನಮ್ಮ ಶಿಕ್ಷಣ ವ್ಯವಸ್ಥೆಯ ಸಮಸ್ಯೆಗಳನ್ನು ಪರಿಶೀಲಿಸುವುದು ಅಗತ್ಯ.

ಪ್ರಧಾನ ಸಮಸ್ಯೆಗಳು

1. ಪ್ರಾಥಮಿಕ ವಿದ್ಯಾಭ್ಯಾಸ ಶಿಕ್ಷಣ ವ್ಯವಸ್ಥೆಯ ಅಡಿಗಲ್ಲು. ಇದನ್ನು ಸಂಪನ್ನಗೊಳಿಸುವ ಪ್ರಿ-ಪ್ರೈಮರಿ ವಿದ್ಯಾಲಯಗಳು ನಮ್ಮ ಪಂಚಾಯತಿನಲ್ಲಿ ಸಾಕಷ್ಟಿಲ್ಲ. ಈ ವಿಶಾಲವಾದ ಪಂಚಾಯತಿನಲ್ಲಿ ಕೇವಲ 2 ಅಂಗನವಾಡಿಗಳಲ್ಲಿ ಮಾತ್ರ ನರ್ಸರಿ ತರಗತಿಗಳಿವೆ. ಎರಡು ಖಾಸಗಿ ನರ್ಸರಿಗಳಿವೆ.

2. ಪಂಚಾಯತಿನ ಹೆಚ್ಚಿನ ಶಾಲೆಗಳಲ್ಲೂ Pre K.E.R. ಕಟ್ಟಡಗಳಿರುವುದರಿಂದ ಸ್ಥಳಾವಕಾಶ, ಗಾಳಿ ಬೆಳಕಿನ ಕೊರತೆಯಿರುತ್ತದೆ. ವಿದ್ಯಾರ್ಥಿಗಳಿಗೆ ಅಗತ್ಯವಾದ ಬೆಂಚು ಇತ್ಯಾದಿ ಪೀಠೋಪಕರಣಗಳ ಕೊರತೆ ಹೆಚ್ಚಿನ ಶಾಲೆಗಳಲ್ಲಿದೆ. ಪ್ರಾಥಮಿಕ ಅವಶ್ಯಕತೆಗಳಿಗೆ ಬೇಕಾದ ಮೂತ್ರದೊಡ್ಡಿ, ಶೌಚಾಲಯಗಳು ಕೆಲವು ಶಾಲೆಗಳಲ್ಲಿಲ್ಲ. ಶುದ್ಧ ಕುಡಿಯುವ ನೀರಿನ ಅಗತ್ಯಕ್ಕೆ ಬೇಕಾದ ಬಾವಿ ಹಲವು ಶಾಲೆಗಳಲ್ಲಿಲ್ಲ.

3. ಶಿಕ್ಷಣ ಮಟ್ಟ ಕುಸಿತ ಇನ್ನೊಂದು ಪ್ರಧಾನ ಸಮಸ್ಯೆ. ಹಿಂದಿನ ವಿದ್ಯಾಭ್ಯಾಸ ಮಟ್ಟಕ್ಕಿಂತ ಇಂದಿನ ಮಟ್ಟ ಕೆಳಗಿದೆ. ನೈತಿಕ ಶಿಕ್ಷಣದ ಕೊರತೆ, ವಿದ್ಯಾರ್ಥಿಗಳ ಶಾಲಾ ಶಿಕ್ಷಣ ಕೇವಲ ಅಕ್ಷರ ಶಿಕ್ಷಣ ಹಾಗೂ ವಿಷಯ ತಿಳಿಸುವ ಶಿಕ್ಷಣವಾಗಿದ್ದು ವಿದ್ಯಾರ್ಥಿಯಲ್ಲಿ ಉತ್ತಮ ಮೌಲ್ಯಗಳನ್ನು ಬೆಳೆಸುವುದಕ್ಕೆ ಹೆಚ್ಚಿನ ಗಮನ ನೀಡುತ್ತಿಲ್ಲ. ಇದರಿಂದ ವಿದ್ಯಾರ್ಥಿಯ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗುತ್ತಿಲ್ಲ. ಇಂದಿನ ಪ್ರಮೋಶನ್ ವ್ಯವಸ್ಥೆಯು ಶಿಕ್ಷಣ ಮಟ್ಟದ ಕುಸಿತಕ್ಕೆ ಮತ್ತೊಂದು ಕಾರಣ.

4. ಅಧ್ಯಾಪಕರ ಕಾರ್ಯನಿರ್ವಹಣೆಯಲ್ಲಿನ ಕೊರತೆ

5. ಕೆಲವೆಡೆ ಮುಂದಿನ ಹಂತದ ವಿದ್ಯಾಭ್ಯಾಸಕ್ಕೆ ಶಾಲೆಗಳಲ್ಲದಿರುವುದು ಒಂದು ಕೊರತೆಯಾಗಿದೆ. ನಮ್ಮ ಪಂಚಾಯತಿನಲ್ಲಿ ಕೇವಲ 3 ಪ್ರೌಢಶಾಲೆಗಳಿದ್ದು plus two ಅಥವಾ P.D.C. ವಿದ್ಯಾಭ್ಯಾಸಕ್ಕೆ ವ್ಯವಸ್ಥೆಯಿಲ್ಲ. ಆದ್ದರಿಂದ ಇಲ್ಲಿನ ವಿದ್ಯಾರ್ಥಿಗಳು ಉನ್ನತ ವಿದ್ಯಾಭ್ಯಾಸಕ್ಕೆ ಕರ್ನಾಟಕದ ಸಂಸ್ಥೆಗಳನ್ನೋ ಅಥವಾ ಜಿಲ್ಲೆಯ ದೂರದ ಕೇಂದ್ರಗಳನ್ನೋ ಅವಲಂಬಿಸಬೇಕಾಗುವುದು.

6. ಶಿಕ್ಷಣದ ಬಗ್ಗೆ ಕೆಲವು ರಕ್ಷಕರಿಗಿರುವ ಅಜ್ಞಾನ : ರಕ್ಷಕರು ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಗಮನ ನೀಡದಿರುವುದು, ಶಿಕ್ಷಕರೊಡನೆ ಸಂಪರ್ಕವಿರಿಸಿ ಮಕ್ಕಳ ವಿದ್ಯಾಭ್ಯಾಸಕ್ಕೆ ಉತ್ತಮ ವಾತಾವರಣ ನಿರ್ಮಿಸಿ ಕೊಡದಿರುವುದು ಅಭಿವೃದ್ಧಿಯನ್ನು ಕುಂಠಿತಗೊಳಿಸುತ್ತಿದೆ.

7. ವಿದ್ಯಾಭ್ಯಾಸ ಸಂಬಂಧಿತ ಮೂಲ ಸೌಕರ್ಯಗಳಾದ ಪ್ರಯೋಗಾಲಯ, ಗ್ರಂಥಾಲಯ, ಕ್ರೀಡಾಸಂಘ, ಸಾಂಸ್ಕೃತಿಕ ಸಂಘ ಮೊದಲಾದವುಗಳು ಶಾಲೆಗಳಲ್ಲಿಲ್ಲದಿರುವುದು.

8. ಪಠ್ಯ ಪುಸ್ತಕಗಳ ಸಮರ್ಪಕ ವಿತರಣೆ : ಕನ್ನಡ ಮಾಧ್ಯಮದ ಪುಸ್ತಕಗಳು ಸಕಾಲದಲ್ಲಿ ದೊರಕದಿರುವುದು.

9. ಸರಕಾರಿ ಶಾಲೆಗಳಲ್ಲಿ ಅಧ್ಯಾಪಕರ ನೇಮಕಾತಿಯಲ್ಲಿನ ವಿಳಂಬ.

10. ಎರಡು ಸರಕಾರಿ ಪ್ರೌಢ ಶಾಲೆಗಳಲ್ಲಿ S.S.L.C. ಫಲಿತಾಂಶ ಸಮಾಧಾನಕರವಾಗಿಲ್ಲ.

11. ಪಠ್ಯ ಪುಸ್ತಕಗಳು ಆಕೃತಿಯಲ್ಲಿ ದೊಡ್ಡದಿದ್ದು ಬಹಳ ಬೇಗ ಹಾಳಾಗುತ್ತದೆ. ಮಕ್ಕಳಲ್ಲಿ ಆಸಕ್ತಿಯನ್ನು ಮೂಡಿಸುವ ಪಠ್ಯ ವಿಷಯದ ಕೊರತೆಯಿದೆ.

12. ಅನುದಾನಿತ ಶಾಲೆಗಳ ಮುಖ್ಯೋಪಾಧ್ಯಾಯರುಗಳಿಗೆ ಶಾಲಾ ಸಂಬಂಧಿತ ಕೆಲಸಗಳಿಗೆ ಉನ್ನತ ಕಛೇರಿಗಳಿಗೆ ಆಗಾಗ ಹೋಗಬೇಕಾಗಿ ಬರುವುದರಿಂದ ಶಾಲಾ ಆಡಳಿತದಲ್ಲಿ ಮತ್ತು ಅವರ ಸಂಬಂಧಿತ ತರಗತಿಗಳಲ್ಲಿ ತೊಂಗರೆಯಾಗುತ್ತಿದೆ.

13. ಇಂದಿನ ಅಸಮರ್ಪಕ ಮೌಲ್ಯಮಾಪನ ವಿಧಾನವು ವಿದ್ಯಾರ್ಥಿಯ ಸ್ಮರಣ ಶಕ್ತಿಯನ್ನು ಮಾತ್ರ ಅಳೆಯುತ್ತದೆ.

14. ಪಂಚಾಯತಿನ ಹೆಚ್ಚಿನ ಶಾಲೆಗಳಲ್ಲಿ ಕ್ರೀಡಾ ಚಟುವಟಿಕೆಗೆ ಯೋಗ್ಯವಾದ ಆಟದ ಮೈದಾನಗಳಿಲ್ಲ. ಪಂಚಾಯತಿನಲ್ಲಿ ಕ್ರೀಡಾಸ್ಪರ್ಧೆಗಳನ್ನು ನಡೆಸಲು ಯೋಗ್ಯ ಮತ್ತು ಸುಸಜ್ಜಿತ ವಿಶಾಲ ಮೈದಾನ ಇಲ್ಲ.

15. ಅನೌಪಚಾರಿಕ ಶಿಕ್ಷಣಕ್ಕೆ ಪ್ರಾಶಸ್ತ್ಯ ನೀಡದಿರುವುದು ನಮ್ಮ ಜನರಲ್ಲಿ ಶಿಕ್ಷಣ ಸುಧಾರಣಾ ಕ್ರಮಗಳನ್ನು ಚರ್ಚಿಸುವಂತೆ ಮಾಡುವುದರಲ್ಲಿ ವಿಫಲತೆಯನ್ನುಂಟು ಮಾಡಿದೆ.

16. ಅನೌಪಚಾರಿಕ ಶಿಕ್ಷಣಕ್ಕೆ ಸಾಕ್ಷರತಾ ಕ್ರಾಂತಿಯ ಮುಂದಿನ ಹಂತಗಳಲ್ಲಿ ಯಾವುದೇ ಪ್ರೋತ್ಸಾಹ ಸಿಗದಿರುವುದು.

17. ಶಾಲೆಯಲ್ಲಿ ಆಟಗಳ ಸಾಮಾಗ್ರಿಗಳ ಕೊರತೆ

18. ಹೆಚ್ಚಿನ ಕಡೆಗಳಲ್ಲಿ ಶಿಕ್ಷಕ ರಕ್ಷಕ ಸಂಘ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸದೆ ಇರುವುದು.

19. ನಿರಂತರವಿಲ್ಲದ ಮಕ್ಕಳ ಹಾಜರಾತಿಯು ಮಕ್ಕಳ ಕಲಿಯುವಿಕೆಗೆ ತೊಡಕಾಗಿದೆ.

20. ಮಕ್ಕಳ ಕಲಿಕೆಯು ಆಸಕ್ತಿಯುತವಾಗಿ ಮಾಡಬಲ್ಲ ಪಠನೋಪಕರಣಗಳ ಕೊರತೆ

ಪರಿಹಾರೋಪಾಯಗಳು ಮತ್ತು ಗ್ರಾಮಸಭೆಯಲ್ಲಿ ಜನರು ಮುಂದಿಟ್ಟ ಅಹವಾಲುಗಳು

1. ಪ್ರಿ-ಪ್ರೈಮರಿ ವಿದ್ಯಾಭ್ಯಾಸದ ಅಭಿವೃದ್ಧಿಗೆ ಪ್ರತಿವಾರ್ಡುಗಳಲ್ಲೂ 3 ರಂತೆ ಅಂಗನವಾಡಿಗಳ ಸ್ಥಾಪನೆ. ಅಲ್ಲಿನ ಸೇವಾ ಸೌಲಭ್ಯ, ಪಾಠಪದ್ಧತಿ, ಮೊದಲಾದವುಗಳ ಬಗ್ಗೆ ಸೂಕ್ತ ತೀರ್ಮಾನ ಕೈಗೊಳ್ಳುವುದು. ಪೈವಳಿಕೆ ನಗರ ಪ್ರೌಢಶಾಲೆಯ ಪ್ರಾಥಮಿಕ ವಿಭಾಗದೊಡನೆ ಪ್ರಿ-ಪ್ರೈಮರಿ ಕ್ಲಾಸನ್ನು ಆರಂಭಿಸುವುದು.

2 · (a) ಮೇಲ್ದರ್ಜೆಗೆ ಏರಿಸಬೇಕಾದ ಶಾಲೆಗಳು (ಹೈಸ್ಕೂಲು ವಿಭಾಗಕ್ಕೆ ಅನುಮತಿ ಬೇಕಾದವುಗಳು)

i) ಶ್ರೀ ದುರ್ಗಾಪರಮೇಶ್ವರಿ ಎ.ಯು.ಪಿ. ಶಾಲೆ, ಸಜಂಕಿಲ

ii) ಜೋನ್‌ಬೋಸ್ಕೊ ಎ.ಯು.ಪಿ. ಶಾಲೆ, ಕಯ್ಯಾರು

iii) ಎ.ಯು.ಪಿ. ಶಾಲೆ, ಹೆದ್ದಾರಿ

iv) ಶ್ರೀ ಶಾರದಾ ಎ.ಯು.ಪಿ. ಶಾಲೆ, ಚೇವಾರು

U.P. ಶಾಲೆಯಾಗಿ ಭಡ್ತಿಯಾಗಬೇಕಾದ ಶಾಲೆಗಳು

b) (i) ಬಿ.ಪಿ.ಪಿ. ಎಲ್.ಪಿ. ಶಾಲೆ ಬಾಯಾರು ಪೆರುವೊಡಿ

ii)ಬಿ.ಪಿ.ಪಿ.ಎ.ಎಲ್.ಪಿ. ಶಾಲೆ, ಬಾಡೂರು, ಪೆರ್ಮುದೆ

(iii) ಎಸ್.ಆರ್.ಎ.ಎಲ್.ಪಿ. ಶಾಲೆ, ಕಯ್ಯಾರು

(iv) ಅಟ್ಟೆಗೋಳಿ ಎ.ಎಲ್.ಪಿ. ಶಾಲೆ, ಕಯ್ಯಾರು

(v) ಎ.ಎಲ್.ಪಿ, ಶಾಲೆ, ಬೆರಿಪದವು

(c) ಹೊಸ ಎಲ್.ಪಿ. ಶಾಲೆಗಳಿಗೆ ಅನುಮತಿ ಬೇಕಾದವುಗಳು

(i) IIನೇ ವಾರ್ಡ್ -ಚೇರಾಲು

(ii) IIIನೇ ವಾರ್ಡ್ - ಕಾಡೂರಿನಲ್ಲಿ (ಪ್ರಸ್ತುತ ಇಲ್ಲಿ ಮುಚ್ಚಲ್ಪಟ್ಟ ಶಾಲೆ ಪುನರಾರಂಭವಾಗಬೇಕು. ಯಾ DPEP ಯೋಜನೆಯಲ್ಲಿ ಸೇರಿಸಬೇಕು)

(iii) IIIನೇ ವಾರ್ಡ್ -ಬೇಡುಗುಡ್ಡೆ

(iv) III ಮತ್ತು IVನೇ ವಾರ್ಡ್ -ಕೊಮ್ಮಂಗಳ

(v) VIನೇ ವಾರ್ಡ್ - ಮುನ್ನೂರು

(vi) VIIನೇ ವಾರ್ಡ್ -ಸಂತಡ್ಕ

ix VIIIನೇ ವಾರ್ಡ್ -ಮಂಡೆಕಾಪು

(viii) IXನೇ ವಾರ್ಡ್ -ಬಳ್ಳೂರು

(vii) X ನೇ ವಾರ್ಡ್ -ಕಾಯರ್‌ಕಟ್ಟೆ

(ix) XIನೇ ವಾರ್ಡ್ -ಮಾಸಿಕುಮೇರಿ

ದಳಿ ಕುಕ್ಕು ಶ್ರೀಪಂಚಲಿಂಗೇಶ್ವರ ಎ.ಎಲ್.ಪಿ. ಶಾಲೆಯನ್ನು ಅನಾದಾಯಕರವೆಂದು ಮುಚ್ಚಬಾರದು.

(D) Plus two, (I.T.I. ಮತ್ತು vocational course ಆರಂಭವಾಗಬೇಕಾದ ಸ್ಥಳಗಳು

(i) ಸರಕಾರಿ ಪ್ರೌಢಶಾಲೆ, ಪೈವಳಿಕೆ - +2 course

(ii) ಸರಕಾರಿ ಪ್ರೌಢ ಶಾಲೆ, ಪೈವಳಿಕೆ ನಗರ +2 ಮತ್ತು ಜೂನಿಯರ್ ಕಾಲೇಜ್

(iii) ಪಂಚಾಯತಿನಲ್ಲಿ ತಾಂತ್ರಿಕ ಶಿಕ್ಷಣ ಹಾಗೂ ವೃತ್ತಿ ಶಿಕ್ಷಣ ಸಂಸ್ಥೆ ಮತ್ತು ಪೊಲಿಟೆಕ್ನಿಕ್ ಶಾಲೆಗಳ ಸ್ಥಾಪನೆ.

(E) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ವಸತಿ ಸಹಿತವಾದ ಶಾಲೆ (2ನೇ ವಾರ್ಡ್‌ನಲ್ಲಿ)

(F) ಮೂಲಭೂತ ಸೌಕರ್ಯಗಳನ್ನು ಒದಗಿಸುವುದು. ಪ್ರಾಥಮಿಕ ವಿಭಾಗ ಪ್ರೌಢ ಶಾಲಾ ವಿಭಾಗ (ಪೈವಳಿಕೆ ನಗರ)ಗಳಿಗೆ ಅಗತ್ಯವಾದ ಕಟ್ಟಡ, ಆವರಣ, ಪೀಠೋಪಕರಣ, ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ವಿದ್ಯುದೀಕರಣ.

(G) ಇದಲ್ಲದೆ ಪಂಚಾಯತಿನ ಇತರ ಶಾಲೆಗಳಿಗೂ ಕಟ್ಟಡ, ಪೀಠೋಪಕರಣ ಶೌಚಾಲಯ, ಕುಡಿಯುವ ನೀರಿನ ವ್ಯವಸ್ಥೆ, ಆಟದ ಮೈದಾನಗಳು ಮೊದಲಾದವುಗಳನ್ನು ಅಗತ್ಯವಿದ್ದಂತೆ ಒದಗಿಸಬೇಕು.

ಖಾಸಗೀ ಅನುದಾನಿತ ಶಾಲೆಗಳಿಗೂ ಸರಕಾರದಿಂದ ಸಿಗುವ ಸವಲತ್ತುಗಳನ್ನು ದೊರಕಿಸುವಂತೆ ಪ್ರಯತ್ನಿಸಬೇಕು. ಮತ್ತು ಅವುಗಳು ಸಮಂಜಸವಾಗಿ ವಿನಿಯೋಗವಾಗುವಂತೆ ನೋಡಿಕೊಳ್ಳಬೇಕು.

(H) P.T.A. ಮತ್ತು ಮಾತೃ P.T.A.ಗಳನ್ನು ಸಕ್ರಿಯಗೊಳಿಸುವುದು. ಮತ್ತು ಪ್ರತಿ ವಾರ್ಡ್ ಮಟ್ಟದಲ್ಲೂ ಪಂಚಾಯತು ಮಟ್ಟದಲ್ಲೂ ವಿದ್ಯಾಭ್ಯಾಸ ಗುಣಮಟ್ಟ ಸಂರಕ್ಷಣಾ ಕ್ರಿಯಾಸಮಿತಿಯನ್ನು ರಚಿಸಿ ಆ ನಿಟ್ಟಿನಲ್ಲಿ ಪ್ರವರ್ತಿಸುವುದು.

(I) ಮುಖ್ಯೋಪಾಧ್ಯಾಯರಿಗೆ ಮತ್ತು ಅಧ್ಯಾಪಕರುಗಳಿಗೆ ಶಿಕ್ಷಣ ಇಲಾಖೆಗೆ ಸಂಬಂಧಿಸಿದ ಇತರ ಕೆಲಸಗಳ ಹೊರೆಯನ್ನು ನೀಡದಿರುವುದು.

(J) ಶಾಲಾ ವರ್ಷದ ಎಲ್ಲಾ ದಿನಗಳು ಪಾಠ ಪ್ರವಚನಗಳಿಗೆ ಉಪಯೋಗಕರವಾಗುವಂತೆ ಖಾತರಿಪಡಿಸುವುದು.

(K) ಅಧ್ಯಾಪಕರ ಕಾರ್ಯದಕ್ಷತೆ ಹೆಚ್ಚಿಸಲು (i) ಸೂಕ್ತ ತರಬೇತಿ ನೀಡುವುದು-

(ii) ಅಧ್ಯಾಪಕ ವಿದ್ಯಾರ್ಥಿ ನಿಷ್ಪತ್ತಿ 1:20 ಇರಬೇಕು.

(iii) ಸ್ಕೂಲ್ complex ಪರಿಣಾಮಕಾರಿಯಾಗಿ ನಡೆಸುವುದು

(L) ಪಠ್ಯ ಪುಸ್ತಕಗಳ ಸಮರ್ಪಕ ವಿತರಣೆಗೆ ವ್ಯವಸ್ಥೆ ಮಾಡುವುದು. ಕನ್ನಡ ಮಾಧ್ಯಮದ ಪುಸ್ತಕಗಳೂ ಅಧ್ಯಯನ ವರ್ಷದ ಆರಂಭದಲ್ಲೇ ಸಿಗುವಂತೆ ಮಾಡಬೇಕು.

(M) ಸರಕಾರಿ ಶಾಲೆಗಳಲ್ಲಿ ಅಧ್ಯಾಪಕರ ನೇಮಕಾತಿ ವಿಳಂಬವಾಗುವುದನ್ನು ತಡೆಯಲು ಅವರನ್ನು ನೇಮಿಸುವ ಅಧಿಕಾರ ಮುಖ್ಯೋಪಾಧ್ಯಾರಿಗೇ ನೀಡುವುದು.

(N) ಪಂಚಾಯತ್ ಮಟ್ಟದಲ್ಲಿ ಕಲಾ, ಸಾಂಸ್ಕೃತಿಕ ಮತ್ತು ಕ್ರೀಡಾ ಸ್ಪರ್ಧೆ ಏರ್ಪಡಿಸುವುದು.

(O) ಶಿಕ್ಷಣ ಮಟ್ಟದ ಅಪಮೌಲ್ಯಕ್ಕೆ ಕಾರಣವಾಗುತ್ತಿರುವ ಈಗಿನ ಪ್ರಮೋಶನ್ ಪದ್ಧತಿಯಲ್ಲಿ ಸೂಕ್ತ ಬದಲಾವಣೆ ತರುವುದು.

(P) ಅನೌಪಚಾರಿಕ ಶಿಕ್ಷಣದ ಅಭಿವೃದ್ಧಿಗೆ ಜನರನ್ನು ಸಂಘಟಿಸುವುದು, ಪಂಚಾಯತಿನ ಎಲ್ಲ ಸಂಘ -ಸಂಸ್ಥೆಗಳ ಸಹಕಾರ ಪಡೆಯುವುದು.

(Q) ಪ್ರಾಥಮಿಕ ಮಟ್ಟದ ಪಠ್ಯಪುಸ್ತಕಗಳು ಮಕ್ಕಳ ಆಸಕ್ತಿ ಹೆಚ್ಚಿಸುವಂತಿದ್ದು ಸರಳವಾಗಿರಬೇಕು. ಚಿತ್ರಗಳನ್ನೊಳಗೊಂಡಿದ್ದು ಆಕರ್ಷಕವಾಗಿರಬೇಕು. ಸಣ್ಣ ತರಗತಿಯ ಮಕ್ಕಳಿಗೆ ಹೊರೆಯಾಗುವಂತಿರಬಾರದು.

(R) ಶಿಕ್ಷಕರ ಪಾತ್ರದಂತೆ ವಿದ್ಯಾಭ್ಯಾಸದ ಅಭಿವೃದ್ಧಿಯಲ್ಲಿ ರಕ್ಷಕರ ಪಾತ್ರದ ಬಗ್ಗೆ ಜನರಿಗೆ ತಿಳುವಳಿಕೆ ಉಂಟು ಮಾಡಲು ಚಳವಳಿ ರೀತಿಯ ಕಾರ್ಯಕ್ರಮಗಳನ್ನು ಪಂಚಾಯತ್ ಮಾಡುತ್ತಿರಬೇಕು.


INDEX
S – School
O – Office.
P.O – Post office.
SCB – Service Co-op. Bank.
T – Temple.
M – Mosque.
C – Church.
MWT – Micro wave Tower.
N
KARNATAKA STATE
VORKADY PANCHAYAT
MEENJA PANCHAYAT
MANGALPADY PANCHAYAT
KUMBALA PANCHAYAT
PUTHIGE PANCHAYAT
P.O
SCB
P.H
V.H
MWT
M
T
C

ಕುಡಿಯುವ ನೀರು ಮತ್ತು ಆರೋಗ್ಯ

ಕುಡಿಯುವ ನೀರು :

ಮನುಷ್ಯ ಜೀವಜಾಲಕ್ಕೆ ಜೀವಿಸಲು ನೀರು, ಆರೋಗ್ಯ ಮತ್ತು ಶುಚಿತ್ವ ಅಗತ್ಯ. ಈ ಪಂಚಾಯತು ಕ್ಷೇತ್ರವು ತುಂಬಾ ವಿಶಾಲವಾಗಿದ್ದು, 11 ವಾರ್ಡುಗಳಿರುವ ಒಂದು ಹಳ್ಳಿ ಪ್ರದೇಶವಾಗಿದೆ. ಇಲ್ಲಿ ಸುಮಾರು 30,000ಕ್ಕೂ ಹೆಚ್ಚು ಜನಸಂಖ್ಯೆ ಇದ್ದು, ಬಾವಿ, ಕೆರೆ, ತೋಡು, ಸುರಂಗದ ಒರತೆ ಮೊದಲಾದ ವ್ಯವಸ್ಥೆಗಳನ್ನು ಕುಡಿಯುವ ನೀರಿಗಾಗಿ ಆಶ್ರಯಿಸಿರುತ್ತಾರೆ. ಪ್ರಕೃತ ಈ ಪಂಚಾಯತಿನಲ್ಲಿ ಖಾಸಗಿ ಹೊರತಾಗಿ 41 ತೆರೆದ ಬಾವಿಗಳೂ, 21 ಕೊಳವೆ ಬಾವಿಗಳೂ 3 ನೀರಾವರಿ ಕೊಳಗಳೂ, 2 ನೀರಾವರಿ ಕಾಲುವೆಗಳೂ ಇವೆ. ಖಾಸಗಿ ಬಾವಿಗಳು ಎಲ್ಲಾ ಕುಟುಂಬದವರಿಗೆ ಸ್ವಂತವಾಗಿ ಇರುವುದಿಲ್ಲ. ಕೆಲವು ಬಾವಿಗಳಲ್ಲಿ ಕೊನೆಗೆ ನೀರೇ ಇರುವುದಿಲ್ಲ. ಇದ್ದರೂ ಅದು ಮಲಿನವೂ, ದುರ್ಗಂಧದಿಂದಲೂ ಕೂಡಿರುವುದು. ಕೆಳಗೆ ಸೂಚಿಸಿದ ಪ್ರದೇಶಗಳು ಕುಡಿಯುವ ನೀರಿನ ತೀರಾ ಅಭಾವದಿಂದಿವೆ.

1. ಪೈವಳಿಕೆ ಭಂಡಾರ ಮತ್ತು ಬಾಯಿಕಟ್ಟೆ
2. ಶಾಂತಿನಗರ, ಓಡಕಡವು
3. ಪೈವಳಿಕೆ ಪಾಕ ರಸ್ತೆ
4. ಪೈವಳಿಕೆ ಪದವು, ಬೋಳುಕಟ್ಟೆ
5. ಬಾಯಾರು ಪದವು ಗಾಳಿಯಡ್ಕ
6. ಪೆರ್ಮುದೆ ದಾಸನಡ್ಕ
7. ಮಾಸು ಕುಮೇರಿ
8. ಮೂಡಾಯಿಗುಡ್ಡೆ
9 ಜೋಡುಕಲ್ಲು ನರ್ಸಣ್ಣ ಕಾಲನಿ
10. ಅಟ್ಟೆಗೋಳಿ
11. ಬೆರಿಪದವು ಬಳ್ಳೂರು
12. ಸುಬ್ಬಯ ಕಟ್ಟೆ
13. ಗುಂಪೆ

ಮೇಲ್ಕಂಡ ಪ್ರದೇಶಗಳಲ್ಲಿ ಕೊಳವೆಬಾವಿಗಳನ್ನು ನಿರ್ಮಿಸಬೇಕು. ಮತ್ತು ಅದರ ಚಲಾವಣೆಗೆ Handle ಉತ್ತಮ ಗುಣಮಟ್ಟದಲ್ಲಿದ್ದು ದುರಸ್ತಿ ಬಂದಲ್ಲಿ ನುರಿತ ಕೆಲಸಗಾರರಿಂದ ಸರಿಪಡಿಸಬೇಕು. ಇವಲ್ಲದೆ ಬೇರೆ ಅನಿವಾರ್ಯ ಪ್ರದೇಶದವರೆಗೂ ಅಪೇಕ್ಷಿಸಿದಲ್ಲಿ ಕೊಳವೆ ಬಾವಿಗಳನ್ನು ಒದಗಿಸಬೇಕು. ಹಾಗಾಗಿ ಸುಮಾರು 80 ಕೊಳವೆ ಬಾವಿಗಳು ಇನ್ನೂ ಬೇಕಾಗಿವೆ. ಹಳ್ಳ ತೋಡುಗಳ ನೀರನ್ನು ಕುಡಿಯಲು ಉಪಯೋಗಿಸುವುದಿದ್ದಲ್ಲಿ ಆ ನೀರನ್ನು ಕಶ್ಮಲ ವಿಮುಕ್ತಗೊಳಿಸಬೇಕು.

ಜನಸಾಂದ್ರತೆ ಮತ್ತು ಜೀವನಾನುಕೂಲತೆಗಳು ಹೆಚ್ಚುತ್ತಾ ಹೋಗುವ ಕಾಲವು ಮುಂದಿರುವುದರಿಂದ ನಮ್ಮ ಪಂಚಾಯತಿಗೂ ಇತರ ಪಂಚಾಯತುಗಳಂತೆ ನಳ್ಳಿನೀರಿನ ಸರಬರಾಜು ತುಂಬಾ ಅಗತ್ಯವಾಗಿದೆ. ನಮ್ಮಲ್ಲಿ ನೀರಾಶ್ರಯವು ಇದೆ. ಸದಾ ನೀರಿರುವ ಹೊಳೆ ಕಳಾಯಿಯಲ್ಲಿದೆ. ಆವಳ, ಕಯ್ಯಾರು, ಪ್ರದೇಶಗಳಲ್ಲಿ ಹರಿಯುವ ತೋಡುಗಳು, ಗುಂಪೆಗುಡ್ಡೆಯ ಇಳಿಜಾರು ಪ್ರದೇಶದ ನೀರಾಶ್ರಯ ನಮ್ಮಲ್ಲಿದೆ. ಈ ನೀರಾಶ್ರಯಗಳನ್ನು ಸರಿಮಾಡಿ ಪೈವಳಿಕೆ, ಬಾಯಿಕಟ್ಟೆ, ನಗರ, ಜೋಡುಕಲ್ಲು, ಪೆರ್ಮುದೆ ಚೇವಾರು ಬಾಯಾರು ಪದವು ಮತ್ತು ಅಟ್ಟೆಗೋಳಿ ಎಂಬ ಸ್ಥಳಗಳಿಗೆ ನಳ್ಳಿ ನೀರಿನ ವ್ಯವಸ್ಥೆ ಮಾಡಬೇಕು. ಪಂಚಾಯತಿನ ಸಹಾಯದಿಂದ ಜಲ ಪ್ರಾಧಿಕಾರ (Water Authority)ದ ಮುಖಾಂತರ ನಡೆಸಿದರೆ ಅದರ ಖರ್ಚು ಕ್ರಮೇಣ ಬಳಕೆದಾರರಿಂದಲೇ ಒದಗಿ ಭರ್ತಿಯಾಗುವುದು. ಅಲ್ಲದೆ ಉಪಯೋಗದಲ್ಲಿ ಜಾಗ್ರತೆಯು ಬರುವುದು.

ನೀರಾಶ್ರಯ ವಿರುವಲ್ಲಿ ಪಂಪು ಜೋಡಿಸಿ ನಿರಂತರ ಪಂಪು ನಡೆಸಿದಲ್ಲಿ ಬೇಸಿಗೆಯಲ್ಲಿ ನೀರು ಬತ್ತಿ ಹೋಗಿ ಕಷ್ಟವಾಗುತ್ತದೆ. ಅದರ ಬಗ್ಗೆ ಮುಂಜಾಗ್ರತೆ ವಹಿಸಬೇಕು. ಬಡವರೇ ವಾಸಿಸುವ ಕಾಲನಿಗಳಿರುವಲ್ಲಿ ಸಾಕಷ್ಟು ಬಾವಿಗಳು ಇಲ್ಲದ ಪ್ರದೇಶದಲ್ಲಿ ತೆರೆದ ಬಾವಿಗಳ ಅಗತ್ಯ ಇನ್ನೂ ಇದೆ. ವರ್ಷದಲ್ಲಿ ಕಡಿಮೆ ಪಕ್ಷ 15ರಂತೆ ಮುಂದಿನ 5 ವರ್ಷಗಳಲ್ಲಿ 75 ಬಾವಿಗಳನ್ನು ಅಗೆದು ಕುಡಿಯುವ ನೀರಿನ ವ್ಯವಸ್ಥೆ ಮಾಡಬೇಕು. ಖಾಸಗಿ ಬಾವಿಗಳಿಗೂ ಧನಸಹಾಯವನ್ನು ವರಮಾನಕ್ಕನುಸಾರವಾಗಿ ನೀಡಬೇಕು. ಸಾರ್ವಜನಿಕ ಬಾವಿಗಳ ನೀರನ್ನು ಕುಡಿಯಲು ಹೊರತು ಕೃಷಿಗೆ ಉಪಯೋಗಿಸಬಾರದು. ಹೀಗೆ ಮುಂದಿನ ಯೋಜನೆಯಲ್ಲಿ ಕುಡಿಯುವ ನೀರಿನ ಕೊರತೆ ಇರಬಾರದು. ಕುಡಿಯುವ ನೀರಿಗೆ ಪ್ರಾಧಾನ್ಯತೆಯನ್ನು ನೀಡಬೇಕು.

ಆರೋಗ್ಯ : ಮನುಷ್ಯನಿಗೆ ಆರೋಗ್ಯಕ್ಕಿಂತ ಹೆಚ್ಚಿನ ಸಂಪತ್ತು ಬೇರೊಂದಿಲ್ಲ. ಆದುದರಿಂದ ಸರಕಾರ ತುಂಬಾ ಬಂಡವಾಳ ವ್ಯಯಮಾಡಿ ಬೃಹತ್ ಯೋಜನೆಯನ್ನೇ ಕೈಗೊಂಡಿದೆ. 2000ನೇ ಇಸವಿಗೆ ಎಲ್ಲರಿಗೂ ಆರೋಗ್ಯವೆಂಬ ಮುನ್ಸೂಚನೆ ಗಮನದಲ್ಲಿಟ್ಟು ಯೋಜನೆ ಕೈಗೊಂಡಿದೆ. ಆದರೆ ಜನತೆ ತನ್ನದೇ ಆದ ಜಾಗ್ರತೆ, ಹೊಂದಾಣಿಕೆ ಮತ್ತು ರೋಗ ಪರಿಹಾರ ಮಾರ್ಗ ನೋಡಬೇಕಾಗುತ್ತದೆ. ಪ್ರಕೃತ ನಮ್ಮ ಪಂಚಾಯತಿನ ಬಾಯಾರು ಪದವು ಎಂಬಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇದು ತೀರಾ ಸಣ್ಣ ಮಟ್ಟದಲ್ಲಿದ್ದು 17 ಮಂದಿ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುವರು. ಈ ವರ್ಷ 2851 ಹೊರ ರೋಗಿಗಳಿಗೆ ಔಷಧಿ ಲಭಿಸಿದೆ. ವಾಸ್ತವ್ಯಕ್ಕೆ ತಕ್ಕ ವ್ಯವಸ್ಥೆಯ ಕೊರತೆಯಿರುವುದರಿಂದ ವೈದ್ಯರು ಆಗಾಗ ವರ್ಗವಾಗಿ ಹೋಗುವರು. ಎಲ್ಲಾ ಮದ್ದುಗಳು ದೊರಕುವುದಿಲ್ಲ. ಕುಟುಂಬ ಕ್ಷೇಮದ ಸಿಬ್ಬಂದಿ ಮತ್ತು ಕಾರ್ಯಾಲಯ ಬಾಯಾರಿನ ಮುಳಿಗದ್ದೆ ಚೇವಾರು ಕುರುಡಪದವು ಮತ್ತು ಬಾಯಿಕಟ್ಟೆಯಲ್ಲಿದ್ದರೂ ಎಲ್ಲರಿಗೂ ಅವುಗಳ ಪ್ರಯೋಜನ ದೊರಕುವುದಿಲ್ಲ. ಮೊದಲಾದರೆ ಹೆರಿಗೆಗೆ ಸೂಲಗಿತ್ತಿ, ಮಿಡ್‌ವೈಫ್ ಮುಂತಾದವರಿದ್ದರು. ಅವರು ಈಗಿರುವುದಿಲ್ಲ. ಆದುದರಿಂದ ಹೆರಿಗೆಗಾಗಿ ದೂರ ಪ್ರದೇಶವಾದ ಉಪ್ಪಳ, ಕಾಸರಗೋಡು, ಮಂಗಳೂರು ಮೊದಲಾದ ಕಡೆಗೆ ಹೋಗಬೇಕಾಗುತ್ತದೆ. ಆದುದರಿಂದ ಈ ತೊಡಕುಗಳನ್ನು ನಿವಾರಿಸಲು ಪೈವಳಿಕೆ ಪಂಚಾಯತಿನ ಹೃದಯ ಭಾಗದಲ್ಲಿ ಒಂದು ಪ್ರಧಾನ ಆರೋಗ್ಯ ಕೇಂದ್ರವನ್ನು ಸ್ಥಾಪಿಸಬೇಕು. ಅದರಲ್ಲಿ ಹೊರ ರೋಗಿ ಮತ್ತು ಒಳರೋಗಿಗಳ ಶುಶ್ರೂಷೆ ನೀಡುವಂತಹ ಸೌಲಭ್ಯವಿರಬೇಕು. ಇದರ

ಅಧೀನದಲ್ಲಿ ಹೊರರೋಗಿಗಳಿಗೆ ಮುಳಿಗದ್ದೆ ಕುರುಡಪದವು ಮತ್ತು ಪೆರ್ಮುದೆಯಲ್ಲಿ ಒಂದೊಂದು ಆಸ್ಪತ್ರೆಯನ್ನು ಸ್ಥಾಪಿಸಬೇಕು. ಕುಟುಂಬ ಕಲ್ಯಾಣ ಕೇಂದ್ರವನ್ನು ಅಭಿವೃದ್ಧಿ ಪಡಿಸಬೇಕು. ಚಿಪ್ಪಾರು ಮತ್ತು ಚೇವಾರಿನಲ್ಲಿ ಒಂದು ಶಿಶು ಸಂರಕ್ಷಣಾ ಕೇಂದ್ರವನ್ನು ಸ್ಥಾಪಿಸಬೇಕು. ಒಂದು ಹೆರಿಗೆ ಆಸ್ಪತ್ರೆಯನ್ನು ಸ್ಥಾಪಿಸಬೇಕು.ಮತ್ತು ಹೋಮಿಯೋ,ಆಯುರ್ವೇದ ವೈದ್ಯ ಶಾಲೆ, ಆಸ್ಪತ್ರೆಗಳನ್ನು ಸ್ಥಾಪಿಸಬೇಕು. ಖಾಸಗಿ ಆಸ್ಪತ್ರೆ ಅಥವಾ ಸಂಘ ಸಂಸ್ಥೆಗಳು ನಡೆಸುವ ರೋಗ ಪರೀಕ್ಷಣಾ ವಿಧಾನಗಳಿಗೆ, ಔಷಧಿ ಮಾರುವ ಅಂಗಡಿಗಳಿಗೆ ಪ್ರೋತ್ಸಾಹ ಮತ್ತು ಕ್ರಮಾಗತವಾದ ಮನ್ನಣೆಗಳನ್ನು ನೀಡಬೇಕು. ಈ ಆರೋಗ್ಯ ಕೇಂದ್ರಗಳಲ್ಲಿ ವಿಶೇಷ ತಜ್ಞರನ್ನು ನೇಮಿಸಬೇಕು. ಈ ವರ್ಷ ಜಲಮಾನ್ಯ ರೋಗಿಗಳು 245, ವಾಯುಜನ್ಯ ರೋಗಿಗಳು 108, ಮತ್ತು ಪ್ರಾಣಿಜನ್ಯ ರೋಗಿಗಳು 6 ಮಂದಿ ಇದ್ದಾರೆ. ಪೋಷಕಾಹಾರದ ಕೊರತೆಯಿಂದ ಶಿಶುಗಳಿಗೂ, ಗರ್ಭಿಣಿ ಸ್ತ್ರೀಯರಿಗೂ ರೋಗ ಭಾದಿಸುವುದು. ಆದುದರಿಂದ ಬಡವರಿಗೆ ಧರ್ಮಾರ್ಥವಾಗಿ ಪೋಷಕಾಹಾರವನ್ನು ಒದಗಿಸಬೇಕು. ಎಲ್ಲಾ ಶಾಲೆಗಳಿಗೂ ಪ್ರಥಮ ಚಿಕಿತ್ಸಾ ಸಲಕರಣೆಗಳನ್ನು ಒದಗಿಸಬೇಕು. ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಸರಕಾರಿ ಆರೋಗ್ಯ ಕೇಂದ್ರದ ಮೂಲಕ ನಡೆಯಬೇಕು. ಆರೋಗ್ಯವೇ ಭಾಗ್ಯ.

ಸ್ವಚ್ಛತೆ : ಇದು ಆರೋಗ್ಯಕ್ಕೆ ನಿಕಟ ಸಂಬಂಧವಿರುವುದು. ವೈಯಕ್ತಿಕ, ಪರಿಸರ, ಬೀದಿ, ಸಂತೆ, ಅಂಗಡಿ ಮತ್ತು ಹೊಟೇಲುಗಳು ಸ್ವಚ್ಛತೆ ಮಟ್ಟಿಗೆ ಜಾಗ್ರತೆಯಲ್ಲಿರಬೇಕು. ಈಗ ನಮ್ಮ ಪಂಚಾಯತಿನಲ್ಲಿ ಒಟ್ಟು 2139 ಪಾಯಿಖಾನೆಗಳಿರುವುದು. ಅದರಲ್ಲಿ ಸೆಪ್ಟಿಕ್ ಟ್ಯಾಂಕ್ 55 ಇ.ಸಿ.ಪಿ. (E.C.P.) 1604 ಇತರ 480. ಮುಂದಕ್ಕೆ ಸೆಪ್ಟಿಕ್ ಟ್ಯಾಂಕ್ ಪಾಯಿಖಾನೆಗಳನ್ನು ನಿರ್ಮಿಸಲು ಜನರಿಗೆ ಪ್ರೋತ್ಸಾಹ ನೀಡಬೇಕು. ಬೆರಿಪದವು, ಪೆರ್ಮುದೆ, ಬಾಯಾರು ಸಹಕಾರಿ ನಗರ ಮುಳಿಗದ್ದೆ ಮತ್ತು ಪೈವಳಿಕೆ ಎಂಬಲ್ಲಿ ಸಾರ್ವಜನಿಕ ಶೌಚಾಲಯ ಮತ್ತು ಪಾಯಿಖಾನೆಗಳನ್ನು ಸ್ಥಾಪಿಸಬೇಕು.

ಆಹಾರ ಸಾಮಾಗ್ರಿಗಳ ಸ್ವಚ್ಛತೆಗಾಗಿ ಪಂಚಾಯತ್‌ಗೆ ಒಬ್ಬರು ಆಹಾರ ತಪಾಸಣಾಧಿಕಾರಿ (Food Inspector) ನ್ನು ನೇಮಿಸಬೇಕು. ಕೊಳಚೆ ಪ್ರದೇಶಗಳ ಸೊಳ್ಳೆ ನಿರ್ಮೂಲನಕ್ಕೆ ಸರಿಯಾದ ಕಾರ್ಯಕ್ರಮಗಳ ಮೂಲಕ ವ್ಯವಸ್ಥೆ ಮಾಡಬೇಕು. ಎಲ್ಲಾ ಶಾಲೆಗಳಿಗೂ ಪಾಯಿಖಾನೆ, ಮೂತ್ರದೊಡ್ಡಿಗಳ ವ್ಯವಸ್ಥೆ ಮಾಡಬೇಕು. ಸಾರ್ವಜನಿಕ ಸ್ಮಶಾನವನ್ನು ಸ್ಥಾಪಿಸಬೇಕು. ಸಣ್ಣ ಪುಟ್ಟ ಕಾರ್ಖಾನೆಗಳಿಂದುಂಟಾಗುವ ತ್ಯಾಜ್ಯ ವಸ್ತುಗಳನ್ನು ನಿರ್ಮೂಲನಗೊಳಿಸಿ ಪರಿಸರ ಮಾಲಿನ್ಯವನ್ನು ತಡೆಗಟ್ಟಬೇಕು. ಈ ರೀತಿ ಸ್ವಚ್ಛತೆಗೆ ಹೆಚ್ಚಿನ ಮುಂಜಾಗ್ರತೆ ವಹಿಸಿದರೆ ಆರೋಗ್ಯವನ್ನು ಒಂದು ಪರಿಧಿವರೆಗೆ ಸುಧಾರಿಸಬಹುದು.

ಜನನ ಮರಣದ ಪ್ರಮಾಣ ಈ ಕೆಳಗಿನಂತಿದೆ.

1995-96ರಲ್ಲಿ,

ಜನನ (1000ಕ್ಕೆ)	-	17.5
ಮರಣ (1000ಕ್ಕೆ)	-	4.5
ಜಲಜನ್ಯ ರೋಗ ಬಾಧಿತರು	-	70
ವಾಯುಜನ್ಯ ರೋಗ ಬಾಧಿತರು	-	30
ಕುಷ್ಠ ರೋಗಿಗಳು	-	2
ವಿಕಲಾಂಗರು	-	4
ಕುರುಡರು	-	4
ಕಿವುಡರು	-	1
ಮೂಕರು	-	1
ಚಲಿಸಲಾಗದವರು-	-	15
ಮಂದ ಬುದ್ಧಿಯವರು		
11ರಿಂದ 15 ವರ್ಷ	-	2
6 ವರ್ಷ	-	1

ಇಂತವರಿಗೆ ಪ್ರತ್ಯೇಕ ಶೈದ್ಧೆ ವಹಿಸಿ ಸರಕಾರದಿಂದ ಸಿಗುವ ಸಹಾಯ ಸೌಲಭ್ಯಗಳನ್ನು ಒದಗಿಸಿ ಕೊಡಬೇಕು.

ಸಾರಿಗೆ - ಇಂಧನ

ಈ ಪಂಚಾಯತಿನ ಇಂಧನ ಉಪಯೋಗವನ್ನು ಮೂರು ವಿಭಾಗಗಳಾಗಿ ವಿಭಾಗಿಸಬಹುದು.

1. ಗಾರ್ಹಿಕ ಉಪಯೋಗ

2. ಕಾರ್ಷಿಕ ಉಪಯೋಗ

3. ಕೈಗಾರಿಕಾ ಉಪಯೋಗ

ಮನೆಗಳಲ್ಲಿ ಬೆಳಕು ಮತ್ತು ಅಡಿಗೆಗಳ ಆವಶ್ಯಕತೆಗಾಗಿ ಮಾತ್ರ ಇಂಧನ ಆವಶ್ಯವಿರುವುದಾಗಿದೆ. ಅಡುಗೆ ಆವಶ್ಯಕ್ಕಾಗಿ ಘನರೂಪದಲ್ಲಿರುವ ಇಂಧನವನ್ನೇ ಹೆಚ್ಚಾಗಿ ಉಪಯೋಗಿಸುತ್ತಾರೆ. ಕಟ್ಟಿಗೆ ಮತ್ತು ತೆಂಗಿನ ಮರದ ಭಾಗಗಳು, ಗೆರಟೆ ಇತ್ಯಾದಿಯನ್ನು ಉಪಯೋಗಿಸುತ್ತಾರೆ.

ಬಹಳ ಕಡಿಮೆ ಮಂದಿ ಮಾತ್ರ L.P. ಗ್ಯಾಸ್ ಸಿಲಿಂಡರುಗಳನ್ನು ಉಪಯೋಗಿಸುತ್ತಾರೆ.

ಅದರಂತೆ ಚಿಮಿಣಿ ಸ್ಟೌವ್‌ಗಳನ್ನು ಉಪಯೋಗಿಸುವವರೂ ಕಡಿಮೆ ಮಂದಿ.

ಕಾಡುಗಳೆಲ್ಲ ನಾಶವಾಗಿ ನಾಡುಗಳಾಗುತ್ತಿರುವ ಕಾರಣ ಕಟ್ಟಿಗೆಗೆ ತುಂಬಾ ಕ್ಷಾಮವನ್ನು ಅನುಭವಿಸುತ್ತೇವೆ. ಅದರಂತೆ L.P. ಗ್ಯಾಸ್ ವಿತರಣೆ ಕುಂಬಳೆಯಿಂದ ಮಾತ್ರ ನಡೆಯುತ್ತದೆ. ಈ ಪಂಚಾಯತಿನ ಒಳ ಪ್ರದೇಶಗಳಿಗೆ ಗ್ಯಾಸ್ ಸಿಲಿಂಡರುಗಳನ್ನು ಕುಂಬಳೆಯಿಂದ ತರಲು ಕಷ್ಟವಾಗುತ್ತದೆ. ಗ್ಯಾಸ್‌ಗೆ ಬುಕ್ ಮಾಡಿದರೂ 3 ಯಾ 4 ವರ್ಷ ಕಳೆದೇ ಕನೆಕ್ಶನ್ ಸಿಗುವ ಕಾರಣ ಯಲ್.ಪಿ. ಗ್ಯಾಸ್‌ನ್ನು ವ್ಯಾಪಕವಾಗಿ ಉಪಯೋಗಿಸಲು ಸಾಧ್ಯವಾಗುತ್ತಿಲ್ಲ.

ಪರಿಹಾರ ಮಾರ್ಗಗಳು

1. ಸೂರ್ಯ ಪ್ರಕಾಶದಿಂದ ಪ್ರವರ್ತಿಸುವ Solar Panel System ವ್ಯಾಪಕವಾಗಿ ಉಪಯೋಗಿಸುವಂತೆ ಬೇಕಾದ ವ್ಯವಸ್ಥೆ ಮಾಡುವುದು.

2. ಕೃಷಿ ಪ್ರಧಾನ ಪ್ರದೇಶವಾದ ಕಾರಣ ಮತ್ತು ಧಾರಾಳ ಚಾನುವಾರುಗಳನ್ನು ಸಾಕುವ ಕಾರಣ ಜೈವಿಕ ಅನಿಲ (ಗೋಬರ್ ಗ್ಯಾಸ್) ವನ್ನು ಉಪಯೋಗಕ್ಕೆ ಬರುವ ಕಾರ್ಯಕ್ರಮಗಳನ್ನು ರೂಪಿಸುವುದು.

3. ಹೊಗೆಕೊಳವೆ ಉಪಯೋಗಿಸಿ ವೈಜ್ಞಾನಿಕವಾಗಿ ನಿರ್ಮಿಸಿದ, ಕಡಿಮೆ ಇಂಧನದಿಂದ ಉರಿಯುವ ಅಡುಗೆ ಒಲೆಗಳಿಗೆ ಪ್ರಚಾರ ಕೊಡುವುದು.

ಬೆಳಕು

ಬೆಳಕಿಗಾಗಿ ಈ ಗ್ರಾಮ ಪಂಚಾಯತಿನ ಹೆಚ್ಚಿನ ಸ್ಥಳದ ಕುಟುಂಬದವರೂ ವಿದ್ಯುತ್ತನ್ನೇ ಆಶ್ರಯಿಸಿರುವರು. ವಿದ್ಯುತ್ತಿನ ಕಡಿಮೆ ವೋಲ್ಟೇಜ್ ತುಂಬಾ ಸಮಸ್ಯೆಯನ್ನು ಉಂಟು ಮಾಡುತ್ತಿದೆ. ಸಂಜೆ ಗಂಟೆ 6 ರಿಂದ ರಾತ್ರಿ ಗಂಟೆ 10ರ ವರೆಗೆ ಪಂಚಾಯತಿನ ಹೆಚ್ಚಿನ ವಿದ್ಯುತ್ತಿನ ಲೈನುಗಳಲ್ಲಿ 100 ವೋಲ್ಟಿಗಿಂತ ಕಡಿಮೆ ವಿದ್ಯುತ್ ಮಾತ್ರ ಹರಿಯುವುದು.

ಈ ಪಂಚಾಯತಿನ ಎಲ್ಲಾ ವಾರ್ಡುಗಳಲ್ಲೂ, ವಿದ್ಯುತ್ ತಲುಪದ ಸ್ಥಳಗಳಲ್ಲಿ, ಈಗ ವಿದ್ಯುತ್ ಬೋರ್ಡ್ OYC. ಸ್ಕೀಮಿನಲ್ಲಿ ಹೇರುವ ಭೀಮುಗಾತ್ರದ ಮೊತ್ತವನ್ನು ತೆರಲು ಸಾಧ್ಯವಾಗದಿರುವುದರಿಂದ, ಹಲವರಿಗೆ ವಿದ್ಯುತ್. ಸಂಪರ್ಕ ಸಿಕ್ಕಿರುವುದಿಲ್ಲ.

ಪರಿಹಾರ

1. ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ ಹೆಚ್ಚಿಸುವುದು ಅಧಿಕ ಲೋಡ್ ಹೊತ್ತಿರುವ H.T. ಲೈನ್‌ಗಳನ್ನು ವಿಕೇಂದ್ರೀಕರಿಸುವುದು.

2. ವಿದ್ಯುತ್ ಸಿಗದ ಸ್ಥಳಗಳನ್ನು ವಿದ್ಯುದ್ದೀಕರಿಸಲು ಗ್ರಾಮ ಪಂಚಾಯತು ಪ್ರತ್ಯೇಕ ಕಾರ್ಯಕ್ರಮಗಳನ್ನು ರೂಪೀಕರಿಸುವುದು.

ಕೃಷಿ ಉಪಯೋಗಕ್ಕಾಗಿರುವ ಇಂಧನಗಳು

ಕೃಷಿ ಅಗತ್ಯಕ್ಕಾಗಿ ಪ್ರಧಾನವಾಗಿ ವಿದ್ಯುತ್, ಸೀಮೆಎಣ್ಣೆ ಡೀಸಿಲ್ ಮುಂತಾದುವುಗಳು ಉಪಯೋಗಿಸಲ್ಪಡುತ್ತವೆ. ವಿದ್ಯುತ್ತನ್ನು ಉಪಯೋಗಿಸುವವರು ವಿದ್ಯುತ್ ಕ್ಷಾಮ, ವಿದ್ಯುತ್ ತಲುಪದಿರುವುದು ಇತ್ಯಾದಿ ಕಷ್ಟಗಳನ್ನು ಇದುರಿಸುತ್ತಿರುವರು. ಸೀಮೆಎಣ್ಣೆ, ಡೀಸಿಲ್ ಮುಂತಾದ ಇಂಧನದ ಬೆಲೆ ಜಾಸ್ತಿಯಾಗಿರುವುದರಿಂದ ತೊಂದರೆ ಪಡುತ್ತಾರೆ.

ಪರಿಹಾರ

1. ವಿದ್ಯುತ್ತಿನ ಸರಬರಾಜು ಕಾರ್ಯಕ್ಷಮತೆಯಿಂದ ನಡೆಯುವಂತೆ, ಪಂಚಾಯತಿನ ತಳಹದಿಯಲ್ಲಿ ಪ್ರತ್ಯೇಕ ವ್ಯವಸ್ಥೆ ಮಾಡುವುದು.

2. ವಿದ್ಯುತ್ ಸರಬರಾಜು, ಇನ್ನೂ ದೊರೆಯದ ಕಡೆಗಳಿಗೆ ಪಂಚಾಯತಿನ ಮೇಲ್ನೋಟದಲ್ಲಿ ವಿದ್ಯುತ್ ಸಿಗುವಂತೆ ಪದ್ಧತಿಗಳನ್ನು ಮಾಡುವುದು.

ಕೈಗಾರಿಕೆಗಳಿಗೆ ಇಂಧನ

ಈ ಪಂಚಾಯತಿನಲ್ಲಿ ಬೆರಳೆಣಿಕೆಯಷ್ಟು ಕೈಗಾರಿಕಾ ಸಂಸ್ಥೆಗಳು ಮಾತ್ರ ಇವೆ. ಬಿಸ್ಕೆಟ್, ಮರ, ಧಾನ್ಯ ಇತ್ಯಾದಿಗಳಿಗೆ ಸಂಬಂಧಿಸಿದಂತೆ ಕೈಗಾರಿಕೆಗಳಿವೆ. ವಿದ್ಯುತ್ತಿನಿಂದ ನಡೆಸುವ ಯಂತ್ರಗಳಿರುವ, ಕೈಗಾರಿಕೆಗಳಿವೆ. ಮೇಲೆ ಹೇಳಿದವುಗಳಲ್ಲಿ ಹೆಚ್ಚಿನವುಗಳೂ ಡೀಸಿಲ್‌ನಿಂದ ನಡೆಸುವ ಒಂದೋ ಎರಡೋ ಧಾನ್ಯದ ಮತ್ತು ಎಣ್ಣೆ ಮಿಲ್ಲುಗಳೂ ಇವೆ.

ಪಂಚಾಯತಿನ ಕೈಗಾರಿಕಾಭಿವೃದ್ಧಿಗೆ ಈ ಕೆಳಗಿನ ಸಲಹೆ, ಸೂಚನೆಗಳನ್ನು ಸಮರ್ಪಿಸುತ್ತೇವೆ.

1. ಕೈಗಾರಿಕೆಗಳಿಗೆ ಪೂರೈಸುವ ವಿದ್ಯುತ್ತಿನ ಜವಾಬ್ದಾರಿಯನ್ನು ಪಂಚಾಯತು ವಹಿಸುವುದು.

2. ಕೈಗಾರಿಕೆಗಳ ಆವಶ್ಯಕತೆಗಳಿಗಾಗಿರುವ ವಿದ್ಯುತ್ ಜನರೇಟರುಗಳಿಗೆ ಸಬ್ಸಿಡಿ ಸಿಗುವಂತೆ ಮಾಡುವುದು.

ಈ ಪಂಚಾಯತ್ತಿನ ಎತ್ತರವಾದ "ಪೊಸಡಿ ಗುಂಪೆ" ಯಲ್ಲಿ ಗಾಳಿಯಂತ್ರಗಳ ಸಹಾಯದಿಂದ ಶಕ್ತಿಯುತ್ಪಾದಿಸುವ ವ್ಯವಸ್ಥೆಯನ್ನು ಮಾಡುವ ಸಾಧ್ಯತೆಯನ್ನು ಪರಿಗಣಿಸುವುದು.

ವಿದ್ಯುದ್ದೀಕರಿಸಬೇಕಾದ ಸ್ಥಳ

ಕುರುಡಪದವು

ಪೈವಳಿಕೆ ಗ್ರಾಮ ಪಂಚಾಯತ್ ವ್ಯಾಪ್ತಿಯೊಳಗೆ ಪೆಟ್ರೋಲ್ ಬಂಕ್ ಆರಂಭಿಸುವುದು.

ಸಾರಿಗೆ ವ್ಯವಸ್ಥೆ

ಪೈವಳಿಕೆ ಪಂಚಾಯತಿನ ವಿಸ್ತೀರ್ಣವನ್ನು ಹೋಲಿಸಿದರೆ ಇರುವ ಮಾರ್ಗಗಳು ಬಹಳ ಕನಿಷ್ಠ ಪ್ರಮಾಣದಲ್ಲಿದೆ. ಪಂಚಾಯತಿನ ರಸ್ತೆಯ ಉದ್ದ ಒಟ್ಟು 161.380 KM ಅದರಲ್ಲಿ ಪಂಚಾಯತು ರಸ್ತೆ 143.380km. ಡಾಮಾರು ರಸ್ತೆ, 21.360km ಮತ್ತು ಉಳಿದ 122.00km ಮಣ್ಣಿನ ರಸ್ತೆಯೂ ಸೇರಿದೆ.

ಕಳೆದ ಐದು ವರ್ಷಗಳಲ್ಲಿ ರಸ್ತೆ ನಿರ್ಮಾಣ ಮತ್ತು ದುರಸ್ತಿ ಬಗ್ಗೆ ಜುಮ್ಲಾ ರೂ. 2,96059-71ನ್ನು ಪಂಚಾಯತು ವೆಚ್ಚ ಮಾಡಿದೆ. ಪಂಚಾಯತಿನ ಭೂಪ್ರಕೃತಿ ಮತ್ತು ವಿಸ್ತೀರ್ಣವನ್ನು ನೋಡುವಾಗ ಈ ಹಣವು ಬಹಳ ಕಡಿಮೆಯಾಗಿದೆ.

ಪಂಚಾಯತಿನ ರಸ್ತೆ ಸೌಕರ್ಯವು ಬಹಳ ಶೋಚನೀಯಾವಸ್ಥೆಯಲ್ಲಿದೆ. ಹೊಸ ರಸ್ತೆ ನಿರ್ಮಾಣಕ್ಕೂ, ಇದ್ದ ರಸ್ತೆಗಳ ನಿರ್ವಹಣೆಗೂ ಪಂಚಾಯತಿನಲ್ಲಿ ಹಣದ ಕೊರತೆಯಿಂದ ಅಸಾಧ್ಯವಾಗಿದೆ. ರಸ್ತೆಗಳ ಬದಿಯ ಚರಂಡಿಯ ವ್ಯವಸ್ಥೆಯು ಹೆಚ್ಚಿನ ರಸ್ತೆಗಳಲ್ಲೂ ಇಲ್ಲದಿರುವುದರಿಂದ ಮಳೆಗಾಲ ಕಳೆದೊಡನೆ ಎಲ್ಲಾ ರಸ್ತೆಗಳೂ ಸಂಚಾರಕ್ಕೆ ಅಯೋಗ್ಯ ವಾಗುವಷ್ಟು ಹಾಳಾಗುತ್ತವೆ. ರಸ್ತೆಗಳಲ್ಲಿ ಅಲ್ಲಲ್ಲಿ ಸಣ್ಣ ಸಣ್ಣ ಗಳ ಮೋರಿ (ಕಲ್ವರ್ಟ್)ಗಳ ಕೊರತೆಯೂ ಮಾರ್ಗ ಹಾಳಾಗುವುದಕ್ಕೆ ಕಾರಣವಾಗಿದೆ.

ಹೊಸ ರಸ್ತೆ ನಿರ್ಮಾಣ ಮತ್ತು ಹಳೆ ರಸ್ತೆಗಳ ದುರಸ್ತಿ ಕಾರ್ಯಗಳಿಗೆ ಪ್ರತ್ಯೇಕ ಪ್ರತ್ಯೇಕ ಮೊಬಲಗುಗಳನ್ನು ಪ್ರತ್ಯೇಕಿಸಿಡಬೇಕು.

ಪೈವಳಿಕೆ ಪಂಚಾಯತಿನಲ್ಲಿ ರಸ್ತೆ ಸೌಕರ್ಯಗಳು ತುಂಬಾ ಕಡಿಮೆಯಾದ ಕಾರಣ ಹೊಸ ರಸ್ತೆಗಳ ನಿರ್ಮಾಣದ ತಖ್ತೆಯು ತುಂಬಾ ದೀರ್ಘವಾಗಿದೆ.

ತಖ್ತೆಯು ಈ ಕೆಳಗಿನಂತಿದೆ.

1. ವಾದ್ಯಪಡ್ಪು ಪಾಡಿ ಬಾಯಿಕಟ್ಟೆ
2. ಕಂಬಾರ್ ನಿಂದ ಒಡುವಾರು ಜುಮ್ಮಾ ಮಸೀದಿ
3. ಪೆರ್ಮುದೆ -ಕಂಬಾರು ರಸ್ತೆಯಿಂದ ಆಲಂಗಾರು, ಜುಮ್ಮಾ ಮಸೀದಿಗೆ ಕಾಲುದಾರಿಯನ್ನು ರಸ್ತೆಯನ್ನಾಗಿ ಪರಿವರ್ತಿಸುವುದು.
4. ಕುಂಡಲದಿಂದ ಮುನ್ನೂರು ಜುಮ್ಮಾ ಮಸೀದಿ ರಸ್ತೆಯ ಕಾಮಗಾರಿಯನ್ನು ಪೂರ್ಣಗೊಳಿಸುವುದು.
5. ಇಟ್ಟಿಗೋಳಿ ಅಡ್ಕದಿಂದ ಆವಳ ಕಲ್ಲಡ್ಕ ರಸ್ತೆ,
6. ಚೇರಾಲ್‌ನಿಂದ ಗುಂಪೆಗೆ
7. ಬಾಯಿಕಟ್ಟೆ - ಎರ್ಪಕಟ್ಟೆ ಪರಂಬಳ
8. ನೂತಿಲ ದಿಂದ ಚೇವಾರಿಗೆ
9. ದಳಿಕುಕ್ಕು ಪಂಚಲಿಂಗೇಶ್ವರ ಶಾಲೆಯ ಸಮೀಪವಾಗಿ ದಳಿಕುಕ್ಕು -ನೇರಳೆ ಕಟ್ಟೆ ರಸ್ತೆ
10. ಕುದುರೆ ಡ್ಕ, ಜತ್ತಿ, ತೆಂಕ ಮಜಲು ದಾರಿಯಾಗಿ ಬಳ್ಳೂರಿಗೆ - 3km ರಸ್ತೆ
11. ಬಾಯಾರ್ ಸೊಸೈಟಿ -ಹಿರಣ್ಯ ಮುಳಿಗದ್ದೆ ರಸ್ತೆ
12. ಕುರುಡಪದವು - ಅಡ್ಡದಮೂಲೆ-ಮುನ್ನಿಪ್ಪಾಡಿ (3km)
13. ನೆಕ್ಕರೆ ಕ್ಯಾಡು -ನೀರ್ಪಂತಿ
14. ಮಾಣಿ -ಪುಟ್ಟಮಾಣಿ
15. ಕೊಮ್ಮಂಗಳ -ಬರಂಗಾಯ
16. ಕುರುಡಪದವು -ಅಡ್ಡದಮೂಲೆ -ಮುನ್ನಿಪ್ಪಾಡಿ
17. ಹುಳಿಯಡಿ-ಅಂಬಿಕಾನ-ನೂಯಿತಿಲ
18. ಅಜ್ಜಿಕುಮೇರು -ಎಡಕ್ಕಾನ
19. ಪರಪ್ಪು -ಮೇರ್ಕಳ
20. ಕಯ್ಯಾರು - ಹಿತ್ತಿಲು 5KM
21. ಅಂಗಡಿಮಾರು - ಸುಬೆಂಬಳ 4KM

ಬಸ್ ಸಂಚಾರ ವಿರುವ ತುರ್ತಾಗಿ ಡಾಮರೀಕರಣ ಆಗಬೇಕಾದ ರಸ್ತೆಗಳು

1. ಸರ್ಕುತ್ತಿ ಕನಿಯಾಲ ಧರ್ಮತ್ತಡ್ಕ 7.640km
2. ಪೆರಿಯಡ್ಕ -ಮುನ್ನೂರು ರಸ್ತೆ 3.85km
3. ಕುಂಟೆಂಗಿರಡ್ಕ -ಸುಬ್ಬಯ್ಯ ಕಟ್ಟೆ ಮಂಡೆಕಾಪು 2km
4. ಬೆರಿಪದವು -ಬಳ್ಳೂರು 2km
5. ಸರ್ಕುತ್ತಿ ಸಜಂಕಿಲ 1/2 km

ಡಾಮರೀಕರಣಕ್ಕೆ ಪರಿಗಣಿಸಬೇಕಾದ ರಸ್ತೆಗಳು

1. ಉರ್ಮಿ -ಕುರುಡ ಪದವು 5km
2. ಕಯ್ಯಾರು ಪರಂಬಳ- ಬೊಳಂಪಾಡಿ ಜೋಡುಕಲ್ಲು 3 1/2km
3. ಬಾಯಾರು ಸೊಸೈಟಿ -ಆವಳ 2 1/2 km
4. ಸಜಂಕಿಲ -ಚೇವಾರು 5km
4. ಪೈವಳಿಕೆ - ಮರಿಕ್ಕೆ ರಸ್ತೆ 5km
5. ಕಾಯರ್‌ಕಟ್ಟೆಯಡಿ ನೂತಿಲ ಜುಮ್ಮಾ ಮಸೀದಿ ರಸ್ತೆ

ಅಭಿವೃದ್ಧಿ ಸಹಿತ ಡಾಮರೀಕರಣಕ್ಕೆ ಅವಶ್ಯಕತೆ ಇರುವ ರಸ್ತೆಗಳು

1. ಕಾಂತಿಲ	-	ಕುರುಡಪದವು
2. ಕುರುಡಪದವು	-	ಸಾಯ
3. ಕುರುಡಪದವು	-	ಅಶ್ವತ್ಥಡ್ಕ
4. ಮಾಸ್ ಕುಮೇರಿ	-	ಅಡ್ಕತ್ತಿಮಾರ್ ಖಂಡಿಗೆ
5. ಚಿಪ್ಪಾರು	-	ಪದವು
6. ಕಾಯರ್‌ಕಟ್ಟೆ	-	ಅಂಬಿಕ್ಕಾನ
7. ಪದವು	-	ಬಾಯಾರ್ ಅಡ್ಕ (ತಲಂಗಳ)
8. ಪೈವಳಿಕೆ	-	ಚೇವಾರ್(PWD)
9. ಬಾಯಿಕಟ್ಟೆ	-	ಮೀಂಜ (ಕಳಾಯಿ)
10. ಪದವು	-	ಸರ್ಕುತ್ತಿ
11. ಸರ್ಕುತ್ತಿ	-	ಸಜಂಕಿಲ

12. ಸರ್ಕುತ್ತಿ - ಕನಿಯಾಲ

13. ಬಾಯಾರ್ - ಕುರುಡಪದವು

14.ಮುಳಿಗದ್ದೆ - ಬೆರಿಪದವು)(PWD)

14. ಪೆರುವೋಡಿ - ಪಾದೆಕಲ್ಲು

15. ಬದಿಯಾರು - ಬಾಯಾರ್ ಟೆಂಪ್‌ಲ್

16. ಪೆಲತ್ತಕಟ್ಟೆ - ತಲಂಗಳ

17. ಕುರುಡಪದವು - ಪೆರ್ಲ

18. ಕೊಮ್ಮಂಗಳ - ಕಳಾಯಿ

19. ಸಜಂಕಿಲ - ಧರ್ಮತ್ತಡ್ಕ

20. ಬೆರಿಪ್ಪದವು - ಪೊದ್ದೋಟುಮೊಗರು ಬಳ್ಳೂರು

21. ಮುಳಿಗದ್ದೆ - ಕಲ್ಲುಗದ್ದೆ

22. ಮುಳಿಗದ್ದೆ - F.W.Centre BAYAR

23. ಪೆರ್ಲ - ಅಮ್ಮೇರಿ

24. ಕಾಯರ್‌ಕಟ್ಟೆ - ನೂತಿಲ

25. ಬಾಯಿಕಟ್ಟೆ - ಏದಾರ್ ಹರಿಜನ ಕೊಲನಿ

26. ಬಾಯಿಕಟ್ಟೆ - ಕಳ್ಳಿಗೆ

27. ಬಾಯಿಕಟ್ಟೆ - ಓಡಕಡವು (PWD)

28. ಮಾಸ್‌ಕುಮೇರಿ - ಉರ್ಮಿ

29. ಕೊಮ್ಮಂಗಳ - ಅಮ್ಮೇರಿ

30. ಧರ್ಮತ್ತಡ್ಕ - ಕನಿಯಾಲ್‌ತ್ತಡ್ಕ

31. ಕೊಕ್ಕೆಜಾಲ್ - ಕಯ್ಯಾರ್ ಮಸೀದಿ

32. ಸುಬ್ಬಯ್ಯ ಕಟ್ಟೆ - ಶಾಂತಿಹಿತ್ತಿಲು

33. ಕರುವಾಜೆ - ಕೊಬ್ಬಿ ಕರುವಾಜೆ ಜಾರ

34. ಅಮ್ಮೇರಿ - ಅಮ್ಮೇರಿಬೈಲ್

35. ಏದಾರು - ಕುಕ್ಕೆಬೆಟ್ಟು ಪೆರಿಯಪ್ಪಾಡಿ

36. ಬೋಳಂಗಳ - ಪಲ್ಲೆಕೂಡಲು

37. ಕೋರಿಕ್ಕಾರ್ - ಅಜ್ಜೋಡು

38. ಕನಿಯಾಲ್‌ತ್ತಡ್ಕ - ನೆಕ್ಕಿಗುಳಿ

39. ಕನಿಯಾಲ - ಉಳುವಾನ

40. ಕಾಂತಿಲ - ಬೋಳುಗುಡ್ಡೆ

41. ಅಡ್ಕತ್ತಿಮಾರ್ - ಕಡೆಂಕೋಡಿ

42. ಕಾಡೂರು - ಗೋಳಿಕಟ್ಟೆ

43. ಪೈವಳಿಕೆ - ಬೀಡುಬೈಲು

44. ಕೆರೆಮೂಲೆ - ನಿಡುವಾಜೆ

45. ಧರ್ಮತ್ತಡ್ಕ - ನೆಕ್ಕಿಗುಳಿ

46. ಪಾಲೆಮೂಲೆ - ಕುಳಿಯಾರ್

47. ಬಾಯಾರ್ G.D. - ಉಳುವಾನ

48. ಜೋಡುಕಲ್ಲು - ಕಯ್ಯಾರ್ ಟೆಂಪಲ್

49. ಅಡ್ಕತ್ತಿಮಾರ್ - ಕೊಲ್ಲೂರಮೂಲೆ

50. ಕುಂಟುಕೊಳಂಜಿ - ಜಾರ ಪದವು

51. ಅಮ್ಮೇರಿ - ಕೂಡೇಲು

52. ಚಿಪ್ಪಾರ್‌ಪಳ್ಳಿ - ಚಿಪ್ಪಾರ್‌ಗರಡಿ

53. ಕಟ್ಟಿದ ಮನೆ - ಚಿತ್ತಾರಿ

54. ಕೊಲ್ಲೂರಮೂಲೆ - ಚಿಪ್ಪಾರ್ ಎ.ಎಲ್.ಪಿ. ಸ್ಕೂಲ್

55. ಚಿಪ್ಪಾರ್ ಪಳ್ಳಿ - ಚಿಪ್ಪಾರ್‌ತೋಡು

56. ಪೊನ್ನತ್ತೋಡು - ಗುಳಿಗಬನ

57. ಕೂಡೇಲ್ - ಸಿರಂತ್ತಡ್ಕ

58. ಸುಬ್ಬಯ್ಯ ಕಟ್ಟೆ - ಮಂಡೆಕಾಪು

59. ಮಂಡೆಕಾಪು - ಕಾಪು

60. ಕೊಕ್ಕೆಜಾಲು - ಗುಳಿಗಬನ

61 ಅಟ್ಟಗೋಳಿ - ಕೊಳಂಜ

62. ಪೆರಿಯಡ್ಕ - ಕುಂಡೇರಿ

63. ಕಯ್ಯಾರ್‌ಸ್ಕೂಲ್ - ಅಶ್ವತ್ಥಕಟ್ಟೆ

64. ಅಜ್ಜೋಡು - ಶಾಂತಿ ಹಿತ್ತಿಲು

65. ಜೋಡುಕಲ್ಲು - ಓಲಸರಿಗದ್ದೆ

66. ಕನಿಯಾಲ - ಮಾಣಿಲ ಫೆರಿ

67. ಕನ್ನಾಡಿಪ್ಪಾರೆ - ಸರೋಳ್‌ಯ

68. ಪೆರ್ಮುದೆ - ಎಡಕ್ಕಾನ

69. ಜೋಡುಕಲ್ಲು - ಸೊಂದಿ

70. ಕೆರೆಮೂಲೆ-ಉಳುವಾನ - ಉಳುವಾನಮಠ

71. ಕುದ್ರೆಕೂಡ್ಲು - ಪೈವಳಿಕೆ

72. ಅಪ್ರೋಚ್‌ರೋಡ್ ಪಂಚಾಯತ್ ಆಫೀಸ್

73. ಪಟ್ಲ - ಚನ್ನಿಕುಡಾಲ್

74. ಪೆರ್ಮುದೆ - ಮುನ್ನೂರು

75. ಬಾಯಾರ್‌ಪದವು - ಬಾಯಾರ್ ಸರ್ವಿಸ್ ಕೊಪರೇಟಿವ್ ಬ್ಯಾಂಕ್

76. ಬಿಲ್ಲಾರಕೋಡಿ - ಅವಳ

77. ಕುಟ್ಟಿಕುಮೇರಿ - ಗುಂಪೆ

78. ಕೊಕ್ಕೆಜಾಲ್ - ಮೇರ್ಲ

79. ಮುಳಿಗದ್ದೆ ಹೆಲ್ತ್‌ಸೆಂಟರ್ - ಸುನ್ನಾಡ
80. ಕಯ್ಯಾರ್‌ಚರ್ಚ್ - ಕನ್ನಡಚಾಲ್
81. ಏದಾರ್ - ಎರ್ಪಕಟ್ಟೆ
82. ಉರ್ಮಿಬೈಲು - ಉರ್ಮಿ
83. ಮೈಲುಕಲ್ಲು - ಎರ್ಪಕಟ್ಟೆ
84. ಪೊರಂಟನಡ್ಕ - ಮುನ್ನೂರು
85. ಪೊರಂಟನಡ್ಕ - ಒಡುವಾರ್
86. ಪೆರ್ಮುದೆ - ಎಡಕ್ಕಾನ
87. ಕುಂಡಚ್ಚಕಟ್ಟೆ - ಶಾಂತಿಯೋಡು
88. ಗಾಳಿಯಡ್ಕ - ಮಾಣಿಪ್ಪಾಡಿ
89. ನೆತ್ತರಗುಳಿ - ಕುಳಿಯಾರ್
90. ಕಳಾಯಿಬೈಲು - ಗುಂಪೆ
91. ಪೆಲ್ತಮೂಲೆ - ಮಾಣಿತ್ತೋಡಿ
92. ಮೂಂಕೋಡಿ - ಬಂಡಿಮಾರ್
93. ಕಯ್ಯಾರ್ ಚರ್ಚ್ - ಕಯ್ಯಾರ್ ಟೆಂಪಲ್
94. ಮುಳಿಗದ್ದೆ - ಕಲ್ಲಕಟ್ಟ
95. ಪುರಾಲ್ - ಕೆಲ್ಸಿಮೂಲೆ
96. ಪಲ್ಲೆಕೂಡಲ್ - ಉರ್ಮಿ ಹರಿಜನ ಕೊಲನಿ
97. ಪೆಲತ್ತಡ್ಕ - ನೂತಿಲ
98. ಅಪ್ರೋಚ್‌ರೋಡ್ -ಪೈವಳಿಕೆ ಕಟ್ಟದ ಮನೆ-ಕುದ್ರೆಕೂಡ್ಲು
99. ಪೆರ್ಮುದೆ - ಎಡಕ್ಕಾನ II reach
100. ಕೊಮ್ಮಂಗಳ - ಬದಿಮೂಲೆ
101. ಬೆರಿಪದವು-ಬಳ್ಳೂರು - ಕನಿಯಾಲ
102. ಬಳ್ಳೂರು - ಉದ್ದಡ್ಕ
103. ಕಾಯರ್‌ಕಟ್ಟೆ - ಮಾಣಿಪ್ಪಾಡಿ
104. ಕೊಮ್ಮಂಗಳ - ಬದಿಮೂಲೆ (II Rd.)
105. ನಾರ್ಣಕೋಡಿ - ಪುರಾಲ್
106. ಬಾಯಿಕಟ್ಟೆ - ಪೊಳ್ಳಾರ್‌ಕ್ಕೋಡಿ
107. ಪೆರಿಯಡ್ಕ - ಉದ್ಯಂತಿಮಾರ್
108. ಮದಕಟ್ಟೆ - ಮರಿಕ್ಕೆ
109. ಚೇವಾರ್ - ಬೀಡುಬೈಲು
110. ಕಲ್ಲಗದ್ದೆ - ನೀರ್‌ಚಾಲ್
111. ಸುನ್ನಾಡ - ಕಲ್ಲಕಟ್ಟ
112. ನೆತ್ತರ ಗುಳಿ - ನಿಡುವಾಜೆ
113. ಪೆರುವೋಡಿ - ತಾಳ್ತಜೆ
114. ಕುಟ್ಟಿಕುಮೇರಿ - ಮರಿಕ್ಕೆ
115. ಸುನ್ನಾಡ - ತಿಮ್ಮಡ್ಕ
116. ಸಿರಂತ್ತಡ್ಕ - ಕಾಡೂರು
117. ಕನಿಯಾಲ - ಒತ್ತರಬೈಲು
118. ಪಟ್ಲ - ಪೆರಿಯಪ್ಪಾಡಿ
119. ಆವಳ ಮಠ - ಇಟ್ಟಿಗೋಳಿಯಡ್ಕ
120. ಕುರುಡಪದವು - ಬಂಡಿಮಾರ್
121. ಕುದ್ರೆಕೂಡ್ಲು - ಬತ್ತೇರಿ
122. ಕಟ್ಟದ ಮನೆ - ದೇವಕಾನ
123. ಪರಂಬಳ - ಕಯ್ಯಾರ್
124. ಇಟ್ಟಿಗೋಳಿಯಡ್ಕ - ಪಾವಲ್‌ಕೋಡಿ
125. ಬಳ್ಳೂರ್ - ಕಟ್ಟತ್ತಾರು I reach
126. ಬಳ್ಳೂರ್ - ಕಟ್ಟತ್ತಾರು II reach
127. ಪದವು - ಕುರುವೇರಿ
128. ಬಳ್ಳೂರ್ - ಕಲ್ಲಗದ್ದೆ
129. ಕಟ್ಟತ್ತಾರು - ಮುಂಡೋಳಿ
130. ಗುಂಡದಪದವು - ಅಂಬಿಕ್ಕಾನ
131. ಕಟ್ಟತ್ತಾರು - ಮುಂಡೋಳಿ II reach
135. ಪಳ್ಳಕುಡೆಲು - ಅಡ್ಕ
136. ಗಾಳಿಯಡ್ಕ - ಆವಳ -ಇಟ್ಟಿಗೋಳಿಯಡ್ಕ
137. ಅಶ್ವತ್ಥ ಕಟ್ಟೆ - ಮೇರ್ಲ
138. ಕುಬಣೂರು - ಬೈತಾಡಿ
139. ಆಚೆಕರೆ - ಬತ್ತೇರಿ
140. ಕುಬಣೂರು - ಪಚ್ಚಂಬಳ
141. ಹೊಸಮೂಲೆ - ಮುಳಿಗದ್ದೆ
142. ಕಾಂತಿಲ - ಮುನ್ನೂರು
143. ಬೊಳಂಪಾಡಿ - ಕಯ್ಯಾರ್
144. ಗಾಳಿಯಡ್ಕ ಆವಳ - ಇಟ್ಟಿಗೋಳಿಯಡ್ಕ
145. ಕಾಪು - ಚೌವ್ವಾಲ್
146. ಗಾಳಿಯಡ್ಕ ಆವಳ - ಇಟ್ಟಿಗೋಳಿಯಡ್ಕ II reach
147. ಗೋವಿಂದಮೂಲೆ - ಕಡೆಂಕೋಡಿ
148. ಮೈಲುಕಲ್ಲು - ಹಿತ್ತಿಲು
149. ಆವಳ ಗಾಳಿಯಡ್ಕ - ಇಟ್ಟಿಗೋಳಿಯಡ್ಕ II reach
150. ಚೇವಾರ್ ಆವಳ - ದುರ್ಗಾಪರಮೇಶ್ವರಿ ಮಠ

151. ಬೊ ಳಂಪಾಡಿ - ಕಯ್ಯಾರ್ ಟೆಂಪಲ್‌ರೋಡ್ (IInd Reach)

152. ಬಾಯಿಕಟ್ಟೆ - ಪೊಳ್ಳರಕೋಡಿ

153. ಕುಂಡಾಲ - ಮುನ್ನೂರು (IInd Reach)

154. ಬಾಯಿಕಟ್ಟೆ - ಪೊಳ್ಳಾರಕೋಡಿ (IInd reach)

155. ಎಡಕ್ಕಾನ - ನೆಕ್ಕರೆ ಕ್ಯಾಡ್ (Ist reach)

156. ಕುರುವೇರಿ ಹರಿಜನ ಕೊಲನಿ

157. ಸಜಂಕಿಲ - ಆವಳ ದುರ್ಗಾಪರಮೇಶ್ವರಿ ಟೆಂಪಲ್

158. ಬಾಯಿಕಟ್ಟೆ - ಪೊಳ್ಳಾರ ಕೋಡಿ (Third reach)

159. ಆವಳ ಗಾಳಿಯಡ್ಕ - ಇಟ್ಟಿಗೋಳಿಯಡ್ಕ (Fourth Reach)

160. ಅಡ್ಕ - ವಾದ್ಯ ಪಡ್ಪು (First Reach)

161. ಮಂಡೆಕಾಪು - ಮೇರ್ಕಳ

162. ಬೇವಾರ್ - ಆವಳ ದುರ್ಗಾಪರಮೇಶ್ವರಿ ಮಠ (II reach)

163. ಅಡ್ಕ - ವಾದ್ಯಪಡ್ಪು (II reach)

164. ನೀರ್ಚಾಲ್ - ತೆಂಕ ಮಜಲು

165. ಕುಂಡಾಲ - ಮುನ್ನೂರ್ (III reach)

166. ಬಾಯಿಕಟ್ಟೆ - ಪೊಳ್ಳರಕೋಡಿ (IV reach)

167. ಬೇವಾರ್ - ಚಿಕ್ಕತೋಟ (I reach)

168. ಬೇವಾರ್ - ಚಿಕ್ಕತೋಟ (II reach)

169. ಬೇವಾರ್ - ಚಿಕ್ಕತೋಟ (III reach)

170. ತಿಮ್ಮಡ್ಕ - ಕಲ್ಲಕಟ್ಟ

171. ಗಾಳಿಯಡ್ಕ - ಇಟ್ಟಿಗೋಳಿಯಡ್ಕ V reach

172. ಗಾಳಿಯಡ್ಕ - ಇಟ್ಟಿಗೋಳಿಯಡ್ಕ VI reach

173. ಧರ್ಮತ್ತಡ್ಕ - ಕರುವಾಜೆ Ireach

174. ಹುಳಿಯಡಿ - ನೂಯಿತಿಲ



ವಸತಿ ಮತ್ತು ಸಾಮಾಜಿಕ ಕ್ಷೇಮ

ಆರ್ಥಿಕವಾಗಿಯೂ ವಿದ್ಯಾಭ್ಯಾಸ ಪರವಾಗಿಯೂ, ಸಾಂಸ್ಕೃತಿಕವಾಗಿಯೂ ಈ ಪಂಚಾಯತ್ ತೀರ ಹಿಂದುಳಿದುದಕ್ಕೆ ಕಾರಣ ಇಲ್ಲಿನ ಜನತೆಗೆ ಪ್ರಾಥಮಿಕ ಅವಶ್ಯಕತೆಗಳು ಕಮ್ಮಿಯಾಗಿರುವುದೇ ಆಗಿರುತ್ತದೆ. ಜನತೆಗೆ ವಾಸಿಸಲು ಯೋಗ್ಯವಾಗಿರುವ ಮನೆಗಳು ಈ ಪಂಚಾಯತ್‌ನಲ್ಲಿ ಶೇಕಡಾ 40 ಮಾತ್ರ ಇದೆ. ಸಾಧಾರಣ 30% ಜನರಿಗೆ ಸ್ವಂತ ಮನೆಗಳೇ ಇರುವುದಿಲ್ಲ. ಇವರೆಲ್ಲ ಕೃಷಿ ಕೂಲಿ ಕಾರ್ಮಿಕರೇ ತೀರಾ ಹೆಚ್ಚಾಗಿರುತ್ತಾರೆ. ಆರ್ಥಿಕವಾಗಿ ಮನೆಯನ್ನು ನಿರ್ಮಿಸಲು ಇವರಿಗೆ ಅಸಾಧ್ಯವಾಗಿರುತ್ತದೆ. ಕಾರಣ ಈಗಿನ ಮನೆ ಸಾಮಾಗ್ರಿಗಳ ಹೆಚ್ಚಳ, ಹೆಚ್ಚಿನ ಕೂಲಿ, ನುರಿತ ಕೆಲಸಗಾರರ ಅಭಾವವೇ ಕಾರಣ. ಈ ಪಂಚಾಯತಿನಲ್ಲಿ ಮನೆ ಕಟ್ಟುವವರಿಗೆ ಆರ್ಥಿಕ ಸಹಾಯವನ್ನು ನೀಡಲು ಯಾವುದೇ ಸಂಸ್ಥೆಗಳು ಇಲ್ಲ. ಅತೀ ಕಡಿಮೆ ಬಡ್ಡಿ ದರದಲ್ಲಿ ಮನೆ ಇಲ್ಲದವರಿಗೆ ಮನೆ ಕಟ್ಟಲು ಅನುಕೂಲವಾಗುವಂತೆ ಸರಕಾರಿ ಏಜನ್ಸಿಗಳಿಂದ ಆರ್ಥಿಕ ಸಹಾಯ ಒದಗಿಸುವಂತಹ ಸಂಸ್ಥೆಯನ್ನು ಸ್ಥಾಪಿಸಬೇಕು. ಸಾರಿಗೆ ವ್ಯವಸ್ಥೆ ಇಲ್ಲದಿರುವ ಸ್ಥಳಗಳಿಗೆ ರಸ್ತೆಗಳನ್ನು ನಿರ್ಮಿಸಿ ಮನೆ ಕಟ್ಟಲು ತಗಲುವ ಖರ್ಚನ್ನು ಕಡಿಮೆ ಮಾಡಬೇಕು. ಮನೆ ಕಟ್ಟಲು ಬೇಕಾದ ಸಾಮಾಗ್ರಿಗಳನ್ನು ಮಿತ ಬೆಲೆಯಲ್ಲಿ ದೊರಕಿಸಿಕೊಡುವಂತಹ ಸಂಸ್ಥೆಗಳನ್ನು ಸ್ಥಾಪಿಸಬೇಕು. ಮನೆ ಕಟ್ಟುವ ನಿರ್ಮಿತಿ ಕೇಂದ್ರದ ಶಾಖೆಯನ್ನು ತೆರೆಯಬೇಕು. ಕೃಷಿ ಸ್ಥಳಗಳಲ್ಲಿ ಮನೆಗಳನ್ನು ಕಟ್ಟದಂತೆ ನಿಗಾ ವಹಿಸಬೇಕು. ಇಲ್ಲಿ ಪ್ರಕೃತ ಇರುವ 10 ವಾರ್ಡುಗಳಲ್ಲಿ 3223 ಹಂಚಿನ ಮನೆಗಳೂ, 1204 ಮುಳಿ/ಸೋಗೆ ಮನೆಗಳೂ 189 ಟೆರೇಸ್ ಮನೆಗಳೂ ಇವೆ. ಪ್ರಕೃತ ಮನೆಗಳನ್ನು ಕಟ್ಟಲು ಈ ಪಂಚಾಯತಿನ ಜನತೆ ಕುಂಬಳೆ ಹೌಸಿಂಗ್ ಸೊಸೈಟಿ, ಕೇರಳ ಹೌಸಿಂಗ್ ಬೋರ್ಡು ಮತ್ತು ಜಿಲ್ಲಾ ಸಹಕಾರಿ ಬೇಂಕಿನ ಉಪ್ಪಳ ಶಾಖೆಯಿಂದ ಆರ್ಥಿಕ ಸಹಾಯವನ್ನು ಪಡೆಯುತ್ತಿದ್ದು ಇದು ತೀರಾ ಅನಾನುಕೂಲಕರವಾಗಿದೆ.

ಈಗಿರುವ ಮನೆ ಸಾಲಗಳು ಮಧ್ಯಮ ವರ್ಗದ ಜನತೆಗೆ ಸಿಗುವುದು ಬಹಳ ಕಷ್ಟ ಸಾಧ್ಯವಾಗುತ್ತದೆ. ಹೀಗೆ ಸಾಲ ಪಡೆಯಲು ಇರುವ ಶರ್ತಗಳನ್ನು ಪೂರೈಸಲು ಜನರಿಗೆ ತುಂಬಾ ಕಷ್ಟವಾಗಿರುತ್ತದೆ. ಈ ಶರ್ತಗಳನ್ನು ಸರಳಗೊಳಿಸಿ ಶೀಘ್ರದಲ್ಲೇ ಮನೆಕೆಲಸ ಪೂರೈಸುವಂತೆ ಅನುಕೂಲ ಮಾಡಿಕೊಡಬೇಕು. ಪ್ರಸ್ತುತ ಮನೆ ಸಾಲಕ್ಕೆ ಇರುವ ಬಡ್ಡಿದರ ಮಧ್ಯಮ ವರ್ಗದವರಿಗೆ ಭಾರವಾಗಿದ್ದು ಇದನ್ನು 12%ಗೆ ಕಡಿಮೆ ಮಾಡಬೇಕು.

Ward No.	ಹಂಚಿನ ಮನೆಗಳು	ಮುಳಿ/ಸೋಗೆ ಮನೆಗಳು	ಕಾಂಕ್ರೀಟ್ ಮೊತ್ತ ಮನೆಗಳು	
I	331	107	19	457
II	310	175	3	488
III	340	149	9	498
IV	342	81	20	443
V	355	55	43	453
VI	248	136	17	401
VII	443	101	46	590
VIII	297	168	6	471
IX	273	129	8	410
X	294	103	18	415
Total	3223	1204	189	4626

ಈ ಪಂಚಾಯತಿನಲ್ಲಿ ಸ್ವತಃ ಮನೆ ಕಟ್ಟಲು ಸ್ಥಳವಿಲ್ಲದ ಕುಟುಂಬಗಳಿಗೆ ಪಂಚಾಯತಿನ ವತಿಯಿಂದ 4 cents ಸ್ಥಳವನ್ನು ನೀಡಿ ಅವರಿಗೆ ಮನೆ ಕಟ್ಟಲು ಧನ ಸಹಾಯವನ್ನು ನೀಡಬೇಕು.

ಪಂಚಾಯತಿನಲ್ಲಿ ತೀವ್ರವಾಗಿ ಏರುತ್ತಿರುವ ಜನಸಂಖ್ಯೆಯಿಂದಾಗಿ ಮುಂದಿನ ಪೀಳಿಗೆಗೆ ಮನೆಕಟ್ಟಲು ಸ್ಥಳವಿಲ್ಲದಾಗುವ ಪರಿಸ್ಥಿತಿ ಬಂದೊದಗಬಹುದು. ಆದುದರಿಂದ ಮುಂಜಾಗರೂಕತಾ ಕ್ರಮವಾಗಿ ಪಂಚಾಯತಿನಲ್ಲಿ ಸಾರ್ವಜನಿಕ ಸ್ಥಳವನ್ನು ಗೊತ್ತುಪಡಿಸಿ ಅದನ್ನು ಮನೆಕಟ್ಟುವ ಉದ್ದೇಶಕ್ಕಾಗಿ ಮೀಸಲಿಡಬೇಕು. ಈ ಪಂಚಾಯತಿನಲ್ಲಿ 1204 ಕುಟುಂಬಗಳಿಗೆ ವಾಸಿಸಲು ಯೋಗ್ಯವಾದ ಮನೆಗಳಿಲ್ಲದೆ ಆರ್ಥಿಕವಾಗಿ ಹಿಂದುಳಿದವರಿಗೆ ಮನೆ ನಿರ್ಮಾಣಕ್ಕೆ ಇರುವ ಪದ್ಧತಿಗಳು ತೀರಾ ಅಪರ್ಯಾಪ್ತವಾಗಿದೆ ಎಂದು ಪ್ರಸ್ತುತ ಲೆಕ್ಕಗಳು ತೋರಿಸುತ್ತದೆ.

ಈ ಪಂಚಾಯತಿನಲ್ಲಿ ಕಳೆದ 5 ವರ್ಷಗಳಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ 125 ಮನೆಗಳನ್ನು I.A.Y. J.R.Y. ಪದ್ಧತಿ ಮುಖಾಂತರ ಪಂಚಾಯತು ಮತ್ತು ಬ್ಲೋಕು ಮುಖೇನ ಒದಗಿಸಲಾಗಿದೆ. ಹೀಗೆ ನೀಡಲಾಗುವ ಧನ ಸಹಾಯವನ್ನು ಹೆಚ್ಚಿಸಬೇಕು. ಈಗ ಕೂಲಿ ಸಾಮಾಗ್ರಿಗಳ ಬೆಲೆ ಹೆಚ್ಚಳದಿಂದ ಬಡವರ ಸ್ವಂತವಾದ ಮನೆ ಎಂಬ ಕನಸು ಕನಸಾಗಿಯೇ ಉಳಿದಿದೆ. 91-92ರಲ್ಲಿ 80-90 ರೂಪಾಯಿ ಇದ್ದ ಸಿಮೆಂಟ್‌ಗೆ ಈಗ 180 ರೂಪಾಯಿ ಇದೆ. 90-91ರಲ್ಲಿ ನುರಿತ ಕೆಲಸಗಾರರಿಗೆ 50-60 ರೂ. ವರೆಗೂ ಸಾಧಾರಣ ಕೂಲಿಯವರಿಗೆ 25ರಿಂದ 35ರ ವರೆಗೂ, ಇದ್ದ ಕೂಲಿ ಈಗ ನುರಿತ ಕೆಲಸಗಾರರಿಗೆ 130-150 ರ ವರೆಗೂ, ಸಾಧಾರಣ ಕೂಲಿಯವರಿಗೆ 90-120ರೂ. ಆಗಿದೆ. ಇದರಿಂದಾಗಿ ಈಗಿರುವ ಧನಸಹಾಯವನ್ನು 30,000ರೂ. ವರೆಗೆ ಹೆಚ್ಚಿಸಬೇಕು.

ಈ ಪಂಚಾಯತಿನಲ್ಲಿ ಆರ್ಥಿಕವಾಗಿ ಹಿಂದುಳಿದ ಸ್ವಂತ ಮನೆಯಿಲ್ಲದ ಸುಮಾರು 1200 ಕುಟುಂಬಗಳಿವೆ. IXನೇ ಪಂಚವಾರ್ಷಿಕ ಯೋಜನೆಯ ಕಾಲಾವಧಿಯಲ್ಲಿ ಧನ ಸಹಾಯವನ್ನು ಒದಗಿಸಿ ಈ ಪಂಚಾಯತ್‌ನ್ನು ಗುಡಿಸಲು ರಹಿತ ಪಂಚಾಯತ್‌ನ್ನಾಗಿ ಮಾಡಬೇಕು. ಈ ಕಾರ್ಯಕ್ಕಾಗಿ ಪಂಚಾಯತಿನ ವತಿಯಿಂದ ಒಂದು ತಜ್ಞ ಸಮಿತಿಯನ್ನು ನಿಯಮಿಸಿ ಪ್ರತೀ ವಾರ್ಡುಗಳಲ್ಲಿಯೂ ಮನೆ ರಹಿತರನ್ನು ಸಂಪರ್ಕಿಸಿ ಸರಕಾರದ ಸವಲತ್ತುಗಳನ್ನು ನೇರವಾಗಿ ದೊರಕಿಸುವಂತೆ ಮಾಡಬೇಕು. ಈ ಗುರಿಯನ್ನು ತಲಪಲು ಪಂಚಾಯತಿನಲ್ಲಿರುವ ಸನ್ನದ್ಧ ಸಂಘಟನೆಗಳು, ಸಹಕಾರಿ ಸಂಘಟನೆಗಳು, ಸಹಕಾರಿ ಸಂಘಗಳು, ಸರಕಾರೀ ನೌಕರರು, ರಾಜಕೀಯ ನೇತಾರರು ಎಲ್ಲರೂ ಒಗ್ಗಟ್ಟಾಗಿ ಪ್ರಯತ್ನ ಪಟ್ಟಲ್ಲಿ ಇದೊಂದು ಗುಡಿಸಲು ರಹಿತ ಪಂಚಾಯತು ಆಗುವುದರಲ್ಲಿ ಸಂದೇಹವಿಲ್ಲ.

ಅಂಗನವಾಡಿಗಳು : ಪ್ರಕೃತ ಪೈವಳಿಕೆ ಪಂಚಾಯತಿನಲ್ಲಿ ಅಟ್ಟೆಗೋಳಿ ಮತ್ತು ಕುರುಡ ಪದವುಗಳಲ್ಲಿ ಎರಡು ಅಂಗನವಾಡಿಗಳು ಮಾತ್ರ ಇವೆ. 1995ರಲ್ಲಿ ಮಂಜೇಶ್ವರ ಬ್ಲೋಕನ್ನು I.C.D.S. ಬ್ಲೋಕನ್ನಾಗಿ ಮಾಡಿದರೂ ಈಗಿರುವ ಬಾಲವಾಡಿಗಳನ್ನು ಅಂಗನವಾಡಿಗಳನ್ನಾಗಿ ಮಾರ್ಪಡಿಸಿದ್ದಲ್ಲದೆ ಬೇರೆ ಯಾವ ಕಾರ್ಯಕ್ರಮವನ್ನು ಮಾಡಲಿಲ್ಲ. ನಮ್ಮ ಪಂಚಾಯತಿನಲ್ಲಿ ಕನಿಷ್ಠ ಪಕ್ಷ 30

ಅಂಗನವಾಡಿಗಳನ್ನಾದರೂ ತೆರೆಯಬೇಕಾಗಿದೆ.

ಪ್ರಸ್ತುತ ಅಂಗನವಾಡಿಗಳಿಗೆ ಬೇಕಾದ ಸವಲತ್ತುಗಳನ್ನು ಈ ತನಕ ಒದಗಿಸಿಕೊಡಲಾಗಲಿಲ್ಲ. ಪಂಚಾಯತಿನ ಮಹಿಳೆಯರ ಮತ್ತು ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಅಂಗನವಾಡಿಗಳನ್ನು ಕೂಡಲೇ ಆರಂಭಿಸಬೇಕು.

ಸಾರ್ವಜನಿಕ ವಿತರಣೆ : ಪೈವಳಿಕೆ ಪಂಚಾಯತಿನಲ್ಲಿ ಪ್ರಸ್ತುತ 8 ರೇಶನ್ ಅಂಗಡಿಗಳಿವೆ. ಇದರಲ್ಲಿ 4184 ರೇಶನ್ ಕಾರ್ಡುಗಳಿವೆ. ಪಂಚಾಯತಿನ IIIನೇ ವಾರ್ಡಿನ ಕುರುಡ ಪದವಿನ ಮತ್ತು VIIIನೇ ವಾರ್ಡಿನ ಸುಬ್ಬಯ್ಯ ಕಟ್ಟೆಯಲ್ಲಿನ ರೇಶನ್ ಅಂಗಡಿಗಳು ಪೈವಳಿಕೆ ಮತ್ತು ಚೇವಾರಿಗೆ ಸ್ಥಳಾಂತರಿಸಲಾಗಿದೆ. ಇಲ್ಲಿಯ ಜನರು ರೇಶನ್ ಸಾಮಾಗ್ರಿಗಳನ್ನು ಪಡೆಯಲು ಬಹಳ ದೂರ ಸಂಚಾರ ಮಾಡಬೇಕಾಗುತ್ತದೆ. ಆದುದರಿಂದ ಕುರುಡ ಪದವಿನಲ್ಲಿ ಮತ್ತು ಸುಬ್ಬಯ್ಯ ಕಟ್ಟೆಯಲ್ಲಿ ರೇಶನ್ ಅಂಗಡಿಗಳನ್ನು ಆರಂಭಿಸಬೇಕು.

ಈ ಪಂಚಾಯತಿನಲ್ಲಿ ಕಳೆದ ಪಂಚವಾರ್ಷಿಕ ಯೋಜನೆಯಲ್ಲಿ ಸಾಧಾರಣ 18 ಯುವಕ ಯುವತಿಯರಿಗೆ ತರಬೇತಿಯನ್ನು ನೀಡಿದ್ದಾರೆ. ತರಬೇತಿ ನೀಡಿದವರಿಗೆ ಸ್ವಂತ ಉದ್ಯೋಗಕ್ಕಾಗಿ ಧನಸಹಾಯವನ್ನು ನೀಡುತ್ತಾರೆ.

ಈ ತರಬೇತಿಯು ಕೆಲವೇ ಜನರಿಗೆ ಲಭಿಸುತ್ತಿದ್ದು, Stipend ಬಹಳ ಕಡಿಮೆಯಾಗಿದೆ. ಆದುದರಿಂದ ಹೆಚ್ಚಿನ ಜನರಿಗೆ ತರಬೇತಿಯನ್ನು ಒದಗಿಸಿ ತರಬೇತಿ ಹೊಂದಿದವರಿಗೆ ಸ್ವಂತ ಉದ್ಯೋಗಕ್ಕೆ ಸಹಾಯವನ್ನು ನೀಡಬೇಕು.

ಪೆನ್‌ಶನ್‌ಗಳ ಕುರಿತು

ವಿಧವಾ ಪೆನ್‌ಶನ್ : ಪ್ರಾಯ ಪೂರ್ತಿಯಾದ ಗಂಡು ಮಕ್ಕಳಿದ್ದರೆ ಈ ಪೆನ್ಶನ್ ಸಿಗುವುದಿಲ್ಲ. ಆದುದರಿಂದ ಪರಮಾನಕ್ಕನುಸಾರವಾಗಿ ವಿಧವಾ ಪೆನ್ಶನ್ ನೀಡಬೇಕು. ಪಂಚಾಯತಿನ ಎಲ್ಲಾ ವಿಧವೆಯರಿಗೆ ಪೆನ್ಶನ್ ಸಿಗುವ ಏರ್ಪಾಡು ಮಾಡಬೇಕು.

ಅಂಗವಿಕಲ ಪೆನ್ಶನ್ : ವಿಕಲಾಂಗತ್ವವನ್ನು ದೃಢೀಕರಿಸಲಿರುವ ಸರ್ಟಿಫಿಕೇಟ್ ಸಿಗಲು ಬಹಳ ಕಷ್ಟಕರವಾಗಿದೆ. ಇಲ್ಲಿಂದ ಕಾಞಂಗಾಡ್‌ಗೆ ಹೋಗಬೇಗು. ವಿಕಲಾಂಗರಿಗೆ ಇದು ಬಹಳ ಕಷ್ಟಕರವಾಗಿದೆ. ಆದುದರಿಂದ ಸರ್ಟಿಫಿಕೇಟನ್ನು ನೀಡಲು ತಾಲೂಕು ಆಸ್ಪತ್ರೆಯ ವೈದ್ಯರಿಗೆ ಅಧಿಕಾರವನ್ನು ಕೊಡಬೇಕು.

ಕೃಷಿ ಕಾರ್ಮಿಕರ ಪೆನ್ಶನ್ : ಅರ್ಹರಾದ ಎಲ್ಲರಿಗೂ ಪೆನ್ಶನ್ ಸಿಗುವಂತೆ ಮಾಡಬೇಕು. ಪೆನ್‌ಶನ್ ಅರ್ಜಿಯನ್ನು ಪಂಚಾಯತಿನಲ್ಲಿ ಸ್ವೀಕರಿಸಿ ಪಂಚಾಯತಿನಿಂದ ಪೆನ್‌ಶನನ್ನು ವಿತರಿಸಬೇಕು. ಈಗ ನಮ್ಮ ಪಂಚಾಯತಿನಲ್ಲಿ ನೀಡುವ ಪೆನ್ಶನ್‌ಗಳ ಕುರಿತು ಪಟ್ಟಿಯು ಕಣ್ಣೂರಿನಲ್ಲಿದ್ದು ಇದನ್ನು ಕಾಸರಗೋಡಿನಲ್ಲಿ ಆರಂಭಿಸಬೇಕು. ವನಿತಾ ವಿಕಸನ ಕಾರ್ಪೊರೇಶನ್‌ನಿಂದ ಸಹಾಯವಿದ್ದರೂ ಪಡೆದವರು ತೀರಾ ಕಡಿಮೆ.

ಸಾಮಾಜಿಕ ಕ್ಷೇಮರಂಗದಲ್ಲಿ ಪ್ರಧಾನವಾಗಿರುವುದು ಬ್ಲೋಕಿನ ಮುಖಾಂತರ ಇರುವ IRDP ಪದ್ಧತಿಯಾಗಿದೆ. ಕಳೆದ ಪಂಚವಾರ್ಷಿಕ ಯೋಜನೆಯಲ್ಲಿ ಈ ಪಂಚಾಯತಿನಲ್ಲಿ ಸಾಧಾರಣ 165 ಕುಟುಂಬಗಳಿಗೆ ಧನ ಸಹಾಯವನ್ನು ಒದಗಿಸಿದೆ.

ಈ ಪದ್ಧತಿಯ ಕುರಿತು ಸರಕಾರದ ಧೋರಣೆಯನ್ನು ಕಾಲೋಚಿತವಾಗಿ ಪರಿಷ್ಕರಿಸಬೇಕು. ದಾರಿದ್ರ್ಯ ರೇಖೆಯ ಮಿತಿ 11,000 ದಿಂದ 25,000ರೂ. ವಾಗಿ ಹೆಚ್ಚಿಸಬೇಕು. ಈ ಪದ್ಧತಿಯ ವಿಜಯಕ್ಕೆ ರಾಷ್ಟ್ರೀಕೃತ ಬೇಂಕುಗಳು, ಸಹಕಾರಿ ಬೇಂಕುಗಳು ಉದಾರ ಮನಸ್ಸಿನ ಸಹಾಯವನ್ನು ನೀಡಬೇಕು.

D.W.C.R.A. : ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿಗೆ ಇರುವ ಈ ಪದ್ಧತಿಯು 94-95ರಲ್ಲಿ ಇಲ್ಲಿ ಆರಂಭಿಸಿದ್ದು ಈ ಪಂಚಾಯತಿನಲ್ಲಿ ಪ್ರಸ್ತುತ 4 ಯುನಿಟ್‌ಗಳಿವೆ. 4 ಯುನಿಟ್‌ನಲ್ಲಿ 45 ಮಹಿಳೆಯರಿಗೆ ಧನ ಸಹಾಯ ಲಭಿಸಿದೆ. ಈ ಪದ್ಧತಿ ಪ್ರಕಾರ ಹೆಚ್ಚಿನ ಯುನಿಟ್‌ಗಳನ್ನು ಸ್ಥಾಪಿಸಿ ಮಹಿಳೆಯರ ಕಲ್ಯಾಣಕ್ಕೆ ಹಾದಿ ಮಾಡಿಕೊಡಬೇಕು.

TRYSEM : 18-35 ವರ್ಷದ ಯುವಕ-ಯುವತಿಯರಿಗೆ ಸ್ವ-ಉದ್ಯೋಗಕ್ಕೆ ತರಬೇತಿ ನೀಡುವ ಪದ್ಧತಿಯಾಗಿದೆ. ಪ್ರಸ್ತುತ ಪೈವಳಿಕೆ ಪಂಚಾಯತಿನಲ್ಲಿ 4850 ಕುಟುಂಬಗಳಿದ್ದು ಇದರಲ್ಲಿ 1212 ಕುಟುಂಬಗಳು 1992ನೇ I.R.D.P. ಸರ್ವೆ ಪ್ರಕಾರ ದಾರಿದ್ರ್ಯ ರೇಖೆಗಿಂತ ಕೆಳಮಟ್ಟದಲ್ಲಿದೆ. ದಾರಿದ್ರ್ಯ ನಿರ್ಮೂಲನಕ್ಕಾಗಿ ಈಗಿರುವ ಕೇಂದ್ರ ಮತ್ತು ರಾಜ್ಯ ಸರಕಾರದ ಪದ್ಧತಿಗಳಾದ IRDP ಮತ್ತು ಮತ್ತಿತರ ಸೌಲಭ್ಯಗಳು ತೀರಾ ಅಪರ್ಯಾಪ್ತವಾಗಿದೆ. ಮತ್ತು ವರ್ಷದಲ್ಲಿ ಕೆಲವೇ ಕುಟುಂಬಗಳಿಗೆ ಮಾತ್ರ ಈ ಸಹಾಯ ದೊರಕುತ್ತದೆ. ಇದಲ್ಲದೆ ಸಾಮಾಜಿಕ ಕ್ಷೇಮಕ್ಕಾಗಿ ಇರುವ ಸಂಸ್ಥೆಗಳು ಉದಾಹರಣೆಗೆ ಕೃಷಿ ಕಾರ್ಮಿಕರ ಕಲ್ಯಾಣ ಸಂಸ್ಥೆ. ಕಟ್ಟಡ ನಿರ್ಮಾಣ ಕೆಲಸಗಾರರ ಕ್ಷೇಮನಿಧಿ ಮುಂತಾದವುಗಳಲ್ಲಿ ಸದಸ್ಯತ್ವ ಇದ್ದರೂ ಪಂಚಾಯತಿನ ಎಲ್ಲರಿಗೂ ಸದಸ್ಯತನ ಈವರೆಗೆ ಲಭಿಸಲಿಲ್ಲ. ಅದಕ್ಕಾಗಿ ಕಾರ್ಮಿಕರನ್ನು ಸೇರಿಸಿಕೊಂಡು ಅವರ ಕ್ಷೇಮಕ್ಕಾಗಿ ಕ್ಷೇಮ ನಿಧಿಗಳನ್ನು ಬಲಪಡಿಸಬೇಕು.

ಈಗಿರುವ ಪದ್ಧತಿಯ ಅಪರ್ಯಾಪ್ತತೆ ಬಹಳ ಪ್ರಕಟವಾಗಿರುತ್ತದೆ. ಪದ್ಧತಿಗಳ ಕುರಿತು ಜನರಿಗೆ ತಿಳುವಳಿಕೆ ಮಾಡಿಸುವುದು. ಸರಿಯಾದ ಸಮಯಕ್ಕೆ ಸಹಾಯವನ್ನು ನೀಡುವುದು ಅಗತ್ಯವಾಗಿದೆ.

ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯ ಕಾರ್ಪೊರೇಶನ್ ಮುಖಾಂತರ ಸಿಗುವ ಅನುಕೂಲತೆಗಳು ಪರಿಮಿತವಾಗಿದ್ದು, ಇವರಿಗೆ ಸಿಗುವಂತಹ ಸೌಲಭ್ಯಗಳ ಮಾಹಿತಿ ಕೊಡುವ ಮಾಹಿತಿ ಕೇಂದ್ರವು ಅವಶ್ಯವಾಗಿದೆ. ರೇಶನ್ ಕಾರ್ಡು ವಿತರಣೆಯ ಈಗಿರುವ ನಿಯಮಗಳು ಕಷ್ಟಕರವಾಗಿದ್ದು ಸಾಧಾರಣ ಜನರಿಗೆ ರೇಶನ್ ಕಾರ್ಡು ಬೇಗನೆ ಲಭಿಸುವಂತೆ ಪಂಚಾಯತು ಮಟ್ಟದಲ್ಲಿ ವ್ಯವಸ್ಥೆಯನ್ನು ಮಾಡಬೇಕು. ಇಲ್ಲಿನ ಕೃಷಿಕರಿಗೆ ಸಿಗುತ್ತಿರುವ ಸೀಮೆಎಣ್ಣೆ ಪರ್ಮಿಟನ್ನು ಪಂಚಾಯತಿನ ಮುಖಾಂತರ ನೀಡುವ ವ್ಯವಸ್ಥೆಯನ್ನು ಮಾಡಬೇಕು. ರೇಶನ್ ಅಂಗಡಿಗಳಲ್ಲಿ ಅಕ್ಕಿ ಮತ್ತು ಸಕ್ಕರೆಯಲ್ಲದೆ ಸಾಧಾರಣ ದಿನಬಳಕೆಯ ಸಾಮಾಗ್ರಿಗಳನ್ನು ವಿತರಿಸಬೇಕು.

ಜನರಿಗೆ ನಾಗರಿಕ ಪೂರೈಕೆಯನ್ನು ದೋಷಮುಕ್ತ ಮಾಡಲು ಮತ್ತು ತಿಳುವಳಿಕೆ ನೀಡಲು ಒಂದು ಬಳಕೆದಾರರ ವೇದಿಕೆಯನ್ನು ಆರಂಭಿಸಬೇಕು.

ಈ ಪಂಚಾಯತಿನಲ್ಲಿ ಹೆಚ್ಚಿನಕಡೆಗೆ ಸಾರ್ವಜನಿಕ ಸ್ಮಶಾನ ವ್ಯವಸ್ಥೆ ಇರುವುದಿಲ್ಲ. ಹೆಚ್ಚುತ್ತಿರುವ ಜನಸಂಖ್ಯೆಯನ್ನು ಕಂಡುಕೊಂಡು ಸ್ಮಶಾನದ ವ್ಯವಸ್ಥೆಯನ್ನು ಆರಂಭಿಸಬೇಕು.

ಪಂಚಾಯತಿನ ಸಮಗ್ರ ಅಭಿವೃದ್ಧಿಗೆ ಮತ್ತು ಜನರ ಏಳಿಗೆಗೆ ಕ್ಷೇತ್ರದ ಎಲ್ಲಾ ವರ್ಗದ ಜನರೂ ಸಂಪೂರ್ಣ ಸಹಕಾರ ನೀಡಿದಲ್ಲಿ ಈ ಯೋಜನೆಯು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ.

ಸಂಸ್ಕೃತಿ

ಪಂಚಾಯತ್ತಿನ ಸರ್ವತೋಮುಖ ಅಭಿವೃದ್ಧಿಗೆ ಸಾಂಸ್ಕೃತಿಕ ಕಾರ್ಯಕ್ಷೇತ್ರಗಳು ಪ್ರಧಾನ ಪಾತ್ರ ವಹಿಸುವುವು. ಧಾರ್ಮಿಕ ವಿಭಾಗಗಳ, ಜಾತಿ, ಉಪಜಾತಿ, ಭೇದ ಭಾವಗಳ ಭಾಷೆ, ಆಚಾರ ವಿಚಾರಗಳ ಆರಾಧನೆ ಆಚರಣೆಗಳ ಉಡುಗೆ ತೊಡಗುಗೆಗಳಲ್ಲಿ ಕಂಡು ಬರುವ ವ್ಯತ್ಯಾಸಗಳನ್ನೆಲ್ಲಾ ಒಗ್ಗೂಡಿಸಿ ರಾಷ್ಟ್ರೀಯ ವಾಹಿನಿಯಲ್ಲಿ ಕೊಂಡೊಯ್ಯಲು ಸಾಂಸ್ಕೃತಿಕ ಸಂಘಟನೆಗಳು ಮಾರ್ಗದರ್ಶನ ನೀಯಬೇಕು

ಇಲ್ಲಿ ನೆಲೆಸಿರುವ ಹಿಂದು, ಮುಸ್ಲಿಂ ಕ್ರೈಸ್ತರು ಅನ್ಯೋನ್ಯತೆಯಿಂದ ಜೀವಿಸುತ್ತಿರುವರು. ಭೂತಸ್ಥಾನ, ದೇವಸ್ಥಾನ, ಮಸೀದಿ ಇಗರ್ಜಿಗಳು ಸಾಕಷ್ಟಿವೆ. ಚಿತ್ತಾರಿ ಉಳಾಳ್ತಿ ನೇಮ, ಬಾಯಿಕಟ್ಟೆ ವಿಷ್ಣು ಮೂರ್ತಿ ಕೆಂಡಸೇವೆ ಬದಿಯೂರು ಮಲರಾಯ, ಅಮ್ಮೇರಿ ಬೈದರ್ಕಳ ನೇಮ, ಕೊಮ್ಮಂಗಳ ಕೊರತಿ ಮತ್ತು ಆವಳ ಮಠ, ಉಳಾಪಾನ ಮಠಗಳಲ್ಲಿ ಜರಗುವ ನವರಾತ್ರಿ ಉತ್ಸವಗಳುಮತ್ತು ಇನ್ನಿತರ ದೇವಸ್ಥಾನ ಮತ್ತು ದೈವಸ್ಥಾನಗಳಲ್ಲಿ ನೇಮ ಆಯನಗಳು ಜರುಗುತ್ತಿರುವುದು.

ಓಡಕಡವ್ವ (ಕಳಾಯಿ) ಬದಿಯಾರು, ವೆಳ್ಳಿಕ್ಕುನ್ನು (ಕುರುಡ ಪದವು) ಜಾರಗಳಲ್ಲಿ ಮುಳಿಗದ್ದೆ ಉರೂಸ್ ಬಹಳ ಪ್ರಧಾನವಾಗಿದೆ.

ಯಕ್ಷಗಾನ ಕಲೆಯು ಈ ಪ್ರದೇಶದ ಜನರ ಬಹು ಪ್ರಿಯ ಕಲೆಯಾಗಿದೆ. ಹಲವು ಮಂದಿ ಶ್ರೇಷ್ಠ ಕಲಾವಿದರಿಗೆ ಜನ್ಮವಿತ್ತ ಪಂಚಾಯತು ಇದಾಗಿದೆ.

ಪೈವಳಿಕೆ ಜುಮಾ ಮಸೀದಿ ಬಹಳ ಹಿಂದಿನಿಂದಲೇ ಮತ ವಿದ್ಯಾಭ್ಯಾಸದ ಕೇಂದ್ರವಾಗಿದ್ದು ಈಗಲೂ ದೂರ ದ ಊರಿನಿಂದ ಬಂದು ವಿದ್ಯಾಭ್ಯಾಸವನ್ನು ಕಲಿಯುತ್ತಿರುವರು.

ಕ್ರೈಸ್ತ ಬಂಧುಗಳ ಆರಾಧನಾಲಯವಾದ ಏಕೈಕ ಇಗರ್ಜಿಯು ಕಯ್ಯಾರಿನಲ್ಲಿದೆ. ಇನ್ನೊಂದು ಕೊಮ್ಮಂಗಳದಲ್ಲಿ ನಿರ್ಮಾಣದ ಹಂತದಲ್ಲಿದೆ.

ಪಂಚಾಯತು ಮಟ್ಟದಲ್ಲಿ ಸಾಂಸ್ಕೃತಿಕ ಕಾರ್ಯ ಕ್ರಮಗಳು ವಿವಿಧ ರೀತಿಯಲ್ಲಿ ನಡೆಯುತ್ತಿವೆ ಬಾಲಕಲೋತ್ಸವ, ಯುವ ಜನೋತ್ಸವಗಳಲ್ಲಿ ಜಾನಪದ ಕಲೆಗಳಿಗೂ ಪ್ರೋತ್ಸಾಹ ನೀಡಲಾಗುತ್ತಿದೆ. ಕೇರಳೋತ್ಸವ, ಓಣಂ ಸ್ಪೋಟ್ಸ್ ಇತ್ಯಾದಿಗಳನ್ನು ಪಂಚಾಯತ್ ಮಟ್ಟದಲ್ಲಿ ಜರಗಿಸಲಾಗುವುದು. ಭೂತಾರಾಧನೆ, ಕನ್ಯಾಪು, ಜೋಗಿ, ಆಟಕಳಂಜ ಮೊದಲಾದವು ಕೆಲವು ಜನಾಂಗದವರು ಆಚರಿಸಿಕೊಂಡು ಬರುವ ಕಲೆಗಳಾಗಿವೆ. ದಪ್ಪು ಮುಟ್ಟು, ಕೋಲ್ಕಳಿ ಮುಸ್ಲಿಂ ಜನಾಂಗದವರು ಬೆಳೆಸಿಕೊಂಡು ಬರುವ ಕಲೆಗಳಾಗಿವೆ. ನಾಟಕ, ಯಕ್ಷಗಾನ, ತಾಳಮದ್ದಳೆ ಜನರ ಮನೋರಂಜನಾ ಕಲೆಗಳಾಗಿವೆ. ದೇವಸ್ಥಾನದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮಗಳು ಜನರಲ್ಲಿ ಧರ್ಮದ ಮಹತ್ವವನ್ನು ಒಡಮೂಡಿಸುತ್ತದೆ. ಕೋಳಿಅಂಕ (ಜೂಜು ರಹಿತ) ಕೃಷಿಕರ ಬಿಡು ಸಮಯದ ವಿನೋದವಾಗಿತ್ತು. ಕಂಬಳವು ಹಿಂದೆ ಈ ಪ್ರದೇಶದ ಜನರ ನೆಚ್ಚಿನ ಕಲೆಯಾಗಿತ್ತು. ಈಗೀಗ ಇದಕ್ಕಿರುವ ಪ್ರೋತ್ಸಾಹವು ಕಡಿಮೆಯಾಗುತ್ತಿದೆ. ಗದ್ದೆಯಲ್ಲಿ ನಾಟಿ ನೆಡುವ ಹೆಂಗಸರು ಹಾಡುವ ಓಬೇಲೆ ಹಾಡು ದುಡಿಮೆಯ ಆಯಾಸವನ್ನು ಮರೆಯಿಸಿ ಬಿಡುತ್ತದೆ.

ಕ್ರೀಡಾರಂಗವು ಸಾಕಷ್ಟು ಅಭಿವೃದ್ಧಿ ಹೊಂದಲಿಲ್ಲ. ಇದಕ್ಕೆ ಬೇಕಾದ ಕ್ರೀಡಾಂಗಣವು ನಮ್ಮಲ್ಲಿ ಇಲ್ಲ.

ಪುಸ್ತಕಾಲಯಗಳು ಪಂಚಾಯತ್ತಿನಲ್ಲಿ ಸಾಕಷ್ಟು ಇಲ್ಲದಿರುವುದು ಖೇದಕರವಾಗಿದೆ. ಪುಸ್ತಕಾಲಯಗಳು ಪಂಚಾಯತಿನಲ್ಲಿ ಸಾಕಷ್ಟು ಸ್ಥಾಪಿಸಲ್ಪಡಬೇಕು.

ಗ್ರಂಥಾಲಯಗಳು

1. ಪದ್ಮ ಶಾಲಾ ಮಿತ್ರಮಂಡಳಿ
2. ಅಟ್ಟೆಗೋಳಿ ಯುವಕ ಸಂಘ
3. ಚೇರಾಲು ಗ್ರಾಮೋಣ ಅಭಿವೃದ್ಧಿ ಸಂಘ

ಕಲೆ ಅಲ್ಲದೆ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳು ಅಲ್ಲಲ್ಲಿ ಕಾರ್ಯವೆಸಗುತ್ತವೆ.

ಸಮಸ್ಯೆಗಳು

1. ಎಲ್ಲಾ ವಾರ್ಡುಗಳಲ್ಲಿ ಪುಸ್ತಕಾಲಯಗಳಿಲ್ಲ
2. ಅನೌಪಚಾರಿಕ ವಿದ್ಯಾಕೇಂದ್ರಗಳಿಲ್ಲ
3. ಕಲಾ ಪ್ರದರ್ಶನಕ್ಕೆ ತಕ್ಕ ಕಟ್ಟಡವಿಲ್ಲ
4. ಜಾನಪದ ಕಲೆಗಳಿಗೆ ಪ್ರೋತ್ಸಾಹ ಇಲ್ಲ
5. ಕ್ರೀಡಾರಂಗದಲ್ಲಿ ಪ್ರಾಚೀನ ಆಟಗಳಿಗೆ ಅಧೀನವಿಲ್ಲ
6. ಪ್ರಾಥಮಿಕ ವಿದ್ಯಾಲಯಗಳಲ್ಲಿ ಮಕ್ಕಳ ಅಭಿರುಚಿಗೆ ತಕ್ಕ ಪುಸ್ತಕಗಳಿಲ್ಲದೆ ಓದುವಿಕೆಗೆ ಹೆಚ್ಚು ಪ್ರೋತ್ಸಾಹ ದೊರಕುವುದಿಲ್ಲ
7. ಆಟಗಳಿಗೆ ತಕ್ಕ ಆಟದ ಬಯಲಿಲ್ಲ
8. ಪರಂಪರಾಗ ಕಲಾಗಾರರನ್ನು ಜನರು ಗುರುತಿಸುವುದಿಲ್ಲ

ಪರಿಹಾರಗಳು

1. ಎಲ್ಲಾ ಸಾಂಸ್ಕೃತಿಕ ಸಂಘಟನೆಗಳಿಗೆ ಪ್ರೋತ್ಸಾಹ ಮತ್ತು ಮಾರ್ಗದರ್ಶನವೀಯಬಲ್ಲ ಸಾಂಸ್ಕೃತಿಕ ಕೇಂದ್ರವನ್ನು ಸ್ಥಾಪಿಸುವುದು.
2. ಜಾನಪದ ಕಲೆಯನ್ನು ಬೆಳೆಸಲು ಜಾನಪದ ಕಲಾ ಕೇಂದ್ರವನ್ನು ಸ್ಥಾಪಿಸುವುದು
3. ಕ್ರೀಡೆಗೆ ಪ್ರೋತ್ಸಾಹ ಕೊಡುವುದರೊಂದಿಗೆ ಅಗತ್ಯವಿದ್ದಲ್ಲಿ ಕ್ರೀಡಾಂಗಣವನ್ನು ನಿರ್ಮಿಸುವುದು.
4. ಸಾಂಸ್ಕೃತಿಕ ಕಾರ್ಯಕ್ರಮಗಳ ಪ್ರಚಾರ ಹಾಗೂ ಪ್ರದರ್ಶನಕ್ಕೆ ಒಂದು ಸಮಿತಿಯನ್ನು ರೂಪೀಕರಿಸಿ ಇದರ ಅಧೀನದಲ್ಲಿ ಸಭಾಭವನ ಹಾಗೂ ಕಲ್ಯಾಣ ಮಂಟಪವನ್ನು ಸ್ಥಾಪಿಸುವುದು .
5. ಪೊಸಡಿ ಗುಂಪೆಯಲ್ಲಿ ರೇಡಿಯೋ ರಿಲೇಕೇಂದ್ರ, ಟೆಲಿವಿಷನ್ ರಿಲೇ ಕೇಂದ್ರ ಹಾಗೂ ಮೈ ಕ್ರೋ ಟೆಲಿಫೋನ್ ಕೇಂದ್ರವನ್ನು ಸ್ಥಾಪಿಸುವುದು. ಮತ್ತು ಅಂತಾರಾಷ್ಟ್ರೀಯ ಪ್ರವಾಸಿಕೇಂದ್ರವನ್ನಾಗಿ ಮಾಡುವ ಸರಕಾರದ

ಯೋಜನೆಯನ್ನು ತ್ವರಿತಗೊಳಿಸುವುದು

6. ಪ್ರತಿ ವಾರ್ಡಿನ ಮುಖ್ಯ ಸ್ಥಳಗಳಲ್ಲಿ ಪುಸ್ತಕಾಲಯ ಮತ್ತು ವಾಚನಾಯಗಳನ್ನು ಸ್ಥಾಪಿಸುವುದು.

7. ಕುರುಡಪದವು, ಚಿಪ್ಪಾರುಪದವು ಮುಳಿಗದ್ದೆ ಮತ್ತು ಪೆರ್ಮುದೆಯಲ್ಲಿ ದೂರದರ್ಶನ ಕೇಂದ್ರಗಳನ್ನು ಸ್ಥಾಪಿಸುವುದು

8. ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಕ್ಲಬ್‌ಗಳಿಗೆ ಧನ ಸಹಾಯ ನೀಯುವುದು

9. ವ್ಯಾಯಾಮ ಶಾಲೆಗಳನ್ನು ಸ್ಥಾಪಿಸುವುದು

10. ಅನಾಥಾಲಯಗಳನ್ನು ಸ್ಥಾಪಿಸುವುದು

11. ಚರ್ಚಾ ಗೋಷ್ಠಿಗಳನ್ನು ಏರ್ಪಡಿಸುವುದು

12. ಕೊಮ್ಮಂಗಳ ಮೈದಾನವನ್ನು ಕ್ರೀಡಾಂಗಣ ಮತ್ತು ಟೂರಿಸ್ಟ್ ಕೇಂದ್ರವಾಗಿ ಪರಿವರ್ತಿಸಬೇಕು.

13. ಶ್ರೇಷ್ಠ ಕಲಾಗಾರರನ್ನು ಗುರುತಿಸಿ ಪಾರಿತೋಷಕ ಮತ್ತು ಗೌರವ ಧನವನ್ನೀಯಬೇಕು.

14. ದೇಶೀಯ ಹಬ್ಬ ಆಚರಣೆಗಳ ಮೂಲಕ ಜನರಲ್ಲಿ ಒಗ್ಗಟ್ಟನ್ನು ಮಾಡಬೇಕು.

15. ಅನ್ಯಾಯ ಆಕ್ರಮಗಳನ್ನು ಎದುರಿಸಲು ಮತ್ತು ಜನರಿಗೆ ಸಹಕರಿಸಲು ಸನ್ನದ್ಧ ಸಂಘಟನೆಗಳನ್ನು ರೂಪೀಕರಿಸಬೇಕು.

16. ಮಹಾಪುರುಷರ ಅರಿವನ್ನುಂಟು ಮಾಡಲು ಯೋಗ್ಯ ವೇದಿಕೆಗಳಿರಬೇಕು.

17. ಅನೌಪಚಾರಿಕ ವಿದ್ಯಾ ಕೇಂದ್ರಗಳನ್ನು ಅಲ್ಲಲ್ಲಿ ತೆರೆದು ಎಲ್ಲರೂ ಅಕ್ಷರಸ್ಥರಾಗುವಂತೆ ಮಾಡಬೇಕು.

18. ಜನರ ಐಕ್ಯತೆಗೆ ಉತ್ತಮ ಆದರ್ಶಗಳ ವಿನಿಮಯಕ್ಕೆ ಪಂಚಾಯತು ಮಟ್ಟದಲ್ಲಿ ಸರ್ವಧರ್ಮ ಸಮ್ಮೇಳನವನ್ನು ಜರುಗಿಸಬೇಕು.

ಜೀವನದ ವಿವಿಧ ಕ್ಷೇತ್ರಗಳಲ್ಲಿ ಮಹತ್ತಾದ ಬದಲಾವಣೆಗಳನ್ನುಂಟು ಮಾಡಲು ಸಾಂಸ್ಕೃತಿಕ ರಂಗಕ್ಕೆ ಸಾಧ್ಯವಿದೆ. ಅಮೂಲ್ಯವಾದ ನೈತಿಕತೆಯು ದಿನದಿಂದ ದಿನಕ್ಕೆ ಕ್ಷಯಿಸುತ್ತಿರುವುದರ ವಿರುದ್ಧ ಜಾಗರೂಕರಾಗಿದ್ದು ಉತ್ತಮ ಸಂಸ್ಕೃತಿಯನ್ನು ಬೆಳೆಸುವುದೇ ನಮ್ಮ ಕರ್ತವ್ಯವಾಗಿದೆ.

ನಮ್ಮೂರ ಸಂಸ್ಕೃತಿ

ನೋಡ ಬನ್ನಿ ನಮ್ಮ ನಾಡ
ಚೆಲುವ ನೆಲೆ ಪೈವಳಿಕೆ
ಸಾಂಸ್ಕೃತಿಕ ಕಲೆ ಜಾನಪದದ ನೆಲೆ
ಹತ್ತು ಹಲವು ವೇಷ ಭಾಷೆ ಸಂಗಮ
ಪೈಯರಾಳಿದ ಪೈವಳಿಕೆ
ಬಲ್ಲಾಳರ ಸರಾಳಿದ ನಲ್ಮೆಯ ನಾಡು
ಸಾಂಸ್ಕೃತಿಕ ಕಲೆಗಳಿವೆ ಊರ ತುಂಬಾ
ಭೂತ ಕೋಲ ನೇಮ ಜಾತ್ರೆ
ಹಿಂದು ಮುಸ್ಲಿಂ ಕ್ರಿಸ್ತರುಗಳು
ಜಾತಿಗೊಂದು ಭಾಷೆಗಳು
ಆದರಿಲ್ಲ ಇಲ್ಲಿ ಕೋಮುವಾದ
ಹಿಂಸೆ ತರುವ ಜಾತಿಭೇದ
ಅಣ್ಣ ತಮ್ಮ ಬಂಧು ಭಾವನೆ
ಎಲ್ಲರಲ್ಲಿ ಇರಲು ಇಲ್ಲಿ ಎಲ್ಲಿ ಭಿನ್ನ ಯೋಚನೆ
ಆಟಿಕಳಂಜ, ಸೋಣ ಜೋಗಿ ಮಾದಿರ
ಯಕ್ಷಗಾನ, ಕೋಳಿ ಅಂಕ ಪಾಡ್ಡನ
ಊರದೈವ ಉಳ್ಳಾಳ್ತಿ, ಆವಳದ ಕೊರತಿ
ಕಲ್ಲುರ್ಟಿ ಕಲ್ಕುಡ ಕೊರಗುತನಿಯ ನೇಮವು
ಜಟಿಧಾರಿ, ಮಲರಾಯ, ವಿಷ್ಣುಮೂರ್ತಿ ಒತ್ತೆಕೋಲ
ಚಿಪ್ಪಾರಿನ ಹಿರಿಮೆ ಕೋಟಿ ಚೆನ್ನಯ ಗರಡಿಗೆ
ಜಾರದರ್ಗಾ ಮುಖ್ಯ ಮಸೀದಿ ಪ್ರಾರ್ಥನೆ
ವರ್ಷ ವರ್ಷ ನಡೆಯುತಿದೆ ಹರಕೆ ಹಬ್ಬದಪ್ಪುನೇರ್ಚೆ
ಬಕ್ರೀದ್, ಮೊಹರಂ, ಪೆರುನಾಳ್
ಆಚರಿಸುವರು ಹಲವ ಒಗೆಯೊಳ್
ಕ್ರಿಸ್ತ ಸಮುದಾಯದ ಸಂತ ಮೇರಿ ಕ್ರಿಸ್ಮಸ್
ಚೌತಿ, ಷಷ್ಠಿ, ಅಷ್ಟಮಿ, ದಸರಾ, ಮಕರ ಯುಗಾದಿಯೂ
ವಿಷುವಿನಂತ ಹಬ್ಬವೂ ವರುಷ ಹರುಷ ತರುವುದೂ
ಜಾತಿ ಭೇದ ತೊರೆದಿದೇ... ಪೈವಳಿಕೆ ತಲೆ ಎತ್ತಿ ನಗುತಿದೆ!!



ಮಹಿಳಾ ಕ್ಷೇಮ

ಮಹಿಳೆ ಸಮಾಜದಲ್ಲಿ ಯಾವತ್ತೂ ಪುರುಷ ವರ್ಗಕ್ಕೆ ಸಮಾನಸ್ಥಾನ ಹೊಂದಿರತಕ್ಕದ್ದು. ಸಾಮಾಜಿಕ ತಕ್ಕಡಿಯ ಸಮಾನ ಎರಡು ತಟ್ಟೆಗಳಲ್ಲಿ ಸ್ತ್ರೀಯೂ ಒಬ್ಬಳು. ಆದುದರಿಂದ ಸ್ತ್ರೀಯ ಸ್ಥಾನಮಾನವು ಪುರುಷ ವರ್ಗಕ್ಕೆ ಸಮಾನವಾಗಿಲ್ಲದಿದ್ದರೆ ಸಮಾಜದ ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ನೈತಿಕ, ಬೆಳವಣಿಗೆಯು ಅಸಮತೋಲನವನ್ನು ಪಡೆಯುತ್ತದೆ. ಯಥಾರ್ಥದಲ್ಲಿ ಸ್ತ್ರೀ ನಮ್ಮ ಸಮಾಜದ ಮೊದಲನೆಯ ಶಿಕ್ಷಕಿಯಾಗಿದ್ದಾಳೆ. ಆಕೆಯಿಂದ ನಮ್ಮ ಸಂಸ್ಕೃತಿ, ನೈತಿಕತೆ, ಜನಾಂಗದಿಂದ ಜನಾಂಗಕ್ಕೆ ಮುಂದುವರಿಯಲ್ಪಡುತ್ತದೆ. ಅಭಿವೃದ್ಧಿ ಹೊಂದಿದ ಸಮಾಜಗಳಲ್ಲಿ ಸಮಾಜದ ಆರ್ಥಿಕ ಮತ್ತು ರಾಜಕೀಯ ಕೊಡುಗೆಗಳಲ್ಲೂ ಪುರುಷನಿಗೆ ಸರಿಸಮನಳಾಗಿ ತನ್ನ ಕೊಡುಗೆಯನ್ನು ನೀಡುತ್ತಾ ಇದ್ದಾಳೆ. ಪ್ರತಿಯೊಂದು ಸಮಾಜವು ತನ್ನ ಅಭಿವೃದ್ಧಿಗೆ ಬೇಕಾಗಿ ಸ್ತ್ರೀ ಸಮೂಹದಿಂದ ಆಕೆ ನೀಡುವ ಸಂಪೂರ್ಣ ಕೊಡುಗೆ ಯನ್ನು ಇದು ನಿರೀಕ್ಷಿಸುತ್ತದೆ. ಸ್ತ್ರೀಯರ ಬಗ್ಗೆ ಇಂದು ದೃಷ್ಟಿಕೋನವು ಬದಲಾಗಿರುವುದರಿಂದ ನಮ್ಮ ಪಂಚಾಯತಿನ ಸ್ತ್ರೀ ವರ್ಗದಿಂದಲೂ ನಾವು ಬಹಳಷ್ಟು ನಿರೀಕ್ಷೆಯನ್ನು ಮಾಡಬೇಕಾಗುತ್ತದೆ. 'ಹೆಣ್ಣು ಸಂಸಾರದ ಕಣ್ಣು' ತೊಟ್ಟಿಲು ತೂಗುವ ಕೈ ಜಗವನ್ನೇ ಆಳಬಲ್ಲುದು. ನಿಜ ತಾನೇ?

ಕ್ರ.ಸಂ.	ಕ್ಷೇತ್ರ	ಒಟ್ಟು ಸಂಖ್ಯೆ	ಶೇಕಡಾವಾರು
1.	ಅಕ್ಷರಸ್ಥರು (1991 ಜನಗಣತಿ)	8956	64%
2.	ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಈಗ ಕಲಿಯುತ್ತಿರುವವರು (1996-97)	2269	
3.	ಪ್ರೌಢಶಾಲೆಯಲ್ಲಿ ಈಗ ಕಲಿಯುತ್ತಿರುವ ಮಕ್ಕಳು (1996-97)	430	
4.	ಪರಿಶಿಷ್ಟ ವರ್ಗಕ್ಕೆ ಸೇರಿದವರು (1991ಜನಗಣತಿ)	1036	7.42%
5.	ಪರಿಶಿಷ್ಟ ಜಾತಿಗೆ ಸೇರಿದವರು (1991ಜನಗಣತಿ)	839	6.01%
6.	ನಿರುದ್ಯೋಗಿಗಳು (1991 ಜನಗಣತಿಯಂತೆ)	3561	25.51%
7.	ಉದ್ಯೋಗಿಗಳು (ಕಾರ್ಮಿಕರು) 1996ರ ಅಂದಾಜು ಅನಿಯಮಿತ ಕಾರ್ಮಿಕರೂ ಸೇರಿರುತ್ತಾರೆ	9909	71%
8.	ವಿಧವಾ ವೇತನ ವಯಸ್ಕ ವೇತನ ಸಿಗುವ ಮಹಿಳೆಯರ ಸಂಖ್ಯೆ	167	1.19%

ನಮ್ಮ ಪೈವಳಿಕೆ ಪಂಚಾಯತಿನಲ್ಲಿ ಸ್ತ್ರೀ ಶಕ್ತಿಯು ಈವರೆಗೆ ಯೋಗ್ಯವಾಗಿ ಬಳಕೆಯಾಗಿಲ್ಲವೆನ್ನಹುದು. ಇದರರ್ಥ ಆಕೆ ತನ್ನ ಕುಟುಂಬದ ಆದಾಯಕ್ಕೆ ಯಾವುದೇ ಕೊಡುಗೆಯನ್ನು ನೀಡುತ್ತಿಲ್ಲವೆಂದಲ್ಲ. ಸಾಧಾರಣವಾಗಿ ಆಕೆ ಬೀಡಿ ಕಾರ್ಮಿಕಳಾಗಿಯೋ ಮನೆಕಾರ್ಮಿಕಳಾಗಿಯೋ, ಕೃಷಿ ಕಾರ್ಮಿಕಳಾಗಿಯೋ, ದುಡಿದು ತನ್ನ ಕುಟುಂಬದ ಖರ್ಚು ವೆಚ್ಚಗಳಿಗೆ ತನ್ನ ಹೆಗಲನ್ನು ನೀಡುತ್ತಿದ್ದಾಳೆ. ಇಲ್ಲಿ ಕಾಣಬೇಕಾದ ಪ್ರಧಾನ ಅಂಶವೆಂದರೆ ಸಮಾಜದಲ್ಲಿ ಆಕೆಯ ದುಡಿತಕ್ಕೆ ಗೌರವವಿಲ್ಲದಿರುವುದು. ಕೆಲವು ಕುಟುಂಬಗಳು, ಕುಟುಂಬನಾಥನಿದ್ದರೂ, ಸ್ತ್ರೀಯ ಆದಾಯದಿಂದ ಮಾತ್ರವೇ ನಡೆಯುತ್ತದೆ. ಕುಟುಂಬನಾಥನ ಆದಾಯವು ಅತನ ಬೇಜವಾಬ್ದಾರಿಯಿಂದಾಗಿ ಕುಟುಂಬದ ಅನುಕೂಲಕ್ಕೆ ಸಿಗುವುದಿಲ್ಲ. ಆಕೆ ಮೂಕಸಾಕ್ಷಿಯಾಗಿ ತನ್ನ ಶೋಷಣೆಯನ್ನು ಸಹಿಸಿಕೊಳ್ಳುತ್ತಾಳೆ.

1991ರ ಜನಗಣತಿಯಂತೆ ಪಂಚಾಯತಿನ ಒಟ್ಟು ಸ್ತ್ರೀ ಜನಸಂಖ್ಯೆಯು 13,956 ಆಗಿರುತ್ತದೆ. ಇವರಲ್ಲಿ 8956 ಮಂದಿ ಸಾಕ್ಷರರಾಗಿರುತ್ತಾರೆ. ಪರಿಶಿಷ್ಟ ವರ್ಗದ ಸ್ತ್ರೀಯರು 1036 ಮಂದಿ ಇದ್ದರೆ ಪರಿಶಿಷ್ಟ ಜಾತಿಯ ಸ್ತ್ರೀಯರು 839 ಪಂಚಾಯತಿನ ಪ್ರಧಾನ ಸಮಸ್ಯೆ ದಾರಿದ್ರ್ಯವು ಸ್ತ್ರೀಯರನ್ನೂ ಭಾದಿಸಿದೆ. ಇದಲ್ಲದೆ ಸ್ತ್ರೀ ಪುರುಷನಿಗಿಂತ ದುರ್ಬಲಳು ಎನ್ನುವ ಭಾವನೆಯೂ ಪುರುಷರಲ್ಲಿ ಮಾತ್ರವಿರುವುದಲ್ಲದೆ ಸ್ತ್ರೀಯು ಈ ಚಿಂತನೆಯನ್ನು ತನ್ನಲ್ಲಿ ಬೆಳೆಸಿಕೊಂಡಿರುತ್ತಾಳೆ. ಆದುದರಿಂದ ಆಕೆ ತಾನು ಸಶಕ್ತಳು ಎನ್ನುವುದನ್ನು ಸ್ವೀಕರಿಸಿ ಯಾವುದೇ ರಂಗದಲ್ಲೂ ಮುಂದೆ ಬರಲು ತಯಾರಿಲ್ಲದಿರುವುದು ಸಮಸ್ಯೆಯಾಗಿದೆ. ಆಕೆ ಸಂರಕ್ಷಿತಳಾಗಿರಬೇಕೆನ್ನುವ ಭಾವನೆಯಲ್ಲಿ ಕೇವಲ ಮನೆಯೊಳಗಿನ ಹೆಣ್ಣಾಗಿದ್ದಾಳೆ ಪುರುಷನ ಯಾವುದೇ ಅನ್ಯಾಯವನ್ನು ಸಹಿಸುತ್ತಾಳೆ. ಗಂಡನು ತನ್ನ ಮಾರ್ಗದರ್ಶಕನೆಂದು ಸ್ವೀಕರಿಸಿ ಪುರುಷನ ಯಾವುದೇ ಕುರುಡು ನಿರ್ದೇಶನಗಳನ್ನು ಅನುಸರಿಸಿ ದುಡಿದು ಆದಾಯವನ್ನು ಗಂಡನಿಗೆ ಒದಗಿಸುವ ಯಂತ್ರವಾಗಿದ್ದಾಳೆ. ಇದರರ್ಥ ಆಕೆ ಪುರುಷ ಸಮಾಜವನ್ನು ಧಿಕ್ಕರಿಸಿ ನೆಟೆದು ನಿಲ್ಲಬೇಕೆಂದಲ್ಲ. ಆದರೆ ಪುರುಷನೊಡನೆ ಸಮಾನತೆಯನ್ನು ಪಡೆಯಬೇಕಾಗಿದೆ. ಈ ವಿವರಗಳೊಡನೆ ನಾವು ಸ್ತ್ರೀಯರ ಸಮಸ್ಯೆಗಳನ್ನು ಪರಿಶೀಲಿಸೋಣ.

ಸಮಸ್ಯೆಗಳು

1. ಸ್ತ್ರೀ ಸಾಕ್ಷರತೆಯಲ್ಲಿ ನಮ್ಮ ಪಂಚಾಯತು ತೀರ ಹಿಂದೆಯಲ್ಲದಿದ್ದರೂ ಮುಂದಿಲ್ಲ. ಇದರಿಂದಾಗಿ ಸ್ತ್ರೀಯರ ಚಿಂತನೆಗಳಲ್ಲಿ ಜಾಗೃತಿ ಉಂಟಾಗಿಲ್ಲ. ಆಕೆ ಇನ್ನೂ ಕಾಲದ ಪರಿಧಿಯಿಂದ ಹೊರಗೆ ಬಂದಿಲ್ಲ.

2. ಹೆಣ್ಣು ಮಕ್ಕಳನ್ನು ಸಾಧಾರಣವಾಗಿ ಮಾಧ್ಯಮಿಕ ತರಗತಿಗಳ ಹಂತದಲ್ಲಿ ಶಾಲೆಗಳನ್ನು ಬಿಡಿಸುತ್ತಾರೆ. ಮತ್ತು ಹೆಚ್ಚಿನ ಸಂದರ್ಭಗಳಲ್ಲಿ S.S.L.C. ಆದೊಡನೆ ವಿದ್ಯಾಭ್ಯಾಸ ನಿಲ್ಲಿಸುತ್ತಾರೆ. ಹಿರಿಯರು ಉನ್ನತ ವಿದ್ಯಾಭ್ಯಾಸಕ್ಕೆ ದೂರದ ಊರುಗಳಿಗೆ ಕಳುಹಿಸಲು ತಯಾರಾಗುವುದಿಲ್ಲ. ಹೆಣ್ಣು ಉನ್ನತ ವಿದ್ಯಾಭ್ಯಾಸವನ್ನು ಪಡೆದರೆ ಆಕೆಗೆ ಅನುಯೋಗ್ಯನಾದ, ವಿದ್ಯಾವಂತನಾದ ಗಂಡನ್ನು ಭಾರೀ ವರದಕ್ಷಿಣೆಯನ್ನು ಕೊಟ್ಟು ಮದುವೆ ಮಾಡಲು ಸಾಧ್ಯವಾಗುವುದಿಲ್ಲ.

3. ಕುಟುಂಬದ ಆದಾಯವನ್ನು ಹೆಚ್ಚಿಸಲಿಕ್ಕಾಗಿ ಸಾಧಾರಣವಾಗಿ ಹೆಣ್ಣು ಮಕ್ಕಳನ್ನು ಶಾಲೆಯಿಂದ ಬಿಡಿಸಿ ವಿದ್ಯಾಭ್ಯಾಸ ವಂಚಿತರನ್ನಾಗಿ ಮಾಡುತ್ತಾರೆ. ಪ್ರಧಾನವಾಗಿ ಬಡ ಕುಟುಂಬಗಳು ಹೆಣ್ಣು ಮಕ್ಕಳನ್ನು ಬೀಡಿಕಟ್ಟಲು ಪ್ರೇರೇಪಿಸುವರು.

4. ಸ್ತ್ರೀಯರಿಗೂ, ಪುರುಷರಿಗೂ ಕೂಲಿ ದರದಲ್ಲಿ ವ್ಯತ್ಯಾಸ ನಮ್ಮಲ್ಲಿದೆ. ಸಮಾನ ಅವಧಿಯ, ಸಮಾನ ಶ್ರಮದ ಸಮಾನ ಜವಾಬ್ದಾರಿಯ ಒಂದು ಕೆಲಸಕ್ಕೆ ಪುರುಷನಿಗೆ ಸಂಬಳ ಹೆಚ್ಚಾದರೆ ಸ್ತ್ರೀಗೆ ಸಂಬಳ ಕಡಿಮೆ. ಪುರುಷನ ಸಂಬಳದ ಸಾಧಾರಣ 60% ಸಂಬಳವನ್ನು ಸ್ತ್ರೀಗೆ ನೀಡುತ್ತಾರೆ.

5. ಪಂಚಾಯತಿನಲ್ಲಿ ಸ್ತ್ರೀಯರಿಂದ ನಡೆಸಲ್ಪಡುವ ಯಾವುದೇ ಉದ್ಯೋಗ ಘಟಕಗಳಿಲ್ಲ. ಸರಕಾರದ D.W.C.R.A. ಪದ್ಧತಿಯಲ್ಲಿ ಮಹಿಳೆಯರಿಗೆ ಉದ್ಯೋಗ ಸಂಸ್ಥೆಗಳನ್ನು ಸ್ಥಾಪಿಸಲು ಪ್ರೋತ್ಸಾಹವಿದ್ದರೂ ನಮ್ಮ ಮಹಿಳೆಯರಲ್ಲಿ ಉದ್ಯಮ ಜವಾಬ್ದಾರಿಯ ಸಾಹಸಸ್ಫೂರ್ತಿ ಇಲ್ಲದಿರುವುದರಿಂದ ಯಾವುದೇ ಉದ್ಯಮಗಳು ಸ್ಥಾಪನೆಯಾಗಿಲ್ಲ. ಆದರೆ ಉದ್ಯಮ ಸ್ಥಾಪನೆಗೆ ಅವಕಾಶಗಳು ಬೇಕಾದಷ್ಟಿವೆ.

6. ಮಹಿಳೆಯರಲ್ಲಿ ಮಹಿಳೆಯರ ಹಕ್ಕುಗಳ ಬಗ್ಗೆ ಮತ್ತು ಕರ್ತವ್ಯಗಳ ಬಗ್ಗೆ ಜಾಗೃತಿಯನ್ನು ಮಾಡುವರೆ ಒಂದೆರಡು ಮಹಿಳಾ ಸಂಘಗಳಿವೆಯಷ್ಟೆ. ಇವುಗಳ ಪ್ರವರ್ತನೆಯೂ ತೃಪ್ತಿಕರವಾಗಿಲ್ಲ. ಪ್ರಸ್ತುತ ಪ್ರವರ್ತಿಸುವ ಮಹಿಳಾ ಸಂಘಟನೆಗಳು.

1.ಅಟ್ಟೆಗೋಳಿ ಮಹಿಳಾ ಸಮಾಜ - ಅಟ್ಟೆಗೋಳಿ ಕಯ್ಯಾರು

2. ಕುರುಡ ಪದವು ಮಹಿಳಾ ಸಮಾಜ - ಕುರುಡ ಪದವು

3. ಚೇರಾಲು ಮಹಿಳಾ ಸಮಾಜ - ಚೇರಾಲು

4. ಜ್ಯೋತಿ ಮಹಿಳಾ ಸಮಾಜ (ರಿ)- ಚೇವಾರು ಕುಡಾಲುಮೇರ್ಕಳ

7. ನಮ್ಮ ದುಡಿಯುವ ಮಹಿಳೆಗೆ ಆಕೆಯ ಚಿಕ್ಕ ಮಕ್ಕಳನ್ನು ನೋಡಿ ಕೊಳ್ಳಲು ಶಿಶು ಮಂದಿರಗಳಿಲ್ಲ. ಮನೆಯ ಜವಾಬ್ದಾರಿಯೊಡನೆ ಮಕ್ಕಳ ಜವಾಬ್ದಾರಿ ಅಲ್ಲದೆ ಹೊರಗಿನ ಕೆಲಸ ಆಕೆಯನ್ನು ಸುಸ್ತಾಗಿಸುತ್ತದೆ.

8. ನಮ್ಮ ಸಮಾಜದ ಹೆಚ್ಚಿನ ಸ್ತ್ರೀಯರು ಪೌಷ್ಟಿಕ ಆಹಾರದ ಕೊರತೆಯನ್ನು ಅನುಭವಿಸುತ್ತಿದ್ದಾರೆ. ರಕ್ತ ಹೀನತೆ, ಪ್ರಸವಾನಂತರದ ವಾತ ಸಾಮಾನ್ಯ ರೋಗಗಳಾಗಿವೆ. ಇವುಗಳಿಗೆ ಚಿಕಿತ್ಸೆಯ ವ್ಯವಸ್ಥೆಯು ತೃಪ್ತಿಕರವಾಗಿಲ್ಲ. ನಮ್ಮ ಮಹಿಳಾ ಸಂಘಟನೆ ಗಳು ಮತ್ತು ಇತರ ಸಂಘಟನೆಗಳು ಮಹಿಳೆಯರಿಗೆ ಆಹಾರ ಕ್ರಮದ ಮತ್ತು ಶುಚಿತ್ವದ, ಆರೋಗ್ಯ ರಕ್ಷಣೆಯ ಕ್ರಮಗಳನ್ನು ತಿಳಿಸುವ ಹೊಣೆಯನ್ನು ನಿರ್ವಹಿಸುವುದಿಲ್ಲ. ಆರೋಗ್ಯ ಇಲಾಖೆಯ ಸಿಬ್ಬಂದಿಗಳು ಯಥಾರ್ಥ ಪ್ರಯತ್ನವನ್ನು ಮಾಡುವುದಿಲ್ಲ.

9. ಸ್ತ್ರೀಯರನ್ನು ಬಾಧಿಸುವ ಇನ್ನೊಂದು ಸಮಸ್ಯೆ ವರದಕ್ಷಿಣೆಯಾಗಿದೆ.

10. ಮಕ್ಕಳ ಪಾಲನೆಯ ಬಗ್ಗೆ ಶಿಕ್ಷಣದ ಕೊರತೆ.

11. ಕುಟುಂಬ ಕಲ್ಯಾಣ ಯೋಜನೆಯ ಬಗ್ಗೆ ಸ್ತ್ರೀಯರಿಗೆ ಸರಿಯಾದ ಮಾಹಿತಿ ದೊರಕಿಲ್ಲ.

12. ಸ್ತ್ರೀಯರಿಗೆ ಕಾನೂನು ಪರವಾಗಿ ಸಿಗುವ ಸೌಲಭ್ಯಗಳ ಅಜ್ಞಾನ.

13. ವಿದ್ಯಾಭ್ಯಾಸದಲ್ಲಿ ಹಿಂದುಳಿದಿರುವಿಕೆ

ಪರಿಹಾರಗಳು

1. ಸಾಕ್ಷರತಾ ಕಾರ್ಯಕ್ರಮವನ್ನು ಪುನರೂರ್ಜಿತಗೊಳಿಸಿ ಸ್ತ್ರೀಯರಲ್ಲಿ ಸಾಕ್ಷರತೆಯೊಡನೆ ಅವರ ವಿವಿಧ ಹಕ್ಕುಗಳ ಮತ್ತು ಸವಲತ್ತುಗಳ ತಿಳುವಳಿಕೆಯನ್ನು ಮೂಡಿಸುವುದು.

2. ಪಂಚಾಯತಿನಲ್ಲಿ ಜೂನಿಯರ್ ಕಾಲೇಜೊಂದನ್ನು ಸ್ಥಾಪಿಸುವುದು. ವಿದ್ಯಾರ್ಥಿನಿಯರನ್ನು ಮತ್ತು ಹಿರಿಯರನ್ನು, ವಿದ್ಯಾರ್ಥಿನಿಯರ ವಿದ್ಯಾಭ್ಯಾಸಕ್ಕಾಗಿ ಪ್ರೇರೇಪಿಸುವುದು. ಇದಕ್ಕಾಗಿ ಪ್ರೋತ್ಸಾಹ ಧನ ಮತ್ತು ಇತರ ಪ್ರೋತ್ಸಾಹಗಳನ್ನು ನೀಡುವುದು.

3. ಹೆಣ್ಣು ಮಕ್ಕಳನ್ನು ಶಾಲೆಗೆ ಕಳುಹಿಸುವರೇ ಮನೆ ಮನೆಗಳಲ್ಲಿ ತಿಳಿಸಲು ಸ್ವಯಂ ಸೇವಿಕೆಯರನ್ನು ನೇಮಿಸುವುದು. ಸ್ವಯಂ ಸೇವಿಕೆಯರಿಗೆ ಅವರ ಕೆಲಸಕ್ಕೆ ಅಗತ್ಯವಿರುವ ಸೌಲಭ್ಯಗಳನ್ನೂ, ಪ್ರೋತ್ಸಾಹವನ್ನೂ ಪಂಚಾಯತ್ ನೀಡಬೇಕು. ಸ್ವಯಂ ಸೇವಿಕೆಯರು ವಾರ್ಡು ಮಟ್ಟದಲ್ಲಿ ಇಬ್ಬರಾದರೂ ಇರಬೇಕು. ಇವರು ತಮ್ಮ ಕೆಲಸದ ವರದಿಯನ್ನು ವಾರಕ್ಕೊಮ್ಮೆಯಾದರೂ ಪಂಚಾಯತಿಗೆ ನೀಡಬೇಕು. ವಿದ್ಯಾಭ್ಯಾಸ ಪಡೆಯಬೇಕಾದ ಯಾವುದೇ ಹೆಣ್ಣು ಮಗುವು ಮನೆಯಲ್ಲಿ ಉಳಿಯದಂತೆ ನೋಡಿಕೊಳ್ಳುವ ಜವಾಬ್ದಾರಿಯನ್ನು ಪಂಚಾಯತು ವಹಿಸಿಕೊಳ್ಳಬೇಕು.

4. ಸ್ತ್ರೀ ಪುರುಷರ ಕೂಲಿಯ ವ್ಯತ್ಯಾಸವನ್ನು ತಿಳಿದು ಸರಿಪಡಿಸುವರೆ ಜವಾಬ್ದಾರಿಯನ್ನು ಗ್ರಾಮ ಸೇವಕರಿಗೆ ನಿಡತಕ್ಕದ್ದು. ಇದನ್ನು ಸರಿಪಡಿಸಲು ಅಗತ್ಯವಿದ್ದಲ್ಲಿ ಕಾನೂನು ಸಲಹೆಗಳನ್ನು ನೀಡಲು ಗ್ರಾಮ ಸೇವಕರು ತಯಾರಿರಬೇಕು.

5. ನಮ್ಮ ಪಂಚಾಯತಿನಲ್ಲಿ ಮಹಿಳಾ ಉದ್ಯಮಗಳನ್ನು ಸ್ಥಾಪಿಸಲು ಮಹಿಳೆಯರನ್ನು ಪ್ರೇರೇಪಿಸಲು ಓರ್ವ ಮಹಿಳಾ ಗ್ರಾಮ ಸೇವಕಿಯು ಇರತಕ್ಕದ್ದು. ಅನೌಪಚಾರಿಕ ಶಿಕ್ಷಣ ಸಂಸ್ಥೆಗಳಿಂದ ಮಹಿಳೆಯರಿಗೆ ಮಾಹಿತಿಗಳನ್ನು ನೀಡಲು (ಮಹಿಳಾ ಉದ್ಯಮ ಮೇಖಿಲೆಗಳ ಕುರಿತು) ವಿವಿಧ ಕಾರ್ಯಕ್ರಮಗಳನ್ನು ನಡೆಸಬೇಕು.

6. ಮಹಿಳೆಯರ ವಿವಿಧ ಸವಲತ್ತುಗಳನ್ನು ಹಕ್ಕುಗಳನ್ನು ತಿಳಿಯಲು ಶೋಷಣೆಯ ವಿರುದ್ಧ ದನಿಯೆತ್ತಲು ಪಂಚಾಯತು ಕೇಂದ್ರವಾಗಿಟ್ಟುಕೊಂಡು ಮಹಿಳಾ ಹಕ್ಕು ಸಂರಕ್ಷಣಾ ಕಾವಲು ಸಮಿತಿಯನ್ನು ನೇಮಿಸತಕ್ಕದ್ದು.

7. ಪ್ರತೀ ವಾರ್ಡುಗಳಿಗೆ ಎರಡರಂತೆ ಶಿಶು ಮಂದಿರಗಳು ಮತ್ತು ಬಾಲವಾಡಿಗಳು ಮೂರರಂತೆ ಅಗತ್ಯವಿದೆ. ಇವುಗಳನ್ನು ಸ್ಥಾಪಿಸುವ ಕಾರ್ಯದಲ್ಲಿ ಪಂಚಾಯತು ಗಮನ ಹರಿಸಬೇಕು.

8. ಆರೋಗ್ಯ ಇಲಾಖೆಯಿಂದ ಪ್ರತೀ ವಾರ್ಡುಗಳಲ್ಲಿ ಸ್ತ್ರೀಯರ, ಗರ್ಭಿಣಿಯರ, ಮಕ್ಕಳ, ಮುದುಕಿಯರ, ಆರೋಗ್ಯ ಸಂರಕ್ಷಣೆಯ ಕುರಿತು ತಿಂಗಳಿಗೊಮ್ಮೆಯಾದರೂ ಮಾಹಿತಿ ತರಬೇತಿ ತರಗತಿಗಳು ನಡೆಯತಕ್ಕದ್ದು. ಈ ತರಗತಿಗಳಿಗೆ ಸ್ತ್ರೀಯರು ಹಾಜರಾಗುವಂತೆ ನೋಡಬೇಕಾದ ಕೆಲಸವು ಸ್ವಯಂ ಸೇವಿಕೆಯರಿಗೂ, ಆರೋಗ್ಯ ಇಲಾಖೆಯವರಿಗೂ ಇರಬೇಕು. ಸರಕಾರದಿಂದ ಸಿಗುವ ಉಚಿತ ಔಷಧಿಗಳು ಜನರಿಗೆ ಸಿಗುವಂತೆ ಪಂಚಾಯತು ನೋಡಿಕೊಳ್ಳಬೇಕು. ಕುಟುಂಬ ಕಲ್ಯಾಣ ಯೋಜನೆಗಳನ್ನು ಜನರಿಗೆ ತಿಳಿಸುವಲ್ಲಿ ಚಳವಳಿ ರೀತಿಯ ಕಾರ್ಯಕ್ರಮಗಳನ್ನು ಪಂಚಾಯತು ಹಮ್ಮಿಕೊಳ್ಳಬೇಕು. ಮಕ್ಕಳ ಪಾಲನೆಯ ಕುರಿತು ಈ ತರಬೇತಿ ಸಭೆಗಳಲ್ಲಿ ಶಿಕ್ಷಣ ನೀಡತಕ್ಕದ್ದು. ವಿವಿಧ ಆರೋಗ್ಯ ನಿಯಮಗಳ ಬಗ್ಗೆ ನೋಟೀಸು, ಕರಪತ್ರಗಳನ್ನು ಪಂಚಾಯತು ನೀಡತಕ್ಕದ್ದು.

9. ವರದಕ್ಷಿಣಾ ಸಮಸ್ಯೆಯನ್ನು ಪರಿಹರಿಸಲು ಕಾನೂನು ಮಾತ್ರವಲ್ಲದೆ ಕಟ್ಟುನಿಟ್ಟಿನ ಪಾಲನೆಯಾಗಲು ಪಂಚಾಯತು ಮತ್ತು ಸರಕಾರ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

10. ಸ್ತ್ರೀಯರ ಸಾಮಾಜಿಕ, ಸಾಂಸ್ಕೃತಿಕ, ಕ್ರೀಡೆಯ ಬೆಳವಣಿಗೆಗೆ ಕ್ರಮಗಳನ್ನು ಕೈಗೊಳ್ಳತಕ್ಕದ್ದು.

11. ದಾರಿದ್ರ್ಯ ನಿರ್ಮೂಲನಕ್ಕಾಗಿ ಸ್ತ್ರೀಯರಿಗೆ ವಿವಿಧ ಉದ್ಯಮಗಳಲ್ಲಿ ತರಬೇತಿಯನ್ನು ನೀಡುವ ಸಂಸ್ಥೆಗಳನ್ನು ಪಂಚಾಯತಿನಲ್ಲಿ ಸ್ಥಾಪಿಸತಕ್ಕದ್ದು. ಉದಾ : ಟೈಲರಿಂಗ್ ಸಂಸ್ಥೆ, ಅಣಬೆ ಬೆಳೆಸುವುದು, ಗ್ರೀಟಿಂಗ್ ಕಾರ್ಡ್ ಪ್ರಿಂಟಿಂಗ್, ಕೋಳಿ ಸಾಕಣೆ, ಹಪ್ಪಳ, ಉಪ್ಪಿನಕಾಯಿಗಳ ತಯಾರಿ ಇತ್ಯಾದಿ.

12. ಮಹಿಳಾ ಕ್ಷೇಮ ಪದ್ಧತಿಗಳು ಮಹಿಳೆಯರಿಗೆ ಲಭಿಸುವಂತೆ ಹೆಚ್ಚಿನ ಪ್ರಯತ್ನ ಅಗತ್ಯವಾಗಿದೆ. (ಉದಾ : ವಿಧವಾ ಪೆನ್ಶನ್, ವಾರ್ಧಕ್ಯ ಪೆನ್ಶನ್, ಕೃಷಿಕಾರ್ಮಿಕ ಪೆನ್ಶನ್, ಕ್ಷೇಮನಿಧಿ ಇತ್ಯಾದಿ)

ಸಹಕಾರಿ ರಂಗ

ಪೈವಳಿಗೆ ಗ್ರಾಮ ಪಂಚಾಯತಿನ ಪರಿಧಿಯಲ್ಲಿ ಈ ಕೆಳಗಿನ ಐದು ಗ್ರಾಮಗಳು ಸೇರಿವೆ. 1) ಚಿಪ್ಪಾರು, 2) ಪೈವಳಿಕೆ 3) ಬಾಯಾರು 4) ಕಯ್ಯಾರು 5) ಕುಡಾಲು ಮೇರ್ಕಳ. ಬಾಯಾರು ಗ್ರಾಮದ ಬಾಯಾರು ಪದವು ಮತ್ತು ಇದೇ ಗ್ರಾಮದ ಬೆರಿಪದವು ಎಂಬಲ್ಲಿ ಕಾರ್ಯವೆಸಗುವ ಬಾಯಾರು ಸೇವಾ ಸಹಕಾರಿ ಬ್ಯಾಂಕು, ಪೈವಳಿಕೆ, ಚಿಪ್ಪಾರು ಮತ್ತು ಕಯ್ಯಾರು ಗ್ರಾಮಗಳ ವ್ಯಾಪ್ತಿಗೆ ಒಳಪಟ್ಟ ಪೈವಳಿಕೆ ಎಂಬಲ್ಲಿ ಪೈವಳಿಕೆ ಸೇವಾ ಸಹಕಾರಿ ಬ್ಯಾಂಕು ಕಾರ್ಯವೆಸಗುತ್ತಿರುವುದು. ಸದ್ರಿ ಗ್ರಾಮ ಪಂಚಾಯತಿನ ವ್ಯಾಪ್ತಿಯಲ್ಲಿ ಚಿಪ್ಪಾರು ಪದವು, ಪೈವಳಿಕೆ ಹಾಗೂ ಜೋಡುಕಲ್ಲು ಎಂಬಲ್ಲಿ ಮೂರು ಕ್ಷೀರೋತ್ಪಾದಕ ಸಹಕಾರಿ ಸಂಘಗಳು ಕಾರ್ಯವೆಸಗುತ್ತಿವೆ. ಇವಲ್ಲದೆ ಬಾಯಾರುಪದವು, ಮತ್ತು ಪೈವಳಿಕೆ ಸೇರಿ ಎರಡು ಗ್ರಾಹಕರ ಸಹಕಾರಿ ಸ್ಟೋರ್‌ಗಳು ಕಾರ್ಯವೆಸಗುತ್ತವೆ. ಅಡಿಗೆ ಬೆಳೆಗಾರರ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗುವಂತಾಗಲು ಮತ್ತು ಅವರನ್ನು ಮದ್ಯವರ್ತಿಗಳ ಶೋಷಣೆಯಿಂದ ವಿಮುಕ್ತಗೊಳಿಸಲು ಕೇರಳ ಹಾಗೂ ಕರ್ನಾಟಕ ಸರಕಾರದ ಸಹಯೋಗದಿಂದ ಸ್ಥಾಪಿತವಾದ ಕೇಂದ್ರ ಅಡಿಕೆ ಮತ್ತು ಕೊಕ್ಕೋ ಮಾರಾಟ ಮತ್ತು ಸಂಸ್ಕರಣೆ ಸಹಕಾರಿ ಸಂಸ್ಥೆಯ (CAMPCO) ಒಂದು ಶಾಖೆಯು ಬಾಯಾರು ಎಂಬಲ್ಲಿ ಕಾರ್ಯವೆಸಗುತ್ತಿರುವುದು. ಸದ್ರಿ ಪಂಚಾಯತಿನ ವ್ಯಾಪ್ತಿಗೆ ಒಳಪಟ್ಟ ಕೃಷಿಕರು ಭೂ ಅಭಿವೃದ್ಧಿಗೆ ಉಪ್ಪಳ ಎಂಬಲ್ಲಿರುವ ಭೂ ಅಭಿವೃದ್ಧಿ ಬ್ಯಾಂಕನ್ನು ಅವಲಂಬಿಸಿಕೊಂಡಿರುವರು. ಈ ಪಂಚಾಯತಿನ ಜನರ ಗೃಹ ನಿರ್ಮಾಣದ ಸಾಲ ಸೌಲಭ್ಯಕ್ಕೆ ಕುಂಬಳೆಯಲ್ಲಿರುವ ಹೌಸಿಂಗ್ ಸಹಕಾರಿ ಸಂಘವನ್ನು ಮತ್ತು ಜಿಲ್ಲಾ ಸಹಕಾರೀ ಬ್ಯಾಂಕ್ ಉಪ್ಪಳ ಶಾಖೆಯನ್ನೂ ಆಶ್ರಯಿಸಬೇಕಾಗಿದೆ. ಸರಕಾರಿ ಪ್ರೌಢಶಾಲೆ ಪೈವಳಿಕೆ ಮತ್ತು ಸರಕಾರಿ ಪ್ರೌಢಶಾಲೆ ಪೈವಳಿಕೆ ನಗರಗಳಲ್ಲಿ ಶಾಲಾ ಸಹಕಾರಿ ಸಂಘಗಳು ಕಾರ್ಯವೆಸಗುತ್ತಿರುವುವು. ಅಲ್ಲದೆ ಕುರುಡಪದವು ಹೆದ್ದಾರಿ ಶಾಲೆಗಳು. ಗ್ರೂಪ್ ಸೊಸೈಟಿಗಳ ಮುಖಾಂತರ ಕಾರ್ಯವೆಸಗುತ್ತಿರುವುದು. ಸದ್ರಿ ಪಂಚಾಯತಿನ ವ್ಯಾಪ್ತಿಗೆ ಸೇರಿದ ಅಟ್ಟೆಗೋಳಿ ಎಂಬಲ್ಲಿ ತಾಳಬೆಲ್ಲ ತಯಾರಕರ ಸಹಕಾರಿ ಸಂಘವು ಈ ಹಿಂದೆ ಕಾರ್ಯವೆಸಗುತ್ತಿದ್ದು ಪ್ರಕೃತ ನಿಷ್ಕ್ರಿಯವಾಗಿದೆ. ಅಲ್ಲದೆ ಕಾಸರಗೋಡು ತಾಲೂಕು ಕೃಷಿ ಕೈಗಾರಿಕೆ ಅಭಿವೃದ್ಧಿ ಸೊಸೈಟಿ (KTAIDS) ಬಾಯಿಕಟ್ಟೆ ಎಂಬಲ್ಲಿ ಕಾರ್ಯವೆಸಗುತ್ತಿದ್ದು ಈಗ ನಿಷ್ಕ್ರೀಯವಾಗಿರುವುದು. ಇದೇ ರೀತಿ ಮಂಜೇಶ್ವರದ ಮಹಿಳಾ ಕೈಗಾರಿಕಾ ಸಂಘದ ಒಂದು ಶಾಖೆಯು ಪೈವಳಿಕೆಯಲ್ಲಿ ಈ ಹಿಂದೆ ಇದ್ದು ಅದು ಕೂಡ ನಿಷ್ಕ್ರೀಯವಾಗಿದೆ. ಕಯ್ಯಾರು ವಿವಿದೋದ್ದೇಶ ಸಹಕಾರಿ ಸಂಘವು ಕಾರ್ಯವೆಸಗುತ್ತಿದ್ದು, ಈಗ ಕೆಲವೇ ವರ್ಷಗಳ ಹಿಂದೆ ಕಾರ್ಯವೆಸಗುವುದನ್ನು ನಿಲ್ಲಿಸಿದೆ. (Liquidised). ಬಾಯಾರು ಮಡಿಕೆ ತಯಾರಕರ ಸಹಕಾರಿ ಸಂಘವು ಇಚ್ಲಂಗೋಡು ಗ್ರಾಮದ ಪಚ್ಚಂಬಳ ಎಂಬಲ್ಲಿ ಕಾರ್ಯವೆಸಗುತ್ತಿದೆ. ಬಳಕೆದಾರರ ವೇದಿಕೆ (Consumer foaram) ಬಾಯಾರಿನಲ್ಲಿ 1994ರಲ್ಲಿ ಸ್ಥಾಪನೆಯಾಗಿದೆ.

ಸದ್ರಿ ಪಂಚಾಯತಿಗೆ ಎಲ್ಲಾ ವಾರ್ಡಿನ ಅಭಿವೃದ್ಧಿಯ ಬಗ್ಗೆ ಪರಿಶೀಲಿಸಿದಾಗ ಈ ಕೆಳಗಿನ ಸ್ಥಳಗಳಲ್ಲಿ ಸಹಕಾರಿ ಸಂಘಗಳು ಹಾಗೂ ಇನ್ನಿತರ ಸಹಕಾರಿ ಸಂಸ್ಥೆಗಳ ಸ್ಥಾಪನೆಯ ಅಗತ್ಯವು ಕಂಡು ಬರುವುದು.

ಸ್ಥಳದ ಹೆಸರು	ಅಗತ್ಯ ವಿರುವ ಸಹಕಾರಿ ಸಂಘಗಳು
1. ಕುರುಡಪದವು	ಸಹಕಾರಿ ಸಂಘ, ಕ್ಷೀರೋತ್ಪಾದಕ
	ಸಹಕಾರಿ ಸಂಘ, ಗ್ರಾಹಕರ ಸಹಕಾರಿ ಸಂಘ
2. ಚಿಪ್ಪಾರು	ಸಹಕಾರಿ ಸಂಘ, ಕ್ಷೀರೋತ್ಪಾದಕ
	ಸಹಕಾರಿ ಸಂಘ, ಗ್ರಾಹಕರ ಸಹಕಾರಿ ಸ್ಟೋರ್
3. ಕಯ್ಯಾರು	ಸಹಕಾರಿ ಸಂಘ, ಗ್ರಾಹಕರ
	ಸಹಕಾರಿ ಸ್ಟೋರ್
4. ಕುಡಾಲು ಮೇರ್ಕಳ	ಸಹಕಾರಿ ಸಂಘ, ಕ್ಷೀರೋತ್ಪಾದಕ
	ಸಹಕಾರಿ ಸಂಘ, ಗ್ರಾಹಕರ ಸಹಕಾರಿ ಸ್ಟೋರ್
5. ಪೆರ್ಮುದೆ	ಕ್ಷೀರೋತ್ಪಾದಕ ಸಹಕಾರಿ ಸಂಘ,
6. ಲಾಲ್‌ಬಾಗ್	ಗ್ರಾಹಕರ ಸಹಕಾರೀ ಸ್ಟೋರ್
7. ಬಾಯಿಕಟ್ಟೆ	ಗ್ರಾಹಕರ ಸಹಕಾರೀ ಸ್ಟೋರ್
8. ಕನಿಯಾಲ	ಗ್ರಾಹಕರ ಸಹಕಾರೀ ಸ್ಟೋರ್
9. ಬೆರಿಪದವು	ಗ್ರಾಹಕರ ಸಹಕಾರೀ ಸ್ಟೋರ್
10.ಚೇವಾರು	ಕ್ಷೀರೋತ್ಪಾದಕ ಸಹಕಾರೀ ಸಂಘ
	ಗ್ರಾಹಕರ ಸಹಕಾರೀ ಸ್ಟೋರ್
11.ಸುಬ್ಬಯ ಕಟ್ಟೆ	ಗ್ರಾಹಕರ ಸಹಕಾರೀ ಸ್ಟೋರ್
12.ಬಾಯಾರು-ಉಳುವಾನ	ಮಹಿಳಾವಿವಿದೋದ್ದೇಶ ಸಹಕಾರೀ ಸಂಘ

ಇವುಗಳಲ್ಲದೆ ಪೈವಳಿಕೆ ಗ್ರಾಮ ಪಂಚಾಯತಿನ ವ್ಯಾಪ್ತಿಗೆ ಒಳಪಟ್ಟ ವಿವಿಧ ಕಡೆಗಳಲ್ಲಿ ಈ ಕೆಳಗಿನ ಸಹಕಾರೀ ಸಂಘಗಳ ಸ್ಥಾಪನೆಯ ಅಗತ್ಯವು ಕಂಡು ಬರುತ್ತದೆ.

1. ಗೃಹನಿರ್ಮಾಣ ಸಹಕಾರೀ ಸಂಸ್ಥೆ
(ಹೌಸಿಂಗ್ ಸೊಸೈಟಿ)
2. ಭೂ ಅಭಿವೃದ್ಧಿ ಬ್ಯಾಂಕು
(L.D. Bank)
3. ತರಕಾರಿ ಮತ್ತು ಹಣ್ಣು
ಹಂಪಲು ಸಹಕಾರೀ ಸಂಘದ ಶಾಖೆ
4. ಮಹಿಳಾ ಸೊಸೈಟಿಗಳು
5. ಲೇಬರ್ ಕೊಂಟ್ರೇಕ್ಟ್
ಕೋ-ಆಪರೇಟಿವ್ ಸೊಸೈಟಿಯ ಶಾಖೆ
6. ಕೃಷಿ ಉತ್ಪನ್ನ ಮಾರುಕಟ್ಟೆಯ ಸ್ಥಾಪನೆ
7. ನರ್ಸರಿ (ಕಸಿಗಿಡಗಳ ತಯಾರಿಯ ಕೇಂದ್ರ)
8. ಚೇನು ವ್ಯವಸಾಯ ಸಹಕಾರೀ ಸಂಘ

ಸಹಕಾರೀ ರಂಗದ ವಿಕಸನಕ್ಕೆ ಈ ಕೆಳಗಿನ ಕಾರ್ಯಕ್ರಮಗಳನ್ನು ಹಮ್ಮಿಕೊಂಡಲ್ಲಿ ಪ್ರಯೋಜನವಾಗುವುದು.

1. ಸಹಕಾರೀ ಮಹತ್ವದ ಕರೆಯನ್ನು ಮನೆ ಮನೆಗೆ ತಲುಪಿಸುವುದು.

2. ಸಹಕಾರೀ ರಂಗದಲ್ಲಿ ಯುವ ಪೀಳಿಗೆಯನ್ನೂ, ಮಹಿಳೆಯರನ್ನೂ, ಹೆಚ್ಚಿನ ಸಂಖ್ಯೆಯಲ್ಲಿ ಸದಸ್ಯತನ ಮಾಡುವುದು.

3. ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಸಹಕಾರೀ ರಂಗದ ವಿಷಯದ ಬಗ್ಗೆ ಮಹತ್ವ ಕಲ್ಪಿಸುವುದು.

4. ಪ್ರತಿ ಕುಟುಂಬದಲ್ಲಿ ತಲಾ ಇಬ್ಬರಂತಾದರೂ ಸಹಕಾರೀ ಸದಸ್ಯರಾಗಬೇಕು.

5. ಸಹಕಾರೀ ವಿಷಯದ ಬಗ್ಗೆ ಸೆಮಿನಾರ್‌ಗಳನ್ನು ಕರೆದು ಪ್ರಚಾರಗೊಳಿಸುವುದು.

6. ಜಾತಿ, ಮತ, ಭೇದವಿಲ್ಲದ ಪ್ರಾದೇಶಿಕವಾಗಿ ಸರ್ವ ಪಕ್ಷ ಪ್ರಾತಿನಿಧ್ಯವಿರುವ ಆಡಳಿತ ಮಂಡಳಿಯನ್ನು ನೇಮಿಸುವುದು.

7. ಪ್ರತಿಯೊಂದು ವಾರ್ಡಿನಲ್ಲಿ ಸಹಕಾರೀ ಭವನವನ್ನು ನಿರ್ಮಿಸಿ ವಿವಿಧೋದ್ದೇಶದ ಸಹಕಾರೀ ಸಂಸ್ಥೆಗಳನ್ನು ತೆರೆದು ಸೇಲ್ಸ್ ಎಂಡ್ ಪರ್ಚೆಸ್ ವಿಭಾಗವನ್ನು ತೆರೆಯುವುದು. (ಕೃಷಿ ಉತ್ಪನ್ನ, ಗುಡಿ ಕೈಗಾರಿಕೆ ಉತ್ಪನ್ನಗಳಿಗೆ ಪ್ರೋತ್ಸಾಹ ಕೊಡುವುದು)

8. ಸಹಕಾರಿ ರಂಗದಲ್ಲಿ ಕೃಷಿಕರಿಗೆ ಕೃಷಿಯ ವಿಸ್ತೀರ್ಣ. ಆದಾಯಕ್ಕನುಸಾರವಾಗಿ ತಳಹದಿಯಲ್ಲಿ ಸಾಲ ಸಿಗುವಂತಾಗಿಸುವುದು.

9. ಕೃಷಿ ಸಾಲವು ಆಯಾಯ ಬೆಳೆಗಳ ಸಮಯಕ್ಕೆ ಸರಿಯಾಗಿ ವಿತರಿಸುವಂತೆ ಸರಕಾರ ವ್ಯವಸ್ಥೆಗೊಳಿಸುವುದು. L.T., M.T.,Loan ಗಳನ್ನು ವಿತರಿಸಿ ಪ್ರೋತ್ಸಾಹಿಸುವುದು.

10. ಗುಡಿ ಕೈಗಾರಿಕೆಗೆ ಸಂಬಂಧಪಟ್ಟ ಯಾ ಇನ್ನಿತರ Non Agriculture Loan ಸಹಕಾರೀ ಸಂಘಗಳ ಮುಖೇನ ಹೆಚ್ಚು ಹೆಚ್ಚಾಗಿ ವಿತರಿಸಿ ಪ್ರೋತ್ಸಾಹಿಸುವುದು.

11. ಸಮಯಕ್ಕೆ ಸರಿಯಾಗಿ ಸಾಲಮರುಪಾವತಿ ಮಾಡಿದವರಿಗೆ ಗಣ್ಯವಾದ Intrest ಸಬ್ಸಿಡಿ ಕೊಡುವಂತಾಗಬೇಕು.

12. ಪ್ರಕೃತಿ ವಿಕೋಪದಿಂದ ಯಾ ಇನ್ನಿತರ ರೀತಿಯಲ್ಲಿ ನಷ್ಟ ಸಂಭವಿಸಿದಲ್ಲಿ ಸದಸ್ಯರಿಗೆ ಸರಕಾರದಿಂದ ಸಹಾಯವು ಸಹಕಾರ ರಂಗದ ಮುಖೇನ ಉತ್ತಮ ರೀತಿಯಲ್ಲಿ ಶೀಘ್ರವಾಗಿ ವಿತರಿಸುವಂತಾಗಬೇಕು.

13. ಸಹಕಾರೀ ರಂಗದಲ್ಲಿ ಮಹಿಳೆಯರಿಗೆ ಹೆಚ್ಚಿನ ಉದ್ಯೋಗಾವಕಾಶವನ್ನು ಕೊಟ್ಟು ಪ್ರೋತ್ಸಾಹಿಸಿದಲ್ಲಿ ಸಹಕಾರ ಮನೋಭಾವವು ಉಂಟಾಗಬಹುದು.

14. ಸಹಕಾರೀ ರಂಗದ ಮುಖೇನ ಪ್ರಾದೇಶಿಕ ಕೃಷಿಕರಿಗೆ ಆವಶ್ಯವಿರುವ ಗ್ರೂಪ್ ನರ್ಸರಿಗೆ ಪ್ರೋತ್ಸಾಹಿಸುವುದು.

ಮೇಲೆ ಹೇಳಿದ ವಿವಿಧ ಸಹಕಾರೀ ಸಂಘಗಳ ಶಾಖೆಯ ಸ್ಥಾಪನೆಯು ಈ ಪಂಚಾಯತಿನ ವ್ಯಾಪ್ತಿಗೆ ಸೇರಿದ ವಿವಿಧ ಕೇಂದ್ರಗಳಲ್ಲಿ ಅಗತ್ಯವಿರುವುದಾಗಿ ಕಂಡು ಬರುತ್ತದೆ. ಇದರಿಂದಾಗಿ ಈ ಪಂಚಾಯತಿಗೆ ಒಳಪಟ್ಟ ಎಲ್ಲಾ ಜನರಲ್ಲಿ ಸಹಕಾರೀ ತತ್ವದ ಮೇಲೆ ಹೆಚ್ಚಿನ ವಿಶ್ವಾಸ ಹಾಗೂ ನಂಬಿಕೆ ಉಂಟಾಗಲು ಸಹಾಯಕವಾಗುತ್ತದೆ. ಹಾಗೂ ಹೆಚ್ಚಿನ ಸೌಕರ್ಯಗಳು ಲಭಿಸುವಂತಾಗಲು ಸಹಾಯಕವಾಗುತ್ತದೆ.

ಗ್ರಾಮಪಂಚಾಯತ್ ಪರಿಧಿಯೊಳಗಿರುವ ಸಹಕಾರಿ ಸಂಘಗಳ ವಿವರ

Table No. 1

Name of the Society	Date of Starting	No. of Members	Purpose
Paivalike Service Co-op. Bank Ltd	26.02.1939	2731	Primary Agriculture Society
Bayar Service Co.op bank Ltd	1.5.1937	8550	-Do-
The Campco Ltd Bayar	12.11.1973	3600	Purchase of areca & Accepting Deposits
Kumbla Co-op Housing Society	4.3.1956	577	Advance Housing Loans
Milk Producers Co.op. Society			Milk Purchasing/Sales
Bayar	24.7.91	148	"
Paivalike	30.6.91	190	"
Kayyar Jodukall	27.3.1991	307	"

No. of Employees

Table -2

Name of Society	Permanent	Temperory	Total
Paivalike Service Co.op Bank Ltd No. L398	4	-	4
Bayar Service Co.op. Bank Ltd	14	5	19
Kumbla Housing Society Kumbla	2	-	2
Campco Ltd Bayar	5	8	13
Milk Producer Co.op Society Bayar, Paivalike And Kayyar	6	-	6

Table No. 3

Name of Society	Date of Starting	Area	Membership	Share Capital	Deposit	Loan	Profit Loss	Staff
Paivalike Service Co.op Bank Ltd.	26.2.1939	Paivalike Chippar Kayya Villages	2731	418651	3964700	7116500	Loss	4
Bayar Service Co-op Bank Ltd	1.5.1937	Bayar Villages	8550	1023432	17274490	1154167	Profit	19
Kumbla Housing Co.op. Society Kumbla	4.3.1956	Manjeshwar Block	577	897131	-	10351786	"	2
Campco Bayar	12.11.1973		3500	200000			profit	13
Milk Produce Co.op. Socity	30.6.91	Bayar Paivalike Uayar			Nil	Nil		6

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ

ಪೈವಳಿಕೆ ಗ್ರಾಮ ಪಂಚಾಯತಿನ ಜನಕೀಯ ಆಯೋಜನಾ ಸಮಿತಿಯಲ್ಲಿ ಪರಿಶಿಷ್ಟ ಜಾತಿ, ಪಂಗಡಗಳ ಬಗ್ಗೆ ವಿವಿಧ ವಾರ್ಡುಗಳಲ್ಲಿ ಗ್ರಾಮಸಭೆಗಳ ಮುಖೇನ ಪರಿಶಿಷ್ಟರು ಒಂದುಗೂಡಿ ಚರ್ಚಿಸಿ ಅಂಗೀಕರಿಸಿದ ನಿರ್ಣಯಗಳನ್ನು ಕ್ರೋಢೀಕರಿಸಿ ಈ ವರದಿಯನ್ನು ತಯಾರಿಸಲಾಗಿದೆ.

ಪರಿಶಿಷ್ಟ ಜಾತಿ, ವರ್ಗಗಳು ಎಂದೊಡನೆ ಪಕ್ಕನೆ ಸಂಭೋದಿಸುವ ಶಬ್ದ ಹರಿಜನ ಗಿರಿಜನ ಎಂಬುದಾಗಿದೆ. ಈ ಶಬ್ದದ ಪದವನ್ನು ನಿಷೇಧಿಸಿಕೊಂಡು ಕೇಂದ್ರ ಗೃಹ ಖಾತೆಯು 10-2-1982ರಲ್ಲಿ ಹೊರಡಿಸಿದ ಸುತ್ತೋಲೆಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಯಾ ಆಯಾಯ ರಾಜ್ಯ ಭಾಷೆಗಳಲ್ಲಿ ಸಮಾನಾರ್ಥ ಬರುವ ಪದಗಳನ್ನೇ ಉಪಯೋಗಿಸಬೇಕೆಂದಿದ್ದರೂ ನಮ್ಮ ಗ್ರಾಮ ಪ್ರದೇಶಗಳಲ್ಲಿ ಗೃಹಖಾತೆಯ ನಿರ್ಣಯವನ್ನು ಉಲ್ಲಂಘಿಸಿ ಹರಿಜನ ಗಿರಿಜನ ಎಂದೇ ಪರಿಶಿಷ್ಟರು ಸಂಭೋಧಿಸಲ್ಪಡುತ್ತಾರೆ. ಈ ಬಗ್ಗೆ ನಾವು ಮನವಿ ಮಾಡಿಕೊಳ್ಳುವುದೇನೆಂದರೆ ಗೃಹ ಖಾತೆಯ ಈ ನಿರ್ಣಯವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಹರಿಜನ-ಗಿರಿಜನ ಪದಕ್ಕೆ ನಿಷೇಧ ಹೇರಬೇಕು.

ಒಟ್ಟು ನಮ್ಮ ಪಂಚಾಯತು ಪ್ರದೇಶದಲ್ಲಿ ಪರಿಶಿಷ್ಟರ ಬದುಕು ಇಂದಿಗೂ ಅಷ್ಟೇನೂ ಉತ್ತಮವಾಗಿಲ್ಲ. ಈ ವರ್ಗಗಳ ಉನ್ನತಿಗಾಗಿ ಸರಕಾರ ಅದೆಷ್ಟೋ ಯೋಜನೆಗಳನ್ನು ಜ್ಯಾರಿ ಮಾಡಿದೆ. ಗೃಹ ನಿರ್ಮಾಣ, ಕುಡಿಯುವ ನೀರಿನ ವ್ಯವಸ್ಥೆ ಪಾಯಿಖಾನೆ. ವಿದ್ಯುತ್, ಮಾರ್ಗ, ಮಾತ್ರವಲ್ಲದೆ ಲೋಕದ ವಿದ್ಯಮಾನಗಳನ್ನು ವೀಕ್ಷಿಸಬಹುದಾದ ಮಾಧ್ಯಮ ದೂರದರ್ಶನದ ವ್ಯವಸ್ಥೆಯನ್ನು ಒಂದೊಂದು ಕೊಲನಿಗಳಲ್ಲಿ ನೀಡಲ್ಪಟ್ಟಿದೆ. ಎಂತಿದ್ದರೂ ಪರಿಶಿಷ್ಟರು ಒಂದು ರೀತಿಯ ಅಸಮಾನತೆಯ ಬದುಕು ನಡೆಸುತ್ತಿದ್ದಾರೆ.

ಈ ಪಂಚಾಯತ್ ಪ್ರದೇಶದ ಹನ್ನೊಂದು ವಾರ್ಡುಗಳಲ್ಲಿ ಅಂಗೀಕೃತವಾಗಿರುವ ಕೊಲೊನಿಗಳು ತೀರಾ ಕಡಿಮೆಯಿದ್ದು ಕೊಲೊನಿಗಳಾಗಿ ಅಂಗೀಕರಿಸದಿರುವ ಕೊಲೊನಿಗಳು ಹೆಚ್ಚು ಇವೆ. ಏದಾರು, ದೈತೋಟ, ಕನಿಯಾಲ, ಕೊಮ್ಮಂಗಳ ಎಂಬೀ ಕೊಲನಿಗಳಲ್ಲಿ ಕೊಲೊನಿ ಅಭಿವೃದ್ಧಿ ಸವಲತ್ತುಗಳು ಅತ್ಯಲ್ಪವಾಗಿ ದೊರಕಿದ್ದರೂ ಏದಾರು ಕೊಲೊನಿಯನ್ನು ಬಿಟ್ಟು ಉಳಿದ ಕೊಲನಿಗಳು ಅಷ್ಟೇನೂ ಅಭಿವೃದ್ಧಿ ಹೊಂದಿಲ್ಲ. ನಮ್ಮೀ ಪಂಚಾಯತಿನ ಪರಿಶಿಷ್ಟರ ಮನೆಗಳು ದೂರ ದೂರ ಇರುವುದರಿಂದ ಕೊಲನಿ ನಿಬಂಧನೆಗಳಿಗನುಸಾರವಾಗಿ ಒಂದು ಕೊಲನಿಯಾಗಿ ಅಂಗೀಕರಿಸಲು ಸಾಧ್ಯವಾಗಿಲ್ಲ ಎಂಬುದು ಸತ್ಯ. ಈ ವರ್ಗದ ಅಭಿವೃದ್ಧಿಗಾಗಿ ಕೊಲನಿಯನ್ನು ಮಾನದಂಡವಾಗಿರಿಸಿ, ಸಿಗುವ ಸವಲತ್ತುಗಳನ್ನು ಪಡೆಯುವರೇ ಆಯಾ ಪರಿಸರದಲ್ಲಿರುವ ಕುಟುಂಬಗಳನ್ನು ಪರಿಗಣಿಸಿ ಕೊಲನಿಗಳಾಗಿ ಅಂಗೀಕರಿಸಲು ಈ ನಿರ್ದೇಶಗಳನ್ನು ಮುಂದಿಡುತ್ತಿದ್ದೇವೆ.

iನೇ ವಾರ್ಡು : ಒಂದನೇ ವಾರ್ಡಿನಲ್ಲಿ ಸುಮಾರು 11 ಪ.ಜಾ. ಮನೆಗಳು ಮತ್ತು 46 ಪ. ಪಂಗಡಗಳ ಮನೆಯಿದೆ. ಈ ಪೈಕಿ 31 ಪರಿಶಿಷ್ಟ ವರ್ಗ (ಮರಾಠಿ) 15 ಮನೆಗಳು ಕೊರಗ ಜಾತಿಗೆ ಸೇರಿದವುಗಳು. ಈ ಮನೆಗಳು ಪ್ರಾಥಮಿಕ ಅವಶ್ಯಕತೆಗಳಿಂದ ವಂಚಿತವಾಗಿವೆ. ಈ ವಾರ್ಡಿನಲ್ಲಿ ಬರುವ ಪಾಳೆದ ಮೂಲೆ ಪರಿಶಿಷ್ಟ ಪಂಗಡ (ಮರಾಠಿ), ಸಾರ್ತಾಜೆಯಲ್ಲಿ ಪರಿಶಿಷ್ಟ ಪಂಗಡ (ಕೊರಗ)ಕೊಲನಿಗಳಿವೆ. ವಿದ್ಯುತ್, ಸಾರಿಗೆ ಸೌಕರ್ಯ, ವಸತಿ, ಕುಡಿನೀರು ಮುಂತಾದವುಗಳಿಂದ ವಂಚಿತವಾಗಿದೆ.

IIನೇ ವಾರ್ಡು : IIನೇ ವಾರ್ಡಿನಲ್ಲಿ 54 ಪ.ಜಾ. ಮತ್ತು 130 ಪರಿಶಿಷ್ಟ ಪಂಗಡಗಳಿಗೆ ಸೇರಿದವುಗಳು. ಇವುಗಳಲ್ಲಿ 118 ಮನೆಗಳು ಪರಿಶಿಷ್ಟ ಪಂಗಡ (ಮರಾಠಿ) ಜಾತಿಗೆ, 7 ಮನೆಗಳು ಕುಡಿಯ, 5 ಮನೆಗಳು ಕೊರಗ ಜಾತಿಗೆ ಸೇರದವುಗಳಾಗಿವೆ. ಈ ಎಲ್ಲಾ ಮನೆಗಳೂ ಪ್ರಾಥಮಿಕ ಅವಶ್ಯಕತೆಗಳಿಂದ ವಂಚಿತವಾಗಿದೆ. ಈ ವಾರ್ಡಿನಲ್ಲಿ ಈಗ ಇರುವ ದೈತೋಟ ಪರಿಶಿಷ್ಟ ಜಾತಿ, ಗಾಳಿಯಡ್ಕ ಪರಿಶಿಷ್ಟ ಜಾತಿ, ಚಾಕಟೆಗುಳಿ, ಪರಿಶಿಷ್ಟ ಜಾತಿ ಕನಿಯಾಲ ಪರಿಶಿಷ್ಟ ಜಾತಿ, ಶಂಕರಮೂಲೆ, ಪರಿಶಿಷ್ಟ ವರ್ಗ, ಮೇಲಿನ ಪಂಜ, ಪರಿಶಿಷ್ಟ ವರ್ಗ, ಕನಿಯಾಲತ್ತಡ್ಕ ಪರಿಶಿಷ್ಟ ವರ್ಗ, ಚೇರಾಲು ಪರಿಶಿಷ್ಟ ವರ್ಗ, ಕೆದುಕೋಡಿ ಪರಿಶಿಷ್ಟ ವರ್ಗ, ಗುಂಪೆ ಪರಿಶಿಷ್ಟ ವರ್ಗ, ವಾಟೆತ್ತಿಲ ಪರಿಶಿಷ್ಟ ವರ್ಗ, ಬೀರನ ಕೋಡಿ ಪರಿಶಿಷ್ಟ ವರ್ಗ (ಕೊರಗ) ಈ ಕೊಲನಿಗಳು ಈವರೆಗೆ ಕೊಲನಿಗಳಾಗಿ ಅಂಗೀಕರಿಸಿಲ್ಲ. ಆದ್ದರಿಂದ ಈ ಕೊಲನಿಗಳನ್ನು ಅಂಗೀಕರಿಸಬೇಕು.

IIIನೇ ವಾರ್ಡು : 3ನೇ ವಾರ್ಡಿನಲ್ಲಿ ಸುಮಾರು 28 ಪರಿಶಿಷ್ಟ ವರ್ಗ (ಮರಾಠಿ)ಗಳ ಮನೆಗಳೂ, 10 ಪರಿಶಿಷ್ಟ ವರ್ಗ (ಕೊರಗ)ಗಳ ಮನೆಗಳೂ 18 ಪರಿಶಿಷ್ಟ ಜಾತಿಯವರ ಮನೆಯೂ ಇರುವುದು. ಈ ವರ್ಗದ ಜನರು ವಿದ್ಯುತ್‌ನಿಂದ ವಂಚಿತರಾಗಿದ್ದಾರೆ. ಈ ಕುಟುಂಬಗಳಲ್ಲಿ ಯಾರಿಗೂ ಸರಕಾರೀ ಉದ್ಯೋಗವಿಲ್ಲ. ಯಾವುದೇ ಮನೆಗಳಿಗೂ ಪಾಯಿಖಾನೆ ಮತ್ತು ಇತರ ಪ್ರಾಥಮಿಕ ಸೌಲಭ್ಯಗಳಿಲ್ಲ.

IVನೇ ವಾರ್ಡು : ಈ ವಾರ್ಡಿನಲ್ಲಿ ಪರಿಶಿಷ್ಟ ವರ್ಗದವರ 19 ಮನೆಗಳಿದ್ದು, ಈ ಮನೆಗಳು ಮರಾಠಿ ಜಾತಿಗೆ ಸೇರಿದವುಗಳಾಗಿವೆ. ಪರಿಶಿಷ್ಟ ಜಾತಿಯವರ 21 ಮನೆಗಳಿವೆ. ಪ್ರಾಥಮಿಕ ಅವಶ್ಯಕತೆಗಳಿಂದ ಈ ಎಲ್ಲಾ ಮನೆಗಳೂ ವಂಚಿತವಾಗಿವೆ. ಈ ವಾರ್ಡಿನ ಕೊಮ್ಮಂಗಳ ಎಂಬಲ್ಲಿ ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯ ಕೊಲನಿ ಅಲ್ಲದೆ ಚಿಪ್ಪಾರು, ಸುಣ್ಣಾಡ, ಮತ್ತು ಕುರುವೇರಿಗಳನ್ನು ಸೇರಿಸಿಕೊಂಡು ಚಿಪ್ಪಾರು ಪರಿಶಿಷ್ಟ ಜಾತಿ ಕೊಲನಿಯೆಂದೂ, ಅಂಗೀಕರಿಸಬೇಕು.

Vನೇ ವಾರ್ಡು : ಈ ವಾರ್ಡಿನಲ್ಲಿ ಏದಾರು ಎಂಬ ಪರಿಶಿಷ್ಟ ಜಾತಿಯ ಕೊಲನಿ ಸರಕಾರದಿಂದ ಅಂಗೀಕೃತವಾಗಿದ್ದು, ಸರಕಾರದಿಂದ ಸಿಗುವ ಹೆಚ್ಚಿನ ಸೌಲಭ್ಯಗಳು ದೊರಕಿವೆ. ಇಲ್ಲಿ 28 ಮನೆಗಳಿವೆ. 4ಮನೆ ಪರಿಶಿಷ್ಟ ವರ್ಗ (ಮರಾಠಿ) ಮನೆಗಳಿವೆ. ಇನ್ನು ಕುದ್ರೆಕೋಡ್ಲು ಮತ್ತು ತಾರಿಪಡ್ಪು ಸೇರಿಸಿಕೊಂಡು ಒಂದು ಪರಿಶಿಷ್ಟ ಜಾತಿ ಕೊಲನಿಯಾಗಿ ಮಾಡಬೇಕು.

VIನೇ ವಾರ್ಡು : ಈ ವಾರ್ಡಿನಲ್ಲಿ 16 ಪರಿಶಿಷ್ಟ ಜಾತಿ (ಕುಡಿಯ) ಮತ್ತು 25 ಪರಿಶಿಷ್ಟ ವರ್ಗದವರ ಮನೆಗಳಿವೆ. ಈ ವಾರ್ಡಿನಲ್ಲಿ ಸರಿಯಾದ ಸಾರಿಗೆ ಸೌಕರ್ಯವಿಲ್ಲ. ಮತ್ತು ವಸತಿ, ವಿದ್ಯುತ್ ಮತ್ತು ಆರೋಗ್ಯದ ಮಟ್ಟಿನಲ್ಲಿ ತುಂಬಾ ಹಿಂದುಳಿದಿದೆ. ಈ ವಾರ್ಡಿನಲ್ಲಿ ಎಡಕ್ಕಾನ ಪರಿಶಿಷ್ಟ ವರ್ಗ (ಕುಡಿಯ) ಕುಂಡೇರಿ ಮತ್ತು ಕಿನ್ಯಾಲ್ ಪರಿಶಿಷ್ಟ ವರ್ಗಕೊಲನಿಯಾಗಿ ಅಂಗೀಕರಿಸಬೇಕಾಗಿದೆ.

VIIನೇ ವಾರ್ಡು : ಈ ವಾರ್ಡಿನಲ್ಲಿ ಪರಂಬಳ ಎಂಬಲ್ಲಿ ಪರಿಶಿಷ್ಟ ವರ್ಗದ 11 ಮನೆಗಳು ಇವೆ. ಇದರಲ್ಲಿ 7 ಮನೆಗಳು ಕೊರಗ ಜಾತಿಗೆ ಮತ್ತು 4 ಮನೆಗಳು ಮರಾಠಿ ಜಾತಿಗೆ ಸೇರದವುಗಳು. ಪರಂಬಳದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ 11 ಮನೆಗಳು ಇವೆ. ಮೇರ್ಲ ಎಂಬಲ್ಲಿ ಪರಿಶಿಷ್ಟ ಜಾತಿಯವರ 12 ಮನೆಗಳು ಇವೆ. ಈ ಎಲ್ಲಾ ಮನೆಗಳು ಪ್ರಾಥಮಿಕ ಸೌಲಭ್ಯಗಳಿಂದ ವಂಚಿತವಾಗಿವೆ. ಕಯ್ಯಾರು ಕಟ್ಟೆ ಮತ್ತು ಪೊನ್ನೆತ್ತೋಡು ಭಾಗದಲ್ಲಿ 10ರಿಂದ ಮೇಲೆ ಪರಿಶಿಷ್ಟ ಪಂಗಡದ ಮನೆಗಳಿವೆ.

ಅದನ್ನು ಕೊಲನಿಯಾಗಿ ಮಾರ್ಪಡಿಸಬೇಕು.

VIIIನೇ ವಾರ್ಡು : ಈ ವಾರ್ಡಿನಲ್ಲಿ ಚೇವಾರುಪಟ್ಣ ಚೇವಾರು ಮಿತ್ತಡ್ಕಗಳು ಪರಿಶಿಷ್ಟ ಜಾತಿ ಕಾಲನಿಗಳಾಗಿದ್ದು ಪರಕುಮೇರು (ಮರಾಠಿ) ಕುಡ್ತಡ್ಕ (ಕುಡಿಯ), ಮಾಣಿ ಪುಟ್ಟಮಾಣಿ (ಕೊರಗ ಮತ್ತು ಕುಡಿಯ) ಪರಿಶಿಷ್ಟವರ್ಗ ಕಾಲನಿಗಳಾಗಿದೆ.

ಈ ಕಾಲನಿಗಳಿಗೆ ಸರಕಾರದಿಂದ ಮತ್ತು ಪಂಚಾಯತ್‌ನಿಂದ ಕೆಲವೊಂದು ಸವಲತ್ತುಗಳು ಮಾತ್ರ ದೊರಕಿದ್ದರೂ, ಈ ಕೊಲನಿಗಳನ್ನು ಮಾನ್ಯತೆ ಮಾಡಿ ಇನ್ನೂ ಹೆಚ್ಚಿನ ಸೌಕರ್ಯಗಳನ್ನು ಒದಗಿಸಬೇಕಾಗಿದೆ.

IXನೇ ವಾರ್ಡು : ಈ ವಾರ್ಡಿನಲ್ಲಿ ಸುಮಾರು 59 ಪರಿಶಿಷ್ಟ ವರ್ಗ ಮತ್ತು 33 ಪರಿಶಿಷ್ಟ ಜಾತಿ ಮನೆಗಳಿವೆ. ಇವರು ಪ್ರಾಥಮಿಕ ಅವಶ್ಯಕತೆಗಳಿಂದ ವಂಚಿತರಾಗಿದ್ದಾರೆ. ಈ ವಾರ್ಡಿನಲ್ಲಿ ಓಟೆಪಡ್ಪು, ಪರಿಶಿಷ್ಟ ವರ್ಗ (ಮರಾಠಿ), ಪೆರುವೋಡಿ ಪರಿಶಿಷ್ಟ ವರ್ಗ, ಕೊಜಪ್ಪೆ ಪರಿಶಿಷ್ಟ ವರ್ಗ ಕೊಲನಿಗಳಾಗಿ ಅಂಗೀಕರಿಸಬೇಕು. ಮತ್ತು ಈ ಕೊಲನಿಗಳು ವಿದ್ಯುತ್, ಸಾರಿಗೆ, ವಸತಿಯಂತಹ ಪ್ರಾಥಮಿಕ ಸೌಲಭ್ಯಗಳಿಂದ ವಂಚಿತವಾಗಿದೆ.

Xನೇ ವಾರ್ಡು : ಈ ವಾರ್ಡಿನಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಸೇರಿಸಿ, ಸಾಧಾರಣ 100 ಮನೆಗಳು ಇವೆ. ಇವುಗಳಲ್ಲಿ 30% ಮಂದಿ ವಿದ್ಯಾವಂತರಿರುವ ಮನೆಗಳಿವೆ. ಇವುಗಳಲ್ಲಿ ಕೇವಲ 4ಮಂದಿ ಸರಕಾರೀ ನೌಕರರು ಮಾತ್ರ ಇರುವ ಈ ವಾರ್ಡಿನಲ್ಲಿ 25 ನೂತನ ನಿವೇಶನಗಳು ದೊರಕಬೇಕಾಗಿದೆ. ಸ್ವಂತ ಭೂಮಿ ಇಲ್ಲದ ಸಾಧಾರಣ 10ರಷ್ಟು ಕುಟುಂಬಗಳು ಬಾಡಿಗೆ ಮನೆಯಲ್ಲಿ ವಾಸಿಸುತ್ತಿದ್ದಾರೆ. ಇರುವ ಮನೆಗಳ ಪೈಕಿ 6 ಮನೆಗಳಿಗೆ ಮಾತ್ರ ವಿದ್ಯುತ್ ಸಂಪರ್ಕ ಇರುವುದು. ಈ ವಾರ್ಡಿನಲ್ಲಿ ಹೆಚ್ಚಿನವರು ಪ್ರಾಥಮಿಕ ಅವಶ್ಯಕತೆಗಳಿಂದ ವಂಚಿತರಾಗಿದ್ದಾರೆ. ಮಾಣಿಪ್ಪಾಡಿ, ಆವಳ, ಈ ಸ್ಥಳಗಳನ್ನು ಸೇರಿಸಿ ಮಾಣಿಪ್ಪಾಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಕಾಲೊನಿಯಾಗಿ ಮತ್ತು ಅಂಬಿಕಾನ ಮತ್ತು ಬೀಡು ಬೈಲು ಈ ಕಾಲೊನಿಗಳನ್ನಾಗಿ ಅಂಗೀಕರಿಸಬೇಕು.

XIನೇ ವಾರ್ಡು : ಈ ವಾರ್ಡಿನಲ್ಲಿ ಮರಿಕ್ಕೆ ಮತ್ತು ಉರ್ಮಿ ಸೇರಿಸಿ ಮರಿಕ್ಕೆ ಕೊಲನಿಯಾಗಿ ಅಂಗೀಕರಿಸಬೇಕು ಮತ್ತು ಬಾಯಿಕಟ್ಟೆ (ಕಾನ) ಕುಂಡೇರಿ, ಪರಿಶಿಷ್ಟ ವರ್ಗ ಕಾಲನಿಯನ್ನು ಅಂಗೀಕರಿಸಬೇಕು. ಮತ್ತು ಈ ಎಲ್ಲಾ ಮನೆಗಳೂ ಪ್ರಾಥಮಿಕ ಸೌಲಭ್ಯಗಳಿಂದ ವಂಚಿತವಾಗಿವೆ ಮತ್ತು ಆರ್ಥಿಕವಾಗಿ ಹಿಂದುಳಿದಿದೆ.

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಸೇರಿದ ಸಮುದಾಯವು ಎಲ್ಲಾ ರಂಗಗಳಲ್ಲಿಯೂ ಬಹಳಷ್ಟು ಹಿಂದಿದೆ.

ವಿದ್ಯಾಭ್ಯಾಸ : ಮುಂದುವರಿದ ಈ ವೈಜ್ಞಾನಿಕ ಯುಗದಲ್ಲಿ ಪರಿಶಿಷ್ಟಜಾತಿ ಪರಿಶಿಷ್ಟ ವರ್ಗದ ವಿದ್ಯಾಭ್ಯಾಸಕ್ಕಾಗಿ ಸರಕಾರದಿಂದ ಹಲವು ಸವಲತ್ತುಗಳು ದೊರಕುತ್ತಿದ್ದರೂ ಅಷ್ಟೇನೂ ಪ್ರಗತಿಯಾಗಿಲ್ಲ. ಅದಲ್ಲದೆ ಹೆಚ್ಚಿನವರು S.S.L.C. ವಿದ್ಯಾಭ್ಯಾಸವನ್ನು ಮಾಡಿ ತಮ್ಮ ತಮ್ಮ ಕುಟುಂಬದ ಕುಲ ಕಸುಬುಗಳಿಗೆ ಹೊಂದಿಕೊಳ್ಳುತ್ತಾರೆ. ಅದರಂತೆ ಬೆರಳೆಣಿಕೆಯಷ್ಟು ಜನರು ಮಾತ್ರ ಸರಕಾರಿ ಉದ್ಯೋಗದಲ್ಲಿದ್ದಾರೆ. ಈ ಪಂಚಾಯತಿನಲ್ಲಿ ನೆಲೆಸಿರುವ ಯುವಕ ಯುವತಿಯರು ಹೆಚ್ಚಿನವರು ಉತ್ತಮ ವಿದ್ಯಾಭ್ಯಾಸ ಪಡೆದಿದ್ದು ಸರಕಾರೀ ಉದ್ಯೋಗದಿಂದ ವಂಚಿತರಾಗಿದ್ದಾರೆ. ಆದ್ದರಿಂದ ಅರ್ಹತೆಯನುಸಾರವಾಗಿ ಇವರಿಗೆ ಉದ್ಯೋಗ ಒದಗಿಸುವುದು. ಪರಿಶಿಷ್ಟರ ಈ ವಿಭಾಗದಲ್ಲಿ P.D.C. degree ಪಡೆದು ನಿರುದ್ಯೋಗಿಗಳಾಗಿದ್ದಾರೆ. ಇವರಿಗೆ ಮೀಸಲಾತಿಯನುಸಾರ ಉದ್ಯೋಗವನ್ನು ಒದಗಿಸಿ ಕೊಡಬೇಕು.

ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿರುವ ಈ ವರ್ಗಗಳಿಗೆ ಸರಕಾರದಿಂದ ಸಿಗುವ ಸವಲತ್ತುಗಳನ್ನು ಹೇಗೆ ಪಡೆದುಕೊಳ್ಳಬೇಕು ಎಂಬುದು ಸರಿಯಾಗಿ ಗೊತ್ತಿಲ್ಲ. ಅದರಂತೆ ವಿದ್ಯತ್ತಿನ ಕೊರತೆ ಮತ್ತು ಮನೆಯಿಂದ ಸರಿಯಾದ ಪ್ರೋತ್ಸಾಹ, ಸಹಕಾರವಿಲ್ಲದೆ ಈ ವರ್ಗಗಳು ವಿದ್ಯಾಭ್ಯಾಸದಲ್ಲಿ ಹಿಂದೆ ಬಿದ್ದಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳು ವಿದ್ಯಾಭ್ಯಾಸದಲ್ಲಿ ಮುಂದೆ ಬರಲು ಮತ್ತು ಉಳಿದ ಸಮಾಜದ ವ್ಯಕ್ತಿಗಳಂತೆ ಬಾಳಲು ಈ ಸಹಾಯಗಳನ್ನು ನೀಡಬೇಕು.

1. ಪ್ರತೀ ಪರಿಶಿಷ್ಟ ಜಾತಿ, ಪ. ಪಂಗಡ ಕಾಲನಿಗಳಲ್ಲಿ ಅಂಗನವಾಡಿ ಯಾ ಬಾಲವಾಡಿಗಳನ್ನು ತೆರೆಯಬೇಕು.

2. ಪಂಚಾಯತಿನ ಯಾವುದಾದರೂ ಒಂದು ಕಡೆ ಒಂದು ವಾಸ್ತವ್ಯ ಶಾಲೆ (Residential School) ಯನ್ನು ತೆರೆಯಬೇಕು.

3. ವಿದ್ಯಾಭ್ಯಾಸವನ್ನು ಅರ್ಧದಲ್ಲೇ ಕೈ ಬಿಡುವವರಿಗೆ ಉದ್ಯೋಗಪೂರಿತ ವಿದ್ಯಾಭ್ಯಾಸ ನೀಡಲು ತಾಂತ್ರಿಕ ವಿದ್ಯಾಭ್ಯಾಸ ಕೇಂದ್ರವನ್ನು ಪಂಚಾಯತು ಕ್ಷೇತ್ರದಲ್ಲಿ ತೆರೆಯಬೇಕು.

4. ಈ ವರ್ಗದವರಿಗೆ ಶಾಲಾ ಸಮವಸ್ತ್ರವನ್ನು ಪರಿಪೂರ್ಣ ರೀತಿಯಲ್ಲಿ ಒದಗಿಸಬೇಕು.

5. ಪರಿಶಿಷ್ಟ ಜಾತಿ ಮತ್ತು ಪ. ಪಂಗಡದ ಎಲ್ಲಾ ವಿದ್ಯಾರ್ಥಿಗಳಿಗೂ ಪ್ರಾಥಮಿಕ ಶಾಲಾ ಪಠ್ಯ ಪುಸ್ತಕವನ್ನು ಉಚಿತವಾಗಿ ನೀಡಬೇಕು.

ಕೃಷಿ ಭೂಮಿ : ಪ. ಜಾತಿ, ಪ. ವರ್ಗದವರಿಗೆ ಇರುವ ಭೂಮಿಯನ್ನು ಫಲವತ್ತಾಗಿ ಮಾಡಿ ಉತ್ತಮ ಬೆಳೆಯನ್ನು ಪಡೆಯಲು ನೀರಾವರಿ ಸೌಕರ್ಯವನ್ನು ಒದಗಿಸಬೇಕು. ರಿಯಾಯತಿ ದರದಲ್ಲಿ ಪಡೆಯುವ ರಾಸಾಯನಿಕ ಗೊಬ್ಬರಗಳನ್ನು ಸೊಸೈಟಿಯ ಮೂಲಕ ವಿತರಣೆ ಮಾಡಬೇಕು. ಕೃಷಿ ಇಲಾಖೆ ಮುಖೇನ ನೀಡುವ ರಿಯಾಯತಿ ಯೋಜನೆಗಳಲ್ಲಿ ಕಡ್ಡಾಯವಾಗಿ ಇರುವ ಭೂಮಿತಿಯನ್ನು ಸಡಿಲಗೊಳಿಸಬೇಕು ಮತ್ತು ಕೃಷಿ ಆಸಕ್ತರಿಗೆ ಕೃಷಿ ಯೋಗ್ಯ ಭೂಮಿಯನ್ನು ಒದಗಿಸಬೇಕು. ಮತ್ತು ಕೃಷಿಗೆ ಅಗತ್ಯವಿರುವ ಬಾವಿ, ಪಂಪ್‌ಸೆಟ್‌ಗಳನ್ನು ಪಡೆಯಲು ಸರಕಾರವು ಸರಿಯಾದ ಸಮಯದಲ್ಲಿ ಸಹಕಾರ ಒದಗಿಸಬೇಕು. ಸರಿಯಾದ ಕಾಲಕ್ಕೆ ಬಿತ್ತನೆ ಬೀಜಗಳನ್ನು ಒದಗಿಸಿಕೊಡಬೇಕು.

ಆರೋಗ್ಯ : ಆರೋಗ್ಯದ ಮಟ್ಟಿನಲ್ಲಿ ಪರಿಶಿಷ್ಟರು ಬಹಳಷ್ಟು ಹಿಂದೆ ಇದ್ದಾರೆ. ಆರೋಗ್ಯದ ಮಹತ್ವದ ಬಗ್ಗೆ ತಿಳುವಳಿಕೆ ಇಲ್ಲದಿರುವುದು, ಆರ್ಥಿಕವಾಗಿ ಹಿಂದುಳಿದವರು ಮತ್ತು ಹಲವು ದುಶ್ಚಟಗಳಿಗೆ ಬಲಿಯಾಗಿರುವುದು ಇದಕ್ಕೆ ಮುಖ್ಯ ಕಾರಣಗಳು. ಆದುದರಿಂದ ಪರಿಶಿಷ್ಟ ಕಾಲೊನಿಗಳಲ್ಲಿ ಈ ಕೆಳಗಿನ ಸೌಲಭ್ಯಗಳನ್ನು ಒದಗಿಸಬೇಕು.

1. ಆರೋಗ್ಯ ಕೇಂದ್ರಗಳನ್ನು ತೆರೆಯುವುದು.
2. ಎಲ್ಲಾ ಮನೆಗಳಲ್ಲಿ ಪಾಯಿಖಾನೆ ನಿರ್ಮಿಸಲು ಧನಸಹಾಯ ಒದಗಿಸುವುದು.
3. ಪರಿಶಿಷ್ಟರ ಮಕ್ಕಳಿಗೆ ಉತ್ತಮ ಪೌಷ್ಮಿಕ ಆಹಾರ ಒದಗಿಸುವುದು.
4. ಶುಚಿತ್ವಕ್ಕೆ, ಹೆಚ್ಚಿನ ಮಹತ್ವ ನೀಡುವುದು.
5. ದುಶ್ಚಟಗಳ ಪರಿಣಾಮಗಳ ಬಗ್ಗೆ ತಿಳುವಳಿಕೆ ಮೂಡಿಸುವುದು.
6. ಆರೋಗ್ಯ ಕೇಂದ್ರದವರು ತಿಂಗಳಿಗೊಮ್ಮೆ ಕಾಲನಿಯ ಪ್ರತಿ ಮನೆಗಳಿಗೆ ಭೇಟಿ ಕೊಟ್ಟು ಆರೋಗ್ಯದ ಬಗ್ಗೆ ವಿಚಾರಿಸುವುದು.

ವಸತಿ : ಎಲ್ಲಕ್ಕಿಂತಲೂ ಮುಖ್ಯವಾಗಿ ವಸತಿ. ಆದುದರಿಂದ ಪಂಚಾಯತು ಕ್ಷೇತ್ರದಲ್ಲಿ ವಸತಿ ಹೀನರಿಗೆ ವಸತಿಯನ್ನು ನಿರ್ಮಿಸಲು ಸಹಾಯ ಒದಗಿಸಬೇಕು.

1. ಸ್ವಂತ ಮನೆ ಕಟ್ಟಿಕೊಳ್ಳಲು ಸರಕಾರವು ಇದೀಗ ನೀಡುವ ಸಹಾಯಧನದ ಮೊತ್ತವನ್ನು ಕನಿಷ್ಠ 35,000/-ರೂ.ಗಳಿಗೆ ಏರಿಸಬೇಕು.
2. ಸ್ವಂತ ಭೂಮಿ ಇಲ್ಲದವರಿಗೆ ಸೂಕ್ತ ಸಮಯದಲ್ಲಿ ಭೂಮಿ ಒದಗಿಸಿ ಮನೆ ನಿರ್ಮಿಸಲು ಎಲ್ಲಾ ಸಹಾಯವನ್ನು ಕೇಳಿದ ಸಮಯಕ್ಕೆ ಸರಿಯಾಗಿ ಕೊಡಬೇಕು.

ಕುಡಿಯುವ ನೀರು ಮತ್ತು ವಿದ್ಯುತ್ : ಪರಿಶಿಷ್ಟರು ಹೆಚ್ಚಿನವರು ಗುಡ್ಡ, ಬೆಟ್ಟ ಇಳಿಜಾರಿನಲ್ಲಿ ವಾಸಿಸುವವರಾಗಿದ್ದಾರೆ. ಆದ್ದರಿಂದ ಕುಡಿಯುವ ನೀರಿನ ಸಮಸ್ಯೆ ನಮ್ಮ ಪಂಚಾಯತು ಕ್ಷೇತ್ರದಲ್ಲಿರುವ ಹೆಚ್ಚಿನವರಿಗೆ ಇದ್ದೇ ಇದೆ. ಆದುದರಿಂದ ಕಾಲೊನಿಗಳಿಗೆ ನೀರಿನ ವ್ಯವಸ್ಥೆಯನ್ನು ಸರಿಯಾದ ರೀತಿಯಲ್ಲಿ ಒದಗಿಸಬೇಕು. ಕುಡಿಯುವ ನೀರಿನ ಸಮಸ್ಯೆ ಇದ್ದವರಿಗೆ ಧನಸಹಾಯವನ್ನು ಕೊಡಬೇಕು. ಶೇಕಡಾ 25ರಷ್ಟು ಮನೆಗಳಿಗೆ ವಿದ್ಯುತ್ ಸಂಪರ್ಕವಿದ್ದು ಉಳಿದ 75% ಮನೆಗಳು ವಿದ್ಯುತ್‌ನಿಂದ ವಂಚಿತವಾಗಿದೆ. ಆದುದರಿಂದ ಕಾಲೊನಿಗಳಿಗೆ ವಿದ್ಯುತ್ ಸೌಕರ್ಯವನ್ನು ಆದಷ್ಟು ಬೇಗ ಒದಗಿಸಬೇಕು.

ಕೈಗಾರಿಕೆ : ನಿರುದ್ಯೋಗ ನಿವಾರಿಸಲು ಗುಡಿ ಕೈಗಾರಿಕೆಗಳಿಗೆ ಪುನಶ್ಚೇತನ ನೀಡಬೇಕು. ಹಾಳೆಯಿಂದ ಪ್ಲೇಟು, ಪಾತ್ರೆ ಮುಟ್ಟಪ್ಪಾಳೆಗಳನ್ನು ತಯಾರಿಸುವುದು. ಬೆತ್ತ ಹೆಣೆದು ಪೀಠೋಪಕರಣಗಳ ತಯಾರಿ, ಮಡಲಿನಿಂದ ಗೊರಬೆ ತಯಾರಿ, ಬುಟ್ಟಿ ಹೆಣೆಯುವ ಕೇಂದ್ರಗಳು, ಚಾಪೆ ತಯಾರಿ ಕೇಂದ್ರಗಳು ಮುಂತಾದ ಗುಡಿ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಟ್ಟು, ಅವುಗಳಿಗೆ ಸರಿಯಾದ ಮಾರುಕಟ್ಟೆ ನಿರ್ಮಿಸಬೇಕು. ಇದರಿಂದ ನಿರುದ್ಯೋಗಿಗಳಿಗೆ ಉದ್ಯೋಗಾವಕಾಶ ದೊರೆತಂತಾಗುವುದು. ಅದರಂತೆ ಸರಕಾರದ ಅಧೀನದಿಂದ ನಡೆಸಲ್ಪಡುವ ದೊಡ್ಡ ಕೈಗಾರಿಕೆಗಳು ನಮ್ಮ ಪಂಚಾಯತಿನಲ್ಲಿ ಒಂದೂ ಇಲ್ಲ. ಆದುದರಿಂದ ಸರಕಾರದಿಂದ ನಡೆಸಲ್ಪಡುವ ಕೈಗಾರಿಕೆಗಳನ್ನು ಆದಷ್ಟು ತೆರೆಯುವುದು.

ಸಹಕಾರಿ : ಈ ಪಂಚಾಯತು ಪ್ರದೇಶವನ್ನು ಕೇಂದ್ರೀಕರಿಸಿಕೊಂಡು ಪ. ಜಾತಿ/ಪ. ಪಂಗಡ, ವಿವಿಧೋದ್ದೇಶ ಸಹಕಾರಿ ಸಂಘಗಳನ್ನು ಸ್ಥಾಪಿಸಿ, ಈ ವರ್ಗದ ಅಭಿವೃದ್ಧಿಗೆ ಶ್ರಮ ವಹಿಸಬೇಕು. ಅದರಂತೆ ಕಾಲೊನಿಗಳು ಅತ್ಯಧಿಕ ಇರುವ 2, 5, 3 ಮತ್ತು 9ನೇ ವಾರ್ಡುಗಳಲ್ಲಿ ನ್ಯಾಯ ಬೆಲೆ ಅಂಗಡಿಗಳನ್ನು ತೆರೆಯಬೇಕು.

ಸಾಂಸ್ಕೃತಿಕ : ಮೂಲ ನಿವಾಸಿಗಳಾದ ಈ ಪಂಗಡಗಳ ಮೂಲ ಸಂಸ್ಕೃತಿಯು ಆಧುನಿಕ ಯುಗದಲ್ಲಿ ನಾಶವಾಗುತ್ತಿದೆ. ಯಾ ಅಧಃ ಪತನದತ್ತ ಸಾಗುತ್ತಿದೆ. ಇದಕ್ಕೆ ಪ್ರಮುಖ ಕಾರಣಗಳು ಸಾಂಪತ್ತಿಕ ಮತ್ತು ಪ್ರೋತ್ಸಾಹ ಇಲ್ಲದಿರುವುದು. ಇವರ ಸಾಂಸ್ಕೃತಿಕ ಬದುಕಿಗೆ ನೆರವಾಗಲು ಸಹಾಯ ನೀಡಬೇಕು. ಸರಕಾರದಿಂದ ಈ ವರ್ಗದ ಅಭಿವೃದ್ಧಿಗಾಗಿ ಸಿಗುವ ಎಲ್ಲಾ ಸವಲತ್ತುಗಳನ್ನು ದುರ್ವಿನಿಯೋಗವಾಗದ ರೀತಿಯಲ್ಲಿ ಒದಗಿಸಿ ಕೊಡುವುದಕ್ಕಾಗಿ ಶ್ರಮಿಸಬೇಕಾಗಿದೆ. ಅದರಂತೆ ಈ ವರ್ಗಗಳು ಹಿಂದಿನಂತೆ ಪಾರಂಪರ್ಯವಾಗಿ ನಡೆಸುತ್ತಿರುವ ಆಟಿಕಳೆಂಜ, ಜೋಗಿ, ಮಾದಿರ ಕುಣಿತ, ಕರುಂಗೋಲು, ಪಾಡ್ದನ, ಭೂತ ಕಟ್ಟುವುದು, ಗೋಂದೋಳು, ಬಾಲೆ ಶಾಂತುಗಳಂತಹ ಜಾನಪದ ಕಲೆಗಳು ಬೆಳೆಯಲು ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಇದಲ್ಲದೆ ಈ ಕೆಳಗಿನ ಅವಶ್ಯಕತೆಗಳನ್ನು ಆದಷ್ಟು ಬೇಗ ಪೂರೈಸುವುದು.

1. ಸುಮಾರು 17ರಷ್ಟು ಕಾಲೊನಿಗಳನ್ನು ಅಂಗೀಕರಿಸಿ, ಕಾಲೊನಿಗಳ ಮನೆಗಳಿಗೆ ಸಿಗುವ ಸೌಲಭ್ಯಗಳು ಸಿಗುವಂತೆ ಮಾಡಬೇಕು.
2. ವಾಚನಾಲಯಗಳು, ಮಹಿಳಾ ಸಮಾಜಕೇಂದ್ರ ತೆರೆಯಲು ಧನಸಹಾಯ ಒದಗಿಸುವುದು.
3. ಗುಂಪೆ ಪರಿಶಿಷ್ಟ ವರ್ಗ ಸಾದಂಗಾಯ ಪರಿಶಿಷ್ಟ ವರ್ಗ ಕೊಮ್ಮ್ಂಗಳ ಪ. ಜಾತಿ ಇಂತಹ ಕಡೆಗಳಲ್ಲಿ ಶಾಲಾ ಮಕ್ಕಳು 4 ಕಿ.ಮೀ. ಗಳಷ್ಟು ನಡೆದು ವಿದ್ಯಾಭ್ಯಾಸ ಪಡೆಯಬೇಕಾದುದರಿಂದ ಈ ಕಡೆಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ನಿರ್ಮಿಸುವುದು.
4. ಒಂಭತ್ತನೇ ವಾರ್ಡು ಓಟೆಪಡ್ಪುವಿನಲ್ಲಿ ಮುಖ್ಯವಾಗಿ ಹೊಳೆಗೆ ಸಂಕ ನಿರ್ಮಾಣವಾಗಬೇಕು. ಇಲ್ಲಿ ಮಳೆಗಾಲದಲ್ಲಿ ಮಕ್ಕಳು ಶಾಲೆಗಳನ್ನು ತಲಪಲು ಬಹಳ ಕಷ್ಟಪಡುತ್ತಾರೆ. ಅದರಂತೆ ಕಯ್ಯಾರು, 7ನೇ ವಾರ್ಡಿನಲ್ಲಿ ಮೂರು ಕಡೆ ಸಂಕಗಳು ಅತೀ ಅಗತ್ಯ. ಈ ಪ್ರದೇಶಗಳಲ್ಲಿ ಪ.ಜಾತಿ/ಪ. ಪಂಗಡ ಕಾಲೊನಿಗಳಿಗೆ ಸೇರಿದ ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡಲು ತುಂಬಾ ಕಷ್ಟಪಡುತ್ತಾರೆ.
5. ಎಲ್ಲಾ ಕಾಲೊನಿಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಒದಗಿಸಬೇಕು.
6. ಇತರರ ಕೈಪಶದಲ್ಲಿರುವ ಪ. ಜಾತಿ, ಪ. ಪಂಗಡದವರ ಸ್ಥಳವನ್ನು ಕಾನೂನು ರೀತಿಯಲ್ಲಿ ಕಡ್ಡಾಯವಾಗಿ ವಾರೀಸುದಾರರಿಗೆ ಕೊಡಿಸಬೇಕು.
7. ಎಲ್ಲಾ ಕಾಲೊನಿಗಳಿಗೆ ವಿದ್ಯುತ್ ಸೌಕರ್ಯ ಒದಗಿಸಬೇಕು.
8. ಪ.ಜಾತಿ, ಪ. ವರ್ಗದವರಲ್ಲಿ ಈಗ ಕೆಲವು ಕಡೆ ವರದಕ್ಷಿಣೆ ಪಡೆದು ಮದುವೆಯಾಗುವುದಿದೆ. ಅದನ್ನು ವಿರೋಧಿಸಿ ಈ ವರ್ಗದವರು ವರದಕ್ಷಿಣೆ ಪಡೆಯದ ಕಡ್ಡಾಯ ಕಾನೂನನ್ನು ಜಾರಿಗೆ ತರುವುದು.
9. ಸಾಂಸ್ಕೃತಿಕ ಕಲಾಭವನವನ್ನು ನಿರ್ಮಿಸುವುದು.
10. ಈ ಸಮಾಜದಲ್ಲಿ ಒಂದೇ ಮತ, ನ್ಯಾಯ, ನೀತಿ, ಸಮಾನತೆ, ನೆಲೆ ನಿಲ್ಲುವಂತೆ ಸಾಮಾಜಿಕ ನ್ಯಾಯ ಸಿಗುವಂತೆ ಪರಿಸರ ನಿರ್ಮಾಣ ಮಾಡಲು ಪ್ರೋತ್ಸಾಹ ಅತೀ ಅಗತ್ಯ.
11. ಪರಿಶಿಷ್ಟ ಜಾತಿ ಮತ್ತು ಪಂಗಡಗಳು ಅತೀ ಹೆಚ್ಚಿನ ಸಂಖ್ಯೆಯಲ್ಲಿರುವ ಪ್ರದೇಶದ ವಾರ್ಡನ್ನು IHDP ಕಾಲನಿಯಾಗಿ ಪರಿವರ್ತಿಸಿ ಹಿಂದುಳಿದ ಪಂಗಡದವರ ಮೂಲಭೂತ ಸೌಕರ್ಯಗಳನ್ನು ಪೂರೈಸಲು ಸರಕಾರ ಮತ್ತು ಗ್ರಾಮ ಪಂಚಾಯತ್ ಮುಂದಾಗಬೇಕಾಗಿದೆ.

ಉಪಸಂಹಾರ

ರಸ್ತೆ, ಸಂಕ, ಕುಡಿಯುವ ನೀರಿನ ಪೂರೈಕೆಯಾದಲ್ಲಿ ಅಭಿವೃದ್ಧಿಯಾಯಿತೆಂದು ತಿಳಿಯುವುದು ಸರಿಯಲ್ಲ, ಉತ್ಪಾದನಾ ಕ್ಷೇತ್ರವು ಪದ್ಧತಿಯಿಂದ ದೂರವಾಗಿಯೇ ಉಳಿಯಿತು. ಕೃಷಿ ಮತ್ತು ವ್ಯವಸಾಯಕ್ಕೆ ಹೆಚ್ಚು ಮಹತ್ವವಿತ್ತು ಯೋಜನೆಗಳನ್ನು ಅಳವಡಿಸುವುದು ಅನಿವಾರ್ಯವಾಗಿದೆ.

ಅಧಿಕಾರವು ಅಧಿಕಾರಿಗಳ ಕೈಯಿಂದ ಜನತೆಯ ಕೈಗೆ ಬಂದು, ಭ್ರಷ್ಟಾಚಾರದ ಕೈಗಳಿಂದ ವಿಕಸನ ಕ್ಷೇತ್ರವು ಮುಕ್ತವಾಗಿ, ಜನರಲ್ಲಿ ಜಾಗೃತಿಯನ್ನುಂಟು ಮಾಡಿ ಸಹಕಾರದಿಂದ ಕಾರ್ಯಕ್ರಮವನ್ನು ರೂಪಿಸುವ ಮಾರ್ಗವನ್ನು ಕಂಡು ಹಿಡಿಯಬೇಕು.

ಹಣ ಸಂಗ್ರಹವಿಲ್ಲದೆ ಅಭಿವೃದ್ಧಿಯಾಗದು. ಹಣ ಸಂಗ್ರಹಕ್ಕಾಗಿ ಹೊಸ ಮಾರ್ಗವನ್ನು ಕಂಡು ಹಿಡಿಯಲು ಗ್ರಾಮ ಪಂಚಾಯತ್ ಶ್ರಮಿಸಬೇಕು. ಸರಕಾರೇತರ ವಿಜನ್ಸಿಗಳನ್ನು ಕಂಡು ಹಿಡಿದು ಪದ್ಧತಿಗಳನ್ನು ಸಮರ್ಪಿಸಿ ಹಣ ಸಂಗ್ರಹಿಸಲು ಸಾಧ್ಯವಿದೆ.

ಪದ್ಧತಿಗಳನ್ನು ಜಾರಿಗೊಳಿಸುವಲ್ಲಿ ಸತ್ಯ ಸಂಧತೆಯನ್ನು ಪಾಲಿಸಬೇಕು. ಸಾಮಾಜಿಕ ಮತ್ತು ರಾಜಕೀಯ ಸಮಸ್ಯೆಗಳನ್ನು ಸೌಹಾರ್ದತೆಯಿಂದ ಕಾರ್ಯರೂಪಕ್ಕೆ ತರಬೇಕು. ವಿಕಸನ ಉಪಾದಿಗಳನ್ನು ಫಲಪ್ರದವಾಗಿ ಉಪಯೋಗಿಸಿದಲ್ಲಿ ಮಾತ್ರ ಯೋಜನೆಯು ಸಫಲವಾಗುವುದು.

ಸರಿಯಾದ ಮಾನದಂಡಗಳನ್ನು ಆಧರಿಸಿ ಮುಂಗಡಣಾ ಕ್ರಮದಲ್ಲಿ ಪದ್ಧತಿಗಳನ್ನು ಜಾರಿಗೊಳಿಸುವ ಹಕ್ಕು ಪಂಚಾಯತಿಗಿರಬೇಕು.

ಪ್ರಕೃತಿ ಮತ್ತು ಮಾನವ ಸಂಪತ್ತನ್ನು ಉಪಯೋಗಿಸಿ ಚರಿತ್ರೆಯ ವಿಶ್ಲೇಷಣೆ ಮಾಡಿ ವಿಶೇಷ ಬುದ್ಧಿಯಿಂದ ಪದ್ಧತಿಗಳನ್ನು ತಯಾರಿಸಲು ಸಾಧ್ಯವಾಗಬೇಕು. ಗ್ರೂಪ್ ಚರ್ಚೆ ನಡೆಸಿದ ಎಲ್ಲಾ ನಿರ್ದೇಶಗಳನ್ನು ಸ್ಕೀಮುಗಳಾಗಿ, ಪದ್ಧತಿಗಳಾಗಿ ರೂಪಾಂತರಿಸಲು ವಿವಿಧ ಸಮಿತಿಗೆ ಸಾಧ್ಯವಾಗಬಹುದು.

ಸರಕಾರವು ಕೊಡುವ 40% ಪದ್ಧತಿ ಸಾಹಿತ್ಯವು ಕಳೆದ ಕಾಲದ ಪದ್ಧತಿ ವಿಹಿತಕ್ಕಿಂತ ಹೆಚ್ಚಾಗಿದೆ. ಒಂಬತ್ತನೆ ಪದ್ಧತಿಯ ಮೊತ್ತ ಹಣವು 14800 ಕೋಟಿಯಾಗಿದೆ. ಇದರ 40% ಎಂದರೆ 5920 ಕೋಟಿಯಾಗಿದೆ. ಇದರ ಅರ್ಧ 2960 ಕೋಟಿ ಪಂಚಾಯತ್‌ಗೆ ಸಿಗಲು ಸಾಧ್ಯತೆಯಿದೆ. ಕನಿಷ್ಠ 25% ಜನವಿಹಿತ ಲಭಿಸಬಹುದು. ಆದುದರಿಂದ ಪ್ರತಿ ವರ್ಷ ಪಂಚಾಯತ್‌ಗೆ 72.9 ಲಕ್ಷ ಲಭ್ಯವಾಗಬಹುದು. ಇದು ಅಭಿವೃದ್ಧಿ ಕ್ಷೇತ್ರದ ಕ್ಷಿಪ್ರ ಬೆಳವಣಿಗೆಗೆ ಸಹಾಯಕವಾಗುವುದು ಖಂಡಿತ.

ಯೋಜನೆಯು ಕೆಳಹಂತದಿಂದ ಮೇಲು ಹಂತಕ್ಕೆ ಸಾಗುವುದು ಜನತೆಯ ವಿಜಯವಾಗಿದೆ. ಜನತೆಯ ಸಹಕಾರವಿಲ್ಲದೆ ಯಾವ ಯೋಜನೆಯೂ ಪರಿಪೂರ್ಣವಾಗದು.

ಆದುದರಿಂದ ನಮ್ಮ ಪಂಚಾಯತ್‌ನ "ಸಮಗ್ರ ಅಭಿವೃದ್ಧಿ ರೇಷೆ" ಫಲವತ್ತಾಗಿ ನಿರ್ವಹಿಸಲು ಮತ್ತು ಕಾರ್ಯಕ್ರಮ ಗೊಳಿಸಲು ನಾವು ಸಿದ್ಧರಾಗಿಯೇ ತೀರಬೇಕು. ಜನರೆಲ್ಲರೂ ಒಂದಾಗಿ ಪಕ್ಷ ಬೇಧ ವಿಲ್ಲದೆ, ರಾಷ್ಟ್ರೀಯತೀತವಾಗಿ ದುಡಿದಲ್ಲಿ ನಮ್ಮ ಮಹತ್ತಾದ ಪ್ರತೀಕ್ಷೆಯು ಬಹು ಬೇಗನೆ ಈಡೇರಬಹುದೆಂಬ ಪ್ರತ್ಯಾಸೆಯೊಂದಿಗೆ ಸಮಗ್ರ ವಿಕಸನ ವರದಿಯನ್ನು ಸಮರ್ಪಿಸುತ್ತೇವೆ.

ಅಭಿವೃದ್ಧಿ ವರದಿಯನ್ನು ತಯಾರಿಸಲು ವಿವಿಧ ಹಂತಗಳಲ್ಲಿ ಸಹಕರಿಸಿದ ಎಲ್ಲರಿಗೂ ಕೃತಜ್ಞತೆಗಳು.

"ಜೈ ಹಿಂದ್"

Posadi Gumpe

Digantha Mudrana Ltd., Yeyyadi, Mangalore - 575001